ಸಂಪುಟ: 05 ಸಂಚಿಕೆ: 229 ಪುಟಗಳು: 08 ಸೋಮವಾರ 03 ನವೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ಶತಮೂರ್ಖನೂ ಕೂಡ ತನ್ನ ಹೃದಯಕ್ಕೆ ಹತ್ತಿರವಾದ ಕೆಲಸವನ್ನು ಸಾಧಿಸಬಲ್ಲ. ಆದರೆ ಮಾಡುವ ಕೆಲಸವನ್ನು ತನ್ನ ಅಭಿರುಚಿಗೆ ತಕ್ಕಂತೆ ರೂಪಿಸುವವನು ಮಾತ್ರ ಬುದ್ಧಿವಂತ

# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ನನಗೂ ಲಾಲ್‌ಬಾಗ್ ಇತಿಹಾಸ ಗೊತ್ತಿದೆ: ಡಿಸಿಎಂ

• ಉದಯವಾಹಿನಿ, ಬೆಂಗಳೂರು

ಲಾಲ್‌ಬಾಗ್ ಹಾಳು ಮಾಡೋದಕ್ಕೆ ನಾನು ಮೂರ್ಖ ಅಲ್ಲ. ನನಗೂ ಲಾಲ್‌ಬಾಗ್ ಇತಿಹಾಸ ಗೊತ್ತಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿರುಗೇಟು ಕೊಟ್ಟಿದ್ದಾರೆ. ಟನಲ್ ವಿರೋಧಿಸಿ ಬಿಜೆಪಿಯಿಂದ ಸಹಿ ಸಂಗ್ರಹ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಒಳ್ಳೆಯದು ಮಾಡಲಿ, ಜಾಗೃತಿ ಮೂಡಿಸಲಿ. ಅಶೋಕ್ ಅಧ್ಯಕ್ಷತೆಯಲ್ಲೇ 1 ಸಮಿತಿ ಮಾಡುತ್ತೇವೆ. ನಾನು ಸಿದ್ಧನಿದ್ದೇನೆ, ಯರ್‍ಯಾರು ಸದಸ್ಯರು ಬೇಕು ಎಂದು ಅವರೇ ಹೇಳಲಿ. ಇದು ನನ್ನ ಆಸ್ತಿಯಲ್ಲ ಅಥವಾ ಯಾರ ಆಸ್ತಿಯೂ ಅಲ್ಲ. ಇದು ಸಾರ್ವಜನಿಕರಿಗಾಗಿ ಮಾಡುತ್ತಿರುವ ಯೋಜನೆ. ನಾನು



ಎಲ್ಲಾ ಅಧ್ಯಯನ ಮಾಡಿದ್ದೇನೆ. ಲಾಲ್‌ಬಾಗ್‌ನಲ್ಲಿ ಎಷ್ಟು ಜಾಗ ಉಪಯೋಗ ಆಗ್ತಿದೆ, ಎಷ್ಟು ಉಪಯೋಗ ಆಗ್ತಿಲ್ಲ ಎಲ್ಲಾ ಗೊತ್ತಿದೆ. ಅವರು ರಾಜಕಾರಣ ಮಾಡಬೇಕು. ಅವರದ್ದು ರಾಜಕಾರಣ, ಯಾವುದೇ ಅಭಿವೃದ್ಧಿ ಬೇಕಿಲ್ಲ. ಟನಲ್ ಮಾಡಿದ್ದಕ್ಕೆ ಅಲ್ವಾ ಮೆಟ್ರೋ ಮಾಡಲು ಆಗಿದ್ದು. ಬಿಜೆಪಿಯವರು ತಂದಿದ್ದಾ ಮೆಟ್ರೋ? ದಾಖಲೆ ತೆಗೆಸಿ ನೋಡಲಿ. ಎಸ್.ಎಂ.ಕೃಷ್ಣ ಕಾಲದಲ್ಲಿ 10 ದೇಶ ತಿರುಗಿ ನಾನು ವರದಿ ಕೊಟ್ಟೆ. ಕೇಂದ್ರದಲ್ಲಿ



ವಾಜಪೇಯಿ, ಅನಂತ್‌ಕುಮಾರ್‌ಗೆ ವರದಿ ಕೊಟ್ಟು ಬಂದ್ವಿ. ಜಾರ್ಜ್ ಕಾಲದಲ್ಲಿ ಸ್ಟೀಲ್ ಫ್ಲೈಓವರ್‌ಗೆ ವಿರೋಧ ಮಾಡಿದ್ರು ಎಂದು ಕಿಡಿಕಾರಿದರು. ಎಂಪಿ ಮಾತಾಡ್ತಾ ಇದಾನೆ, ರೈಲು ಮಾಡಿ ಅಂತಾನೆ, ಎಲ್ಲಿದೆ ಜಾಗ? ಕೇಂದ್ರ ಸರ್ಕಾರ ಮಾಡಲಿ. ಟ್ರಾಯ್ ವ್ಯವಸ್ಥೆ ಮಾಡಿ ಅಂತಾರೆ, ದಿನಕ್ಕೆ 100 ಜನ ಸಾಯ್ತಾರೆ ಅಷ್ಟೇ. ಪ್ರಾಯೋಗಿಕವಾಗಿ ಅದು ಸಾಧ್ಯವಿಲ್ಲ. ಬಿಆರ್‌ಟಿಎಸ್ ಮಾಡಲು ಆಗುತ್ತಾ? ಅವನಿಗೆ ತಲೆ ಇದೆಯಾ? ಸಹಿ ಸಂಗ್ರಹ ಮಾಡ್ತಿದ್ದಾರೆ, ನನಗೂ ಕರೆ ಕೊಡೋದಕ್ಕೆ ಬರುತ್ತೆ. ಆರ್‌ಎಸ್‌ಎಸ್ ಇಲ್ಲ ಅಂದ್ರೆ, ಅವರ ಪಾರ್ಟಿ ಝೀರೋ ಎಂದು ಹರಿಹಾಯ್ದರು. ತೇಜಸ್ವಿ ಸೂರ್ಯ ದೊಡ್ಡ ಲೀಡರ್, ಬಹಳ ಬುದ್ಧಿವಂತ, ಫ್ಲೈಟ್ ಡೋರ್ ಓಪನ್ ಮಾಡ್ಬಿಟ್ಟ. ಕಾರು ಬೇಡ ಅಂತಿದ್ದ, ಆಮೇಲೆ ಮದ್ವೆ ಆಗ್ತಾ ಇದೀನಿ ಹೊಸ ಕಾರು ಬೇಕು ಅಂತಾ ಅರ್ಜಿ ಹಾಕಿದ್ದ. ಅಮೆರಿಕಕ್ಕೆ ಹೋಗಿ ಟ್ರಂಪ್ ಬಳಿ ಉಗಿಸಿಕೊಂಡ. ಅನುಮತಿ ಇಲ್ಲದೆ ಹೋಗಿ ಉಗಿಸಿಕೊಂಡು ಬಂದ. ನಿನಗ್ಯಾಕೆ ಹೊಸ ಕಾರು ಬೇಕಿತ್ತು? ನೀನು ಮೆಟ್ರೋದಲ್ಲಿ ಓಡಾಡು. ಎಲ್ಲಾ ಬಿಜೆಪಿಯವರು ಕಾರು ಬಿಟ್ಟು ಓಡಾಡಲಿ ಎಂದು ವಾಗ್ದಾಳಿ ನಡೆಸಿದರು.

**ಹಾಳು ಮಾಡೋದಕ್ಕೆ ಮೂರ್ಖ ಅಲ್ಲ**

**ಉದಯ ವಾಹಿನಿ**
**ವರದಿಗಾರರು ಬೇಕಾಗಿದ್ದಾರೆ**
ಎಂಎ., ಜರ್ನಲಿಸಂ ಮಾಡಿರುವಂತಹ ಉತ್ಸಾಹಿ ಯುವಕ ಯುವತಿಯರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೆಲಸ ಮಾಡುವಂತಹ
**ರಾಜ್ಯದಾದ್ಯಂತ ವರದಿಗಾರರು ಬೇಕಾಗಿದ್ದಾರೆ**
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9448225696
+91 8035841833
#: 1230 'JAYAMAHAL 13th cross, 2nd phase, Girinagar, Bangalore-560085. (Near to Bangalore one park, opposite mandya medical)
udayavahininews@gmail.com

## ಪಿಎಫ್‌ಐ ನಿಷೇಧಕ್ಕೆ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದ್ದರೇ?

• ಉದಯವಾಹಿನಿ, ಬೆಂಗಳೂರು


ಪಿಎಫ್‌ಐ ಮತ್ತು ಎಸ್‌ಡಿಪಿಐನಂತಹ ಸಮಾಜಘಾತುಕ ಸಂಘಟನೆಗಳನ್ನು ನಿಷೇಧ ಮಾಡಿ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಎಂದಾದರೂ ಕೇಳಿದ್ದಾರೆಯೇ' ಎಂದು ವಿಧಾನ ಪರಿಷತ್ತಿನ ವಿರೋಧಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಪ್ರಶ್ನಿಸಿದ್ದಾರೆ. ಆರ್‌ಎಸ್‌ಎಸ್ ನಿಷೇಧಿಸಬೇಕು ಎಂಬ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಖಂಡನೀಯ. ಸಮಾಜಘಾತುಕ ಸಂಘಟನೆಗಳಾದ ಪಿಎಫ್‌ಐ ಮತ್ತು ಎಸ್‌ಡಿಪಿಐ ಅನ್ನು ನಿಷೇಧಿಸಬೇಕು. ಅದರ ಬದಲಿಗೆ ಈ ಸಂಘಟನೆಗಳ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳನ್ನು ಕಾಂಗ್ರೆಸ್ ಸರ್ಕಾರ ಹಿಂಪಡೆದಿದೆ' ಎಂದಿದ್ದಾರೆ. 'ಕರಾವಳಿ ಕರ್ನಾಟಕ ಮತ್ತು ಕೇರಳದಲ್ಲಿ ನೂರಾರು ಹಿಂದೂ ಕಾರ್ಯಕರ್ತರ ಹತ್ಯೆ ಹಿಂದೆ ಈ ಎರಡು ಸಂಘಟನೆಗಳ ಕೈವಾಡವಿದೆ. ಬೆಂಗಳೂರಿನ ಡಿ.ಜೆ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ಪೊಲೀಸ್ ಠಾಣೆ ಮತ್ತು ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿದ ಪ್ರಕರಣಗಳಲ್ಲೂ ಈ ಸಂಘಟನೆಗಳು ಇದ್ದವು. ಆ ಪ್ರಕರಣಗಳನ್ನು ಹಿಂದೆ ಪಡೆದ ರಾಜ್ಯ ಸರ್ಕಾರದ ನಡೆಯನ್ನು ಮಲ್ಲಿಕಾರ್ಜುನ ಖರ್ಗೆ ಅವರು ಪ್ರಶ್ನಿಸಬೇಕು' ಎಂದು ಆಗ್ರಹಿಸಿದ್ದಾರೆ.

## ಕರ್ನಾಟಕಕ್ಕೆ ಮತ್ತೊಂದು ರಾಷ್ಟ್ರಮಟ್ಟದ ಪ್ರಶಸ್ತಿ ಗರಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕವು 2024-25ನೇ ಸಾಲಿನಲ್ಲಿ ಅತಿಹೆಚ್ಚು ಪವನ ವಿದ್ಯುತ್ ಸಾಮರ್ಥ್ಯವನ್ನು ಅಳವಡಿಸಿಕೊಂಡು ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದೆ. ವಿಂಡ್ ಟರ್ಬೈನ್ ತಯಾರಕರ ಸಂಘ ನೀಡಿದ ಈ ಗೌರವವನ್ನು ಶಾಸಕ ಟಿ.ಡಿ.ರಾಜೇಗೌಡ ಮತ್ತು ಕೆ.ಪಿ.ರುದ್ರಪ್ಪಯ್ಯ ಅವರು ಸ್ವೀಕರಿಸಿದರು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಈ ಸಂದರ್ಭದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಧನೆಗೆ ಸರಕಾರ ಮತ್ತು ಉದ್ಯಮಗಳ ಸಹಯೋಗದ ಅಗತ್ಯವನ್ನು ಒತ್ತಿ ಹೇಳಿದರು. ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ರಾಜ್ಯ ಸರಕಾರದ ಬದ್ಧತೆಯನ್ನು ಪ್ರಶಂಸಿಸಿದರು.

ವಿಂಡ್ ಟರ್ಬೈನ್ ತಯಾರಕರ ಸಂಘ (ಐಡಬ್ಲ್ಯುಟಿಎಂಎ) ಚೆನ್ನೈನ ಟ್ರೇಡ್ ಸೆಂಟರ್‌ನಲ್ಲಿ ಆಯೋಜಿಸಿದ್ದ 'ವಿಂಡರ್ಜಿ ಇಂಡಿಯಾ-2025'ರ 7ನೇ ಆವೃತ್ತಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಅಧ್ಯಕ್ಷರೂ ಆದ ಶಾಸಕ ಟಿ.ಡಿ.ರಾಜೇಗೌಡ ಮತ್ತು ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಅವರಿಗೆ ಪ್ರಶಸ್ತಿ ನೀಡಿ ಅಭಿನಂದಿಸಿದರು.



# ಲೂಟಿಕೋರ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಗೆ ನಕಾರ

## ಸಚಿವರಿಂದ ಕಡತಯಜ್ಞ; ವರ್ಗಾವಣೆ ದಂಧೆ ಆರೋಪ ಮಾಡಿದ ಬಿಜೆಪಿ!

ನವೆಂಬರ್ ಕ್ರಾಂತಿ ಹಿನ್ನೆಲೆಯಲ್ಲಿ ಸಚಿವರಿಂದ ವರ್ಗಾವಣೆ ದಂಧೆ ಆರೋಪ ಮಾಡಿದ ಬಿಜೆಪಿ

**ಕಾಂಗ್ರೆಸ್‌ಗೆ ಜನಕಲ್ಯಾಣಕ್ಕಿಂತ ಸ್ವಕಲ್ಯಾಣವೇ ಮುಖ್ಯ**

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಈಗ ನವೆಂಬರ್ ಕ್ರಾಂತಿಯ ಮಾತುಗಳು ಕೇಳಿಬರುತ್ತಿವೆ. ಸಿಎಂ ಬದಲಾವಣೆ ವಿಚಾರ ಮುನ್ನೆಲೆಗೆ ಬಂದಿದ್ದು, ಈ ಮಧ್ಯೆ ಪ್ರತಿಪಕ್ಷ ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ವರ್ಗಾವಣೆ ದಂಧೆ ಆರೋಪ ಮಾಡಿದೆ.

ಹೌದು, ನವೆಂಬರ್ ಕ್ರಾಂತಿಯ ಭರದಲ್ಲಿ, ರಾಜ್ಯ ಕಾಂಗ್ರೆಸ್ ಸರ್ಕಾರದ ಸಚಿವರು ವರ್ಗಾವಣೆ ದಂಧೆಯಲ್ಲಿ ನಿರತರಾಗಿದ್ದಾರೆ ಎಂದು ಪ್ರತಿಪಕ್ಷ ಬಿಜೆಪಿ ಗಂಭೀರ ಆರೋಪ ಮಾಡಿದೆ. ಸಚಿವರು ಕುರ್ಚಿ ಉಳಿಸಿಕೊಳ್ಳುವ ಆತುರದಲ್ಲಿ ವರ್ಗಾವಣೆ ದಂಧೆಗೆ ಚಾಲನೆ ನೀಡಿದ್ದಾರೆ ಎಂಬುದು ಬಿಜೆಪಿಯ ಆರೋಪವಾಗಿದೆ.





ಈ ಕುರಿತು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ರಾಜ್ಯ ಬಿಜೆಪಿ ಘಟಕ, ಸಚಿವರು ಸ್ವಾರ್ಥದ ಜೇಬು ತುಂಬಿಸಿಕೊಳ್ಳಲು ಮುಂದಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಇದಕ್ಕೆ ಮೌನ ಸಮ್ಮತಿ ನೀಡಿದ್ದಾರೆ ಎಂದು ತೀವ್ರ ವಾಗ್ದಾಳಿ ನಡೆಸಿದೆ. ಬಿಜೆಪಿಯ ವರ್ಗಾವಣೆ ದಂಧೆ ಆರೋಪ, ರಾಜ್ಯದಲ್ಲಿ ಹೊಸ ರಾಜಕೀಯ ಸಂಚಲನ ಸೃಷ್ಟಿಸಿದೆ.

**ಬಿಜೆಪಿ ಟ್ವೀಟ್‌ನಲ್ಲೇನಿದೆ?:**

ನವೆಂಬರ್ ಕ್ರಾಂತಿಗೆ ಕ್ಷಣಗಣನೆ ಶುರುವಾಗುತ್ತಿದ್ದಂತೆ ಲೂಟಿಕೋರ ಕಾಂಗ್ರೆಸ್ ಸರ್ಕಾರದ ಧನದಾಹಿ ಸಚಿವರು ಕಡತಯಜ್ಞ ಆರಂಭಿಸಿ, ಕಡೆಯ ಗಳಿಗೆಯಲ್ಲಿ ಸಾಧ್ಯವಾದಷ್ಟು ದೋಚುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಕಳೆದ ಎರಡುವರೆ ವರ್ಷದಲ್ಲಿ ಅಭಿವೃದ್ಧಿಯತ್ತ ಗಮನ ಹರಿಸದ ಸೋಮಾರಿ ಸಚಿವರು, ಈಗ ಕುರ್ಚಿ ಕಳೆದುಕೊಳ್ಳುವ ಆತುರದಲ್ಲಿ ವರ್ಗಾವಣೆ ದಂಧೆಯಲ್ಲಿ ಬ್ಯುಸಿಯಾಗಿ ಸ್ವಾರ್ಥದ ಜೇಬು ತುಂಬಿಸಿಕೊಳ್ಳತೊಡಗಿದ್ದಾರೆ ಎಂದು ಬಿಜೆಪಿ ಕಿಡಿಕಾರಿದೆ.

ಮುಂದುವರೆದು, ಕಾಂಗ್ರೆಸ್ಸಿಗರಿಗೆ ಜನಕಲ್ಯಾಣಕ್ಕಿಂತ ಸ್ವಕಲ್ಯಾಣವೇ ಮುಖ್ಯವಾಗಿದೆ. ದುರುಳ ಕಾಂಗ್ರೆಸ್ ಸರ್ಕಾರ ತೊಲಗುವವರೆಗೂ ಕನ್ನಡಿಗರಿಗೆ ನೆಮ್ಮದಿ ಇಲ್ಲ ಎಂದು ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಅದೇ ರೀತಿ ಮತ್ತೊಂದು ಎಕ್ಸ್ ಪೋಸ್ಟ್‌ನಲ್ಲಿ, ರಾಜ್ಯ ಕಾಂಗ್ರೆಸ್ ಸರ್ಕಾರದ ಅವಾಸ್ತವಿಕ ಭರವಸೆಗಳಿಂದ ಅಭಿವೃದ್ಧಿ ಮಾಯವಾಗಿದೆ. ಅನುದಾನ ಅರಣ್ಯರೋದನವಾಗಿದೆ ಎಂಬ ಸತ್ಯವನ್ನು ಕಾಂಗ್ರೆಸ್ ನಾಯಕರೇ ಒಪ್ಪಿಕೊಂಡು, ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಧ್ವನಿ ಎತ್ತಿದ್ದಾರೆ ಎಂದು ಬಿಜೆಪಿ ಪ್ರತಿಪಾದಿಸಿದೆ. ಹಾಗೆಯೇ ಅಭಿವೃದ್ಧಿ ಶೂನ್ಯ ಹಾಗೂ ದಿವಾಳಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರು ಆಕ್ರೋಶಗೊಂಡಿದ್ದು, ಹಾದಿ ಬೀದಿಯಲ್ಲಿ ಶಾಪ ಹಾಕುತ್ತಿದ್ದಾರೆ ಎಂದು ಬಿಜೆಪಿ ಹರಿಹಾಯ್ದಿದೆ. ನವೆಂಬರ್ ಕ್ರಾಂತಿ ವಿಚಾರವಾಗಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಬಿರುಸಿನ ಚಟುವಟಿಕೆಗಳು ನಡೆಯುತ್ತಿರುವಂತೆ, ಪ್ರತಿಪಕ್ಷ ಬಿಜೆಪಿ ಕೂಡ ಈ ಅವಕಾಶವನ್ನು ರಾಜ್ಯ ಸರ್ಕಾರದ ವಿರುದ್ಧ ತನ್ನ ವಾಕ್ಸಮರವನ್ನು ತೀವ್ರಗೊಳಿಸಿರುವುದು ರಾಜ್ಯದ ಜನರ ಗಮನ ಸೆಳೆದಿದೆ. ನವೆಂಬರ್ ಕ್ರಾಂತಿಯ ವಿಚಾರವಾಗಿ ಈಗಾಗಲೇ ಹಲವು ಕಾಂಗ್ರೆಸ್ ನಾಯಕರು ಹೇಳಿಕೆಗಳನ್ನು ನೀಡಿದ್ದು, ಅನೇಕರು ಸಿಎಂ ಬದಲಾವಣೆ ಸಾಧ್ಯತೆಯನ್ನು ತಳ್ಳಿ ಹಾಕಿದ್ದಾರೆ. 2028ರಲ್ಲೂ ಸಿದ್ದರಾಮಯ್ಯ ನೇತೃತ್ವದಲ್ಲೇ ಚುನಾವಣೆ ಎಂದು ಸಂಸದ ಡಿಕೆ ಸುರೇಶ್ ಸ್ಪಷ್ಟನೆ ನೀಡಿದ್ದಾರೆ. ಆದಾಗ್ಯೂ, ಕೆಲವು ಶಾಸಕರು ನವೆಂಬರ್ ಕ್ರಾಂತಿಯ ಸುಳಿವು ನೀಡುತ್ತಾ ಕುತೂಹಲವನ್ನು ಜೀವಂತವಾಗಿರಿಸಿದ್ದಾರೆ ಎಂದು ಹೇಳಬಹುದು.



### ಡಿಸಿಎಂ ಡಿಕೆಶಿ ವಾರ್ನಿಂಗ್

ಕಾಂಗ್ರೆಸ್‌ನಲ್ಲಿ ಪವರ್ ಫೈಟ್ ಕುರಿತ ಹೇಳಿಕೆ ಕೊಡುತ್ತಿರುವವರಿಗೆ ಡಿಸಿಎಂ ಡಿಕೆಶಿ, ಎರಡನೇ ಬಾರಿ ವಾರ್ನಿಂಗ್ ಸಂದೇಶ ಕೊಟ್ಟಿದ್ದಾರೆ. ಆದ್ರೆ, ಡಿಕೆಶಿ ಅವರ ಈ ಸಂದೇಶವೂ ಕ್ರಾಂತಿ ಹಾಗೂ ಕುರ್ಚಿ ಒಪ್ಪಂದ ಬಗ್ಗೆ ಮಹತ್ವದ ಸುಳಿವು ಕೊಟ್ಟ ಹಾಗಿದೆ. ಈ ನಡುವೆ ಸತೀಶ್ ಜಾರಕಿಹೊಳಿ ನಾಳೆ ದೆಹಲಿಗೆ ತೆರಳುತ್ತಿರುವುದು ಕುತೂಹಲ ಮೂಡಿಸಿದೆ. ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ವಿಚಾರ ಸಾಕಷ್ಟು ಚರ್ಚೆಗೆ ಎಡೆಮಾಡಿಕೊಟ್ಟಿದೆ. ಕಳೆದ ಕೆಲ ದಿನಗಳಿಂದ ಸಚಿವರು, ಶಾಸಕರು ಹಲವು ರೀತಿಯಲ್ಲಿ ಹೇಳಿಕೆ ಕೊಡುತ್ತಿದ್ದಾರೆ. ಪಕ್ಷದ ನಾಯಕತ್ವ ಬಗ್ಗೆ ಹೇಳಿಕೆ ಕೊಡುತ್ತಿರುವವರಿಗೆ ಡಿಸಿಎಂ ಡಿಕೆಶಿ ವಾರ್ನಿಂಗ್ ಕೊಟ್ಟಿದ್ದಾರೆ.



### ಮಹತ್ವದ ಸುಳಿವು ಬಿಟ್ಕೊಟ್ರಾ

ನಾಯಕತ್ವ ಬದಲಾವಣೆ ವಿಚಾರವಾಗಿ ಯಾರು ದಣಿವಾಗೋದು ಬೇಡ. ಕ್ರಾಂತಿ ಬಗ್ಗೆ ತಾವು ಹಾಗೂ ಸಿಎಂ ಮಾತಾಡಿದರಷ್ಟೇ ಅಧಿಕೃತ. ಅದಕ್ಕಷ್ಟೇ ಬೆಲೆ. ನಾವಿಬ್ರು ಏನು ಮಾತಾಡಿಕೊಂಡಿದ್ದೇವೆಯೋ ಅದರಂತೆ ನಡೆದುಕೊಳ್ತೇವೆ ಅಂತ ಡಿಕೆಶಿ ಗುಡುಗಿದ್ದಾರೆ. ಡಿಕೆಶಿ ಅವರ ಈ ಹೇಳಿಕೆ ಈಗ ಸದ್ದು ಮಾಡುತ್ತಿದೆ. ಹೇಳಿಕೆ ವೀರರಿಗೆ ವಾರ್ನ್ ಮಾಡಲು ಹೋಗಿ ಡಿಕೆಶಿ ಅಧಿಕಾರ ಒಪ್ಪಂದದ ಬಗ್ಗೆ ಮಹತ್ವದ ಸುಳಿವು ಬಿಟ್ಕೊಟ್ರಾ ಅನ್ನೋ ಚರ್ಚೆ ನಡೆಯುತ್ತಿದೆ.

### ಕಾಂಗ್ರೆಸ್‌ನಲ್ಲಿ ಬೆಳವಣಿಗೆ ಚುರುಕು

ನಾಯಕರ ದೆಹಲಿ ಭೇಟಿ ಪರ್ವ ಮುಂದುವರೆದಿದೆ. ಡಿಕೆಶಿ, ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ದೆಹಲಿ ಭೇಟಿ ಬೆನ್ನಲ್ಲೇ ಸಚಿವ ಸತೀಶ್ ಜಾರಕಿಹೊಳಿಯವರೂ ದೆಹಲಿ ಫ್ಲೈಟ್ ಹತ್ತುತ್ತಿದ್ದಾರೆ. ನಾಳೆ ಬೆಳಗ್ಗೆ ದೆಹಲಿಗೆ ತೆರಳಲಿರೋ ಸತೀಶ್ ಜಾರಕಿಹೊಳಿ, ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬದಲಾವಣೆ, ಪಕ್ಷದ ವಿದ್ಯಮಾನಗಳ ಕುರಿತು ಸತೀಶ್ ಜಾರಕಿಹೊಳಿ ಖರ್ಗೆಯವರ ಜೊತೆ ಚರ್ಚೆ ಮಾಡಲಿದ್ದಾರೆ ಎನ್ನಲಾಗಿದೆ. ಸತೀಶ್ ಜಾರಕಿಹೊಳಿ ತಮ್ಮೊಂದಿಗೆ ಕೆಲ ಆಪ್ತ ಶಾಸಕರು, ಮಾಜಿ ಶಾಸಕರನ್ನೂ ಕರೆದೊಯ್ಯುತ್ತಿರೋದು ಕುತೂಹಲ ಮೂಡಿಸಿದೆ.

## ಬೆಂಗಳೂರು-ಕೊಚ್ಚಿ ವಂದೇ ಭಾರತ್ ಶೀಘ್ರದಲ್ಲೇ ಸಾರ್ವಜನಿಕ ಸೇವೆ ಪ್ರಾರಂಭ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವಿನ ಹೈಸ್ಪೀಡ್ ರೈಲು ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಸಲುವಾಗಿ, ಭಾರತೀಯ ರೈಲ್ವೆ ಸಚಿವಾಲಯವು ಬೆಂಗಳೂರು-ಕೊಚ್ಚಿ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಅಧಿಕೃತ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಶೀಘ್ರದಲ್ಲೇ ಸಾರ್ವಜನಿಕ ಸೇವೆ ಪ್ರಾರಂಭಿಸಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್, ದಕ್ಷಿಣ ಭಾರತದಲ್ಲಿ ಸಂಚಾರ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುವ ನಿರೀಕ್ಷೆಯಿದೆ.



ಶುಕ್ರವಾರ ಹೊರಡಿಸಲಾದ ಅಧಿಸೂಚನೆಯ ಪ್ರಕಾರ, ರೈಲು ಸಂಖ್ಯೆ 26651 ಕೆಎಸ್‌ಆರ್ ಬೆಂಗಳೂರು-ಎರ್ನಾಕುಲಂ ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರತಿ ದಿನ ಬೆಳಗ್ಗೆ 5:10ಕ್ಕೆ ಬೆಂಗಳೂರು ನಿಲ್ದಾಣದಿಂದ ಹೊರಳಿ, ಮಧ್ಯಾಹ್ನ 1:50ಕ್ಕೆ ಎರ್ನಾಕುಲಂ ಜಂಕ್ಷನ್ ತಲುಪಲಿದೆ. ಮರಳಿ ಪ್ರಯಾಣಕ್ಕಾಗಿ, ರೈಲು ಸಂಖ್ಯೆ 26652 ಎರ್ನಾಕುಲಂನಿಂದ ಮಧ್ಯಾಹ್ನ 2:20ಕ್ಕೆ ಹೊರಟು, ರಾತ್ರಿ 11:00ಕ್ಕೆ ಬೆಂಗಳೂರಿಗೆ ಆಗಮಿಸಲಿದೆ. ಈ ರೈಲು ಕೃಷ್ಣರಾಜಪುರಂ, ಸೇಲಂ, ಈರೋಡ್, ತಿರುಪ್ಪೂರು, ಕೊಯಮತ್ತೂರು, ಪಾಲಕ್ಕಾಡ್ ಮತ್ತು ತ್ರಿಶೂರ್ ನಿಲ್ದಾಣಗಳಲ್ಲಿ ನಿಗದಿತ ನಿಲುಗಡೆ ಇರಲಿದೆ. ನಿಯಮಿತ ಸೇವೆ ಆರಂಭಕ್ಕೂ ಮೊದಲು ಪರೀಕ್ಷಾರ್ಥ ವಿಶೇಷ ರೈಲು ಸಂಚಾರ ಸಾಧ್ಯತೆಯೂ ಇದೆ. ದಕ್ಷಿಣ ಹಾಗೂ ನೈಋತ್ಯ ರೈಲ್ವೆ ವಲಯಗಳಿಗೆ ತ್ವರಿತ ಸಿದ್ಧತೆ ಮಾಡಲು ಸಚಿವಾಲಯ ನಿರ್ದೇಶನ ನೀಡಿದೆ.

**ಮಲಯಾಳಿ ಸಮುದಾಯದಲ್ಲಿ ಗಮನಾರ್ಹ ಉತ್ಸಾಹ**

**ನವೆಂಬರ್ ಮಧ್ಯಭಾಗದಲ್ಲಿ ಎಕ್ಸ್‌ಪ್ರೆಸ್:** ಅಕ್ಟೋಬರ್ ಆರಂಭದಲ್ಲಿಯೇ ಬೆಂಗಳೂರಿನಿಂದ ಕೇರಳದ ಪ್ರಮುಖ ನಗರಗಳಾದ ತ್ರಿಶೂರ್ ಮತ್ತು ಪಾಲಕ್ಕಾಡ್‌ಗಳೊಂದಿಗೆ ಸಂಪರ್ಕಿಸುವ ಈ ವಿಶೇಷ ರೈಲುಗಳ ಕುರಿತ ಘೋಷಣೆ ಮಾಡಲಾಗಿತ್ತು. ಇದು ವಿಶೇಷವಾಗಿ ಬೆಂಗಳೂರಿನ ತಂತ್ರಜ್ಞಾನ ಮತ್ತು ಸೇವಾ ವಲಯಗಳಲ್ಲಿ ಕೆಲಸ ಮಾಡುವ ಮಲಯಾಳಿ ಸಮುದಾಯದಲ್ಲಿ ಗಮನಾರ್ಹ ಉತ್ಸಾಹವನ್ನು ಹುಟ್ಟುಹಾಕಿತ್ತು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಹೇಳಿರುವಂತೆ ಎರ್ನಾಕುಲಂ ಮತ್ತು ಬೆಂಗಳೂರು ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ನವೆಂಬರ್ ಮಧ್ಯಭಾಗದಲ್ಲಿ ಪ್ರಾರಂಭವಾಗಲಿದೆ.

## ಬಿಜೆಪಿಯವ್ರು ಆರ್‌ಎಸ್‌ಎಸ್ ಗುಲಾಮರು: ಪ್ರಿಯಾಂಕ್ ಖರ್ಗೆ ವಾಗ್ದಾಳಿ

■ ಬಿಜೆಪಿಯವ್ರು, ಬೀದಿಯಲ್ಲಿ ಮಾತಾಡ್ತಿದ್ದಾರೆ. ■ ಆರ್‌ಎಸ್‌ಎಸ್ ಪರ ಮಾತಾಡದಿದ್ರೆ, ಬಿಜೆಪಿ ನಾಯಕರಿಗೆ ಟಿಕೆಟ್ ಸಿಗಲ್ಲ

• ಉದಯವಾಹಿನಿ, ಬೆಂಗಳೂರು

ಬಿಜೆಪಿಯವ್ರು ಆರ್‌ಎಸ್‌ಎಸ್‌ನ ಗುಲಾಮರು ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ಒಂದು ತಿಂಗಳಿಂದ ಪಥಸಂಚಲನ ಜಟಾಪಟಿ ನಡೀತಿದೆ. ಒಂದು ತಿಂಗಳ ನಂತರ ನಿನ್ನೆ ಅದರ ಮುಖ್ಯಸ್ಥರು ಮಾತಾಡಿದ್ದಾರೆ. ಆದರೆ, ಬಿಜೆಪಿಯವ್ರು ಒಂದು ತಿಂಗಳಿಂದ ಬೀದಿಯಲ್ಲಿ ಮಾತಾಡ್ತಿದ್ದಾರೆ. ಆರ್‌ಎಸ್‌ಎಸ್ ಪರ ಮಾತಾಡದಿದ್ರೆ ಬಿಜೆಪಿ ನಾಯಕರಿಗೆ ಟಿಕೆಟ್ ಸಿಗಲ್ಲ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕ ಇನ್ನೂ ಆಗಿಲ್ಲ ಯಾಕೆ? ಆರ್‌ಎಸ್‌ಎಸ್ ಅನುಮತಿ ಕೊಟ್ಟಿಲ್ಲ ಎಂದು ಲೇವಡಿ ಮಾಡಿದರು.

**ಆರ್‌ಎಸ್‌ಎಸ್ ಅನುಮತಿ ಕೊಟ್ಟಿಲ್ಲ**



ಆರ್‌ಎಸ್‌ಎಸ್ ಅನ್ನು ಇಡೀ ಸಮಾಜ ಒಪ್ಪಿಲ್ಲ, ಇಡೀ ದೇಶ ಒಪ್ಪಿಲ್ಲ. ಎಲ್ಲರೂ ಒಪ್ಪಿದ್ದಾರೆ ಅನ್ನೋ ಭಾವನೆ ಸರಿಯಲ್ಲ. ಸರ್ಕಾರಿ ಜಾಗಗಳಲ್ಲಿ ಚಟುವಟಿಕೆ ಮಾಡೋ ಹಾಗಿಲ್ಲ, ಅನುಮತಿ ತಗೋಬೇಕು. ನಾವು ಆರ್‌ಎಸ್‌ಎಸ್‌ನ ಆಳು ಮಕ್ಕಳು ಅಲ್ಲ. ದೊಡ್ಡ ಸಂಘಟನೆ ಅಂತಾರೆ, ಯಾಕೆ ಇನ್ನೂ ಆರ್‌ಎಸ್‌ಎಸ್ ನೋಂದಣಿ ಆಗಿಲ್ಲ? ಇವರಿಗೊಂದು ನ್ಯಾಯ ನಮಗೊಂದು ನ್ಯಾಯನಾ? ಪಥಸಂಚಲನ ಏನಕ್ಕೆ ಮಾಡಬೇಕು? ಅದರ ಅಗತ್ಯ ಏನು? ಪಥಸಂಚಲನ ಮಾಡಬೇಕಾದರೆ ಅನುಮತಿ ತಗೋಬೇಕಲ್ಲ? ನೋಂದಣಿ ಆಗದೇ ಹೇಗೆ ಅನುಮತಿ ಪಡೀತಾರೆ ಎಂದು ಪ್ರಶ್ನಿಸಿದರು.

ಬೆಳಗಾವಿಯಲ್ಲಿ ಎಂಇಎಸ್ ಕರಾಳ ಆಚರಣೆಗೆ ಪೊಲೀಸ್ ಭದ್ರತೆ ವಿಚಾರವಾಗಿ ಮಾತನಾಡಿ, ಯಾರಿಗೂ ಅನುಮತಿ ಕೊಡಬಾರದು. ಲೋಕಲ್‌ನಲ್ಲಿ ಸಮಸ್ಯೆ ಇಲ್ಲದಿದ್ರೆ ಸ್ಥಳೀಯವಾಗಿ ಕ್ರಮ ತಗೋತಾರೆ.

ಜಾರಕಿಹೊಳಿ ಸಾಹೇಬ್ರು ಎಂಇಎಸ್ ವಿರುದ್ಧ ಕ್ರಮ ತೆಗೆದುಕೊಳ್ಳೋದಾಗಿ ಹೇಳಿದ್ದಾರೆ ಎಂದು ತಿಳಿಸಿದರು. ಡಿಕೆಶಿ ಅಧಿಕಾರ ಸ್ವೀಕಾರ ಬಗ್ಗೆ ಚರ್ಚೆ ಕುರಿತು ಪ್ರತಿಕ್ರಿಯಿಸಿ, ಇದನ್ನು ಯಾರು ಹೇಳಿದ್ದಾರೆ? ಯಾರಾದ್ರೂ ಹೇಳಿದ್ರೆ ಮಾತಾಡಬಹುದು. ಅಧಿಕೃತವಾಗಿ ನಮ್ಮ ನಾಯಕರು ಮಾತಾಡಿದ್ರೆ ನಾವು ಮಾತಾಡಬಹುದು. ಡಿಕೆಶಿ ಅವರೇ ನಿನ್ನೆ ಮಾತಾಡಿದ್ದಾರಲ್ಲ, ಅವರು ಮತ್ತು ಸಿಎಂ ಮಾತ್ರ ಮಾತಾಡಿದ್ರೆ, ಅಧಿಕೃತ ಅಂತ. ಸಿಎಂ ಸಾಹೇಬ್ರು, ಡಿಕೆಶಿ ಸಾಹೇಬ್ರು ಅದಾಗಲೇ ಇದರ ಬಗ್ಗೆ ಮಾತಾಡಿದ್ದಾರೆ. ಹೈಕಮಾಂಡ್ ತೀರ್ಮಾನ ಮಾಡುತ್ತೆ. ನಾವು ಮಾತಾಡೋದ್ರಲ್ಲಿ ಪ್ರಯೋಜನ ಇಲ್ಲ ಎಂದರು.

### ಲೋಕಲ್‌ನಲ್ಲಿ ಸಮಸ್ಯೆ ಇಲ್ಲದಿದ್ರೆ ಸ್ಥಳೀಯವಾಗಿ ಕ್ರಮ ತಗೋತಾರೆ

ಎಂಇಎಸ್ ಕರಾಳ ಆಚರಣೆಗೆ ಪೊಲೀಸ್ ಭದ್ರತೆ ವಿಚಾರವಾಗಿ ಮಾತನಾಡಿ, ಯಾರಿಗೂ ಅನುಮತಿ ಕೊಡಬಾರದು. ಲೋಕಲ್‌ನಲ್ಲಿ ಸಮಸ್ಯೆ ಇಲ್ಲದಿದ್ರೆ ಸ್ಥಳೀಯವಾಗಿ ಕ್ರಮ ತಗೋತಾರೆ. ಜಾರಕಿಹೊಳಿ ಸಾಹೇಬ್ರು ಎಂಇಎಸ್ ವಿರುದ್ಧ ಕ್ರಮ ತೆಗೆದುಕೊಳ್ಳೋದಾಗಿ ಹೇಳಿದ್ದಾರೆ ಎಂದು ತಿಳಿಸಿದರು. ಡಿಕೆಶಿ ಅಧಿಕಾರ ಸ್ವೀಕಾರ ಬಗ್ಗೆ ಚರ್ಚೆ ಕುರಿತು ಪ್ರತಿಕ್ರಿಯಿಸಿ, ಇದನ್ನು ಯಾರು ಹೇಳಿದ್ದಾರೆ? ಯಾರಾದ್ರೂ ಹೇಳಿದ್ರೆ, ಮಾತಾಡಬಹುದು. ಅಧಿಕೃತವಾಗಿ ನಮ್ಮ ನಾಯಕರು ಮಾತಾಡಿದ್ರೆ, ನಾವು ಮಾತಾಡಬಹುದು. ಡಿಕೆಶಿ ಅವರೇ ನಿನ್ನೆ ಮಾತಾಡಿದ್ದಾರಲ್ಲ, ಅವರು ಮತ್ತು ಸಿಎಂ ಮಾತ್ರ ಮಾತಾಡಿದ್ರೆ, ಅಧಿಕೃತ ಅಂತ. ಸಿಎಂ ಸಾಹೇಬ್ರು, ಡಿಕೆಶಿ ಸಾಹೇಬ್ರು ಅದಾಗಲೇ ಇದರ ಬಗ್ಗೆ ಮಾತಾಡಿದ್ದಾರೆ. ಹೈಕಮಾಂಡ್ ತೀರ್ಮಾನ ಮಾಡುತ್ತೆ. ನಾವು ಮಾತಾಡೋದ್ರಲ್ಲಿ ಪ್ರಯೋಜನ ಇಲ್ಲ ಎಂದರು.

ಸತೀಶ್ ಜಾರಕಿಹೊಳಿ ದೆಹಲಿ ಭೇಟಿ ಬಗ್ಗೆ ಮಾತನಾಡಿ, ನಮ್ಮ ನಾಯಕರು ಭೇಟಿ ಕೊಡ್ತಿರಬಹುದು. ದೆಹಲಿಗೆ ಹೋದರೆ ಹೈಕಮಾಂಡ್ ಭೇಟಿ ಮಾಡ್ತಾರೆ. ಅದರಲ್ಲಿ ಏನೂ ಮರ್ಮ ಇಲ್ಲ. ದೆಹಲಿ ಭೇಟಿಯಲ್ಲಿ ವಿಶೇಷ ಇಲ್ಲ. ನಾನೂ ನಾಡಿದ್ದು ಹೋಗ್ತೇನೆ, ಟೆಕ್ ಸಮ್ಮಿಟ್ ಸಂಬಂಧ ಚರ್ಚೆ ಮಾಡಲು ಹೋಗ್ತೇನೆ. ಆದರೆ, ಯಾವಾಗ ಏನಾಗಬೇಕೋ ಅದನ್ನು ಹೈಕಮಾಂಡ್ ನಿರ್ಧಾರ ಮಾಡುತ್ತೆ. ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರ್ತೀವಿ ಅಂತ ಎಲ್ಲರೂ ಮಾತಾಡಿದ್ದಾರಲ್ಲ ಎಂದು ಹೇಳಿದರು.

ಖಾಸಗಿ ಜಾಗ, ನಿಮ್ಮವರ ಒಡೆತನದ ಜಾಗಗಳಲ್ಲಿ ಪಥಸಂಚಲನ ಮಾಡಿಕೊಳ್ಳಿ. ದೇಶ ಸಂಸ್ಕೃತಿ, ಐಕ್ಯತೆಗೆ ದುಡೀತಿದ್ರೆ ಇದೆಲ್ಲ ಅಗತ್ಯ ಏನು? ದೊಣ್ಣೆ ಹಿಡಿದುಕೊಂಡೇ ಪಥಸಂಚಲನ ಮಾಡಬೇಕು ಅನ್ನೋದೇನು? ಆರ್‌ಎಸ್‌ಎಸ್‌ನ ಪೂರ್ಣಾವಧಿ ಪ್ರಚಾರಕರಿಗೆ ವೇತನ ಅಥವಾ ಗೌರವಧನ ಕೊಡ್ತಿದ್ದಾರಲ್ಲ, ಹೇಗೆ, ಎಲ್ಲಿಂದ ಕೊಡ್ತಿದ್ದಾರೆ? ಆರ್‌ಎಸ್‌ಎಸ್‌ನಲ್ಲಿ ಪಾರದರ್ಶಕತೆ ಯಾಕಿಲ್ಲ? ಯಾಕೆ ರಹಸ್ಯ ಕಾಪಾಡ್ತಾರೆ? ಆದಾಯ, ದೇಣಿಗೆ ಯಾರು ಕೊಡ್ತಾರೆ? ಎಲ್ಲಿಂದ ಬರುತ್ತೆ? ನಿತ್ಯದ ಖರ್ಚುಗಳನ್ನು ಆರ್‌ಎಸ್‌ಎಸ್ ಹೇಗೆ ನಿರ್ವಹಿಸುತ್ತೆ?

ಇದನ್ನೆಲ್ಲ ನಾವು ಕೇಳಬಾರದಾ? ನೋಂದಾಯಿತ ಸಂಸ್ಥೆ, ಸಂಘಟನೆಗಳು ಆರಾರು ತಿಂಗಳಿಗೆ ಲೆಕ್ಕದ ವರದಿ ಕೊಡಬೇಕು. ಇವರು ಕೊಡ್ತಾರಾ? ಆರ್‌ಎಸ್‌ಎಸ್ ಆಫ್ಟ್ರಾಲ್ ಒಂದು ಎನ್‌ಜಿಒ, ಅದರ ಮುಖ್ಯಸ್ಥರಿಗೆ ಯಾಕೆ ಅಷ್ಟೊಂದು ಭದ್ರತೆ? ಪಥಸಂಚಲನ ಹಾಗೇ ಮಾಡ್ತೇವೆ, ಹೀಗೇ ಮಾಡ್ತೇವೆ ಅಂತಾರೆ, ನಾವೇನು ಆರ್‌ಎಸ್‌ಎಸ್ ಗುಲಾಮರಾ ಎಂದು ಕೆಂಡಕಾರಿದರು.

| | | | | |
|---|---|---|---|---|
| ಈ ದಿನದ ದರ | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,300/Gram24ct ₹11,275/Gram22ct | ಬೆಳ್ಳಿ: ₹152.00/Gram |

## ಸಿದ್ಧಸೂಕ್ತಿ



**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಮೀಸಲಾತಿಯ ಹುಚ್ಚು

ಅತಿ ಹಸಿದನಿಗೆ ಮೊದಲ ಊಟ. ದೀನ ದುರ್ಬಲರ ಹಿತ ಸಂರಕ್ಷಣೆ ಆದ್ಯ ಕರ್ತವ್ಯ. ಇದೇ ಮೀಸಲಾತಿ. ತುಳಿತಕ್ಕೊಳಗಾದ ಸಂಕಷ್ಟದ ಜಾತಿಗರ ಮೇಲೆತ್ತಲು ಜಾತಿ-ಧರ್ಮಾಧಾರ ಮೀಸಲಾತಿ. ಎಲ್ಲಿಯವರೆಗೆ? ಮೇಲೇರುವವರೆಗೆ. ಮೇಲೇರಿದ ಬಳಿಕ, ಮೇಲೆಯೇ ಏರದಿದ್ದರೆ ಇಂಥ ಮೀಸಲಾತಿ ಬೇಕಿಲ್ಲ. ಅದಕ್ಕೇ ಸಂವಿಧಾನದಲ್ಲಿ ಮೀಸಲಾತಿಗೆ ಅಂಬೇಡ್ಕರ್ ವಿಧಿಸಿದ ಗಡುವು ಹತ್ತುವರ್ಷ! ಆದರಿದು ಮುಂದುವರೆದು ತಲುಪಿದೆ ಎಂಭತ್ತುವರ್ಷ! ಇದೀಗ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಪಂಕಜ್ ಮಿಥಲ್ ಅವರ ಮೀಸಲಾತಿಯನ್ನು ಮೊದಲ ತಲೆಮಾರಿಗೆ ಮಾತ್ರ ನೀಡಬೇಕು, ನಂತರ ಅಲ್ಲ ಎಂಬ ಹೇಳಿಕೆ ಮನನೀಯ. ಅಂದಿತ್ತು ಮೇಲ್ವರ್ಗ ಕೆಳವರ್ಗವ ತುಳಿವ ಕಾಲ. ಆದರಿಂದು ಅದು ಹಿಂದೆ ಮುಂದೆ! ಇದು ವೈದಿಕಕಾಲವಲ್ಲ, ಸಂವಿಧಾನದ ಯುಗ! ಎಲ್ಲಾ ಸಮ ಎಲ್ಲಾ ಸ್ವತಂತ್ರ. ಮತಾಂತರ ಧರ್ಮಾಂತರ ಎಲ್ಲವೂ ಇದೆ. ಎಲ್ಲರೂ ಶೋಷಕರು, ಎಲ್ಲರೂ ಶೋಷಿತರು.

ಹಿಂದುಳಿದವರು ಬಡವರು ಅಶಕ್ತರು ವಿಕಲಚೇತನರು ಯಾವ ಜಾತಿಯಲ್ಲಿಲ್ಲ? ಜಾತಿ ಧರ್ಮದ ಮೀಸಲಾತಿ ಇದೀಗ ಅಪ್ರಸ್ತುತ. ಬದಲಿಗೆ ಆರ್ಥಿಕ ದೈಹಿಕ ಸಾಮಾಜಿಕ ದೌರ್ಬಲ್ಯದಾಧಾರದಡಿ ಹೊಸ ಮೀಸಲಾತಿ ಜಾರಿಯಾಗಬೇಕು. ನಿವೃತ್ತ ಐಎಎಸ್ ಅಧಿಕಾರಿ, ಭೋವಿ ಸಂಘದ ಅಧ್ಯಕ್ಷ ಎಸ್ ಎಲ್ ಗಂಗಾಧರಪ್ಪರ ಈಚಿನ ದಲಿತ ಜನಾಂಗ ಎಪ್ಪತ್ತು ಎಂಭತ್ತು ವರ್ಷಗಳಿಂದ ಹಚ್ಚಿಕೊಂಡ ಮೀಸಲಾತಿಯ ಹುಚ್ಚನ್ನು ಬಿಡಬೇಕು ಎಂಬ ಹೇಳಿಕೆ ಶ್ಲಾಘನೀಯ. ತ್ಯಾಗ ಮಾರ್ಗದ ಸ್ವಾಮೀಜಿಗಳು ಮೀಸಲಾತಿ ಪ್ರತ್ಯೇಕ ಧರ್ಮಕ್ಕೆ ಹೋರಾಡುವುದನ್ನು ತೊರೆದು ಹೊಸ ಮೀಸಲಾತಿಗೆ ಧ್ವನಿ ಎತ್ತಲಿ.

## ಡಾ.ಬಿ.ಎಲ್.ವೇಣು ಅವರಿಗೆ 'ಕೆಂಧೂಳಿ ರಾಜ್ಯೋತ್ಸವ' ಪ್ರಶಸ್ತಿ ಕೊಡಲು ಸಮಿತಿ ಆಯ್ಕೆ

• ಉದಯವಾಹಿನಿ, ಬೆಂಗಳೂರು

ಕೆಂಧೂಳಿ ಪತ್ರಿಕೆ 5 ವರ್ಷ ಪೂರೈಸಿದೆ. ಈ ಸಂದರ್ಭದಲ್ಲಿ ಸಾಹಿತ್ಯ, ಪತ್ರಿಕೋದ್ಯಮ, ಕೃಷಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಪ್ರತಿ ವರ್ಷ ಪ್ರಶಸ್ತಿ ಕೊಡಲು ತೀರ್ಮಾನಿಸಿದೆ. ಈ ನಿಟ್ಟಿನಲ್ಲಿ ಮೊದಲನೇ ವರ್ಷ ನಾಡಿನ ಹೆಸರಾಂತ



ಸಾಹಿತಿ ಡಾ.ಬಿ.ಎಲ್.ವೇಣು ಅವರಿಗೆ 'ಕೆಂಧೂಳಿ ರಾಜ್ಯೋತ್ಸವ' ಪ್ರಶಸ್ತಿ ಕೊಡಲು ಸಮಿತಿ ಆಯ್ಕೆ ಮಾಡಿದೆ ಎಂದು ತಿಳಿಸಲು ಹರ್ಷಿಸುತ್ತೇವೆ ಪ್ರಶಸ್ತಿಯೂ 10 ಸಾವಿರ ನಗದು, ಪ್ರಶಸ್ತಿ ಫಲಕ ಹೊಂದಿರುತ್ತದೆ. ಈ ಪ್ರಶಸ್ತಿಯನ್ನು ಶೀಘ್ರ ನೀಡಲಾಗುವದು. ಡಾ.ಶಿವಕುಮಾರ್ ಕಂಪ್ಲಿ ಅಧ್ಯಕ್ಷತೆಯಲ್ಲಿ ತುರುವನೂರು ಮಂಜುನಾಥ, ಶ್ರೀದೇವಿ ಕೆರೆಮನೆ ಮತ್ತು ಪರಶಿವ ಧನಗೂರು ಅವರ ಸಮಿತಿ ಈ ಆಯ್ಕೆ ಮಾಡಿದೆ.

## ಶ್ರೀ ತುಲಸೀ-ದಾಮೋದರ ವಿವಾಹ, ಕಾರ್ತೀಕ ದೀಪೋತ್ಸವ, ಶ್ರೀ ರುದ್ರ ದೇವರಿಗೆ ಕ್ಷೀರಾಭಿಷೇಕ

• ಉದಯವಾಹಿನಿ, ಬೆಂಗಳೂರು

ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ವತಿಯಿಂದ ನವೆಂಬರ್ 3, ಸೋಮವಾರ ಸಂಜೆ 7-00 ಗಂಟೆಗೆ ಶ್ರೀ ತುಲಸೀ-ದಾಮೋದರ ವಿವಾಹ ಮತ್ತು ಕಾರ್ತೀಕ ದೀಪೋತ್ಸವ ಹಾಗೂ ರುದ್ರ ದೇವರಿಗೆ ಕ್ಷೀರಾಭಿಷೇಕ ಜರುಗುತ್ತದೆ.ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಅಡ್ಡರಸ್ತೆ, ತ್ಯಾಗರಾಜನಗರ, ಬೆಂಗಳೂರು-560028

## ಬೈಕ್‌ಗೆ ಆ್ಯಂಬುಲೆನ್ಸ್ ಡಿಕ್ಕಿ, ಇಬ್ಬರು ಸ್ಥಳದಲ್ಲೇ ಸಾವು

• ಉದಯವಾಹಿನಿ, ಬೆಂಗಳೂರು

ನಗರದ ಶಾಂತಿನಗರ ಬಸ್ ನಿಲ್ದಾಣ ಬಳಿ ಶನಿವಾರ ತಡರಾತ್ರಿ, ಭೀಕರ ಅಪಘಾತ ಸಂಭವಿಸಿದೆ. ಸಿಗ್ನಲ್‌ನಲ್ಲಿ ಎರಡು ಬೈಕ್‌ಗಳಿಗೆ ಆ್ಯಂಬುಲೆನ್ಸ್ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಶಾಂತಿನಗರ ಬಸ್ ನಿಲ್ದಾಣ ಬಳಿ ವೇಗವಾಗಿ ಬಂದ ಆ್ಯಂಬುಲೆನ್ಸ್ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಇಬ್ಬರು ಬಲಿಯಾಗಿದ್ದಾರೆ. ಘಟನೆಯಲ್ಲಿ ಮತ್ತಿಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಯಾವುದೇ ರೋಗಿಗಳು ಇಲ್ಲದಿದ್ದರೂ ರಿಚ್ಮಂಡ್ ಸರ್ಕಲ್ ಕಡೆಯಿಂದ ಅತಿ ವೇಗವಾಗಿ ಬಂದ ಆ್ಯಂಬುಲೆನ್ಸ್ ಡಿಕ್ಕಿ ಹೊಡೆದು ಬೈಕ್ ಅನ್ನು 50 ಮೀಟರ್ ದೂರ ಎಳೆದೊಯ್ದಿದೆ. ಬೈಕುಗಳಿಗೆ ಆ್ಯಂಬುಲೆನ್ಸ್ ಡಿಕ್ಕಿ ಹೊಡೆದ ಬಳಿಕ ಪೊಲೀಸ್ ಚೌಕಿಗೂ ಡಿಕ್ಕಿ ಹೊಡೆದಿದ್ದಾನೆ. ಬಳಿಕ ಸ್ಥಳದಿಂದ ಕಾಲ್ಕಿತ್ತಿದ್ದಾನೆ. ಘಟನೆಯ ಬಳಿಕ ಆಕ್ರೋಶಗೊಂಡ ಜನಕು ಆ್ಯಂಬುಲೆನ್ಸ್ ದೂಡಿ ಪಲ್ಟಿ ಹೊಡೆಸಿದ್ದಾರೆ.

## ಬ್ಯಾಂಕ್‌ನಲ್ಲೇ ಸಿಲುಕಿದ ರೂ.50 ಕೋಟಿ ಇಎಂಡಿ



• ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅವಧಿಯಲ್ಲಿ ಕರೆಯಲಾಗಿದ್ದ ನೂರಾರು ಟೆಂಡರ್‌ಗಳು ಅಂತಿಮವಾಗದೆ ಇರುವುದರಿಂದ ನಾಲ್ಕು ತಿಂಗಳಿಂದ ಗುತ್ತಿಗೆದಾರರು ಪಾವತಿಸಿರುವ ರೂ. 50 ಕೋಟಿಗೂ ಹೆಚ್ಚು ಮುಂಗಡ ಹಣ (ಇಎಂಡಿ) ಬ್ಯಾಂಕ್‌ಗಳಲ್ಲೇ ಉಳಿದಿದೆ. ಬಿಬಿಎಂಪಿ ಅಸ್ತಿತ್ವ ಕಳೆದುಕೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಹಾಗೂ ಐದು ನಗರ ಪಾಲಿಕೆಗಳು ಸೆಪ್ಟೆಂಬರ್ 2ರಂದು ರಚನೆಯಾದವು. ಬಿಬಿಎಂಪಿ ಅಸ್ತಿತ್ವ ಕಳೆದುಕೊಳ್ಳುತ್ತದೆ ಎಂಬ ಅರಿವಿದ್ದರೂ ಅಧಿಕಾರಿಗಳು ಸೆ.2ರವರೆಗೂ ವಿವಿಧ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದರು. ಜಿಬಿಎ ಅಸ್ತಿತ್ವಕ್ಕೆ ಬಂದ ನಂತರ ಎಲ್ಲ ಟೆಂಡರ್‌ಗಳ ಪ್ರಕ್ರಿಯೆ ಸ್ಥಗಿತಗೊಂಡಿವೆ. ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಆಹ್ವಾನಿಸಿದ್ದ ಸಾವಿರಾರು ಟೆಂಡರ್‌ಗಳ ಪ್ರಕ್ರಿಯೆ ಪೂರ್ಣ ಮುಗಿದಿಲ್ಲ. ಹೀಗಾಗಿ, ಒಂದು ಟೆಂಡರ್ ಮೊತ್ತದ ಶೇ 1ರಷ್ಟನ್ನು ಇಎಂಡಿಯಾಗಿ ಗುತ್ತಿಗೆದಾರರು ಪಾವತಿಸಿದ್ದ ?50 ಕೋಟಿಗೂ ಹೆಚ್ಚು ಹಣ ಬ್ಯಾಂಕ್‌ಗಳಲ್ಲಿಯೇ ಇದೆ.ಗುತ್ತಿಗೆದಾರರು ಪಾವತಿಸಿರುವ ಇಎಂಡಿ ಮೊತ್ತಕ್ಕೆ ಬಿಬಿಎಂಪಿಯಾಗಲಿ, ಬ್ಯಾಂಕ್ ಆಗಲಿ ಬಡ್ಡಿ ನೀಡುವುದಿಲ್ಲ. ಇಎಂಡಿ ಮೊತ್ತವನ್ನು ಇ-ಸಂಗ್ರಹಣಾ (ಇ-ಪ್ರೊಕ್ಯೂರ್ಮೆಂಟ್) ತಂತ್ರಾಂಶದ ಮೂಲಕ ಬ್ಯಾಂಕ್‌ಗಳಿಗೆ ಪಾವತಿಸಲಾಗಿದೆ. ಈ ಮೊತ್ತ ಬ್ಯಾಂಕ್‌ಗಳಲ್ಲೇ ಸಿಲುಕಿದೆ. ಬಿಬಿಎಂಪಿ ಇದ್ದಾಗ ಜುಲೈನಿಂದ ಆಹ್ವಾನಿಸಲಾಗಿದ್ದ ಟೆಂಡರ್‌ಗಳ ಪ್ರಕ್ರಿಯೆ ಇನ್ನೂ 'ಫ್ರೀಜ್'ನಲ್ಲೇ ಇದೆ. ನೂರಾರು ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದರೂ ಅದು ಯಾವ ನಗರ ಪಾಲಿಕೆ ವ್ಯಾಪ್ತಿಗೆ ಸೇರಬೇಕೋ ಅಲ್ಲಿಗೆ ಅವುಗಳನ್ನು ಇನ್ನೂ ವರ್ಗಾಯಿಸಿಲ್ಲ. ಈ ಕಾಮಗಾರಿಗಳಿಗೆ ಬಿಡ್ ಸಲ್ಲಿಸಿದ್ದ ಗುತ್ತಿಗೆದಾರರ ಇಎಂಪಿಯನ್ನೂ ಅವರಿಗೆ ವಾಪಸ್ ನೀಡಿಲ್ಲ.ಇನ್ನು ಕೊನೆಯ ಎರಡು ತಿಂಗಳಲ್ಲಿ ತರಾತುರಿಯಲ್ಲಿ ನಾನಾ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿತ್ತು. ನೂರಾರು ಗುತ್ತಿಗೆದಾರರು ಇಎಂಡಿ ಪಾವತಿಸಿ ಬಿಡ್ ಸಲ್ಲಿಸಿದ್ದಾರೆ. ಇಂತಹ ಟೆಂಡರ್‌ಗಳ ಪ್ರಕ್ರಿಯೆ ಪೂರ್ಣಗೊಳ್ಳದೆ ಇರುವುದರಿಂದ ಇಎಂಡಿ ಮೊತ್ತ ಬ್ಯಾಂಕ್‌ಗಳಲ್ಲೇ ಇದೆ.

# ರಸ್ತೆಬದಿಯಲ್ಲಿ ಕಸ ಹಾಕುವವರಿಗೆ ಮಹತ್ವದ ಮಾಹಿತಿ ಕೊಟ್ಟ ಡಿಸಿಎಂ

**ವಿಧಾನಸೌಧದ ಬಳಿಯ ಭುವನೇಶ್ವರಿ ಪ್ರತಿಮೆ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಡಿಸಿಎಂ**

• ಉದಯವಾಹಿನಿ, ಬೆಂಗಳೂರು

ಹಲವು ಮನವಿಯ ನಡುವೆಯೂ ಎಲ್ಲೆಂದರಲ್ಲಿ ಕಸ ಹಾಕುವವರಿಗೆ ಬಿಸಿ ಮುಟ್ಟಿಸಲು ಜಿಬಿಎ ಕಸ ಹಾಕಿದವರ ಮನೆಯ ಮುಂದೆಯೇ, ವಾಪಸ್ ಕಸವನ್ನು ಸುರಿದು, 2 ಸಾವಿರ ರೂಪಾಯಿ ದಂಡವನ್ನು ವಿಧಿಸಲು ಆರಂಭಿಸಿದೆ.

ಈಗಾಗಲೇ, ಬೆಂಗಳೂರಿನ ವಿವಿಧ ಭಾಗಗಳ, ಸುಮಾರು 220 ಮನೆಗಳ ಮುಂದೆ ಕಸವನ್ನು ವಾಪಸ್ ಸುರಿದು ಬಂದಿದೆ. ಜೊತೆಗೆ, ಇದುವರೆಗೆ ಸುಮಾರು ಮೂರು ಲಕ್ಷ ರೂಪಾಯಿ ದಂಡವನ್ನು ಸಂಗ್ರಹಿಸಿದೆ. ಈ ಸಂಬಂಧ, ಉಪ ಮುಖ್ಯಮಂತ್ರಿ ಮತ್ತು ಬೆಂಗಳೂರು ಉಸ್ತುವಾರಿಯೂ ಆಗಿರುವ ಡಿಕೆ ಶಿವಕುಮಾರ್, ಮಹತ್ವದ ಅಪ್ಡೇಟ್ಸ್ ಅನ್ನು ಕೊಟ್ಟಿದ್ದಾರೆ.ಬೆಂಗಳೂರಿನ ನಾಗರೀಕರಲ್ಲಿ ನನ್ನ ಮನವಿ ಏನೆಂದರೆ, ರಸ್ತೆಬದಿಯಲ್ಲಿ ಕಸವನ್ನು ಎಸೆಯುವುದನ್ನು ಮುಂದುವರಿಸಿದರೆ, ಅದು ವಾಪಸ್ ನಿಮ್ಮ ಮನೆಯ ಮುಂದೆ ಬಂದು ಬೀಳುತ್ತದೆ. ಈಗಿರುವ ಸಿಸಿಟಿವಿಯ ಜೊತೆಗೆ, ಇನ್ನೂ ಹೆಚ್ಚಿನ ಸಿಸಿಟಿವಿ ಕ್ಯಾಮೆರಾಗಳನ್ನು



ಪೊಲೀಸ್ ಇಲಾಖೆ ಹಾಗೂ ಪಾಲಿಕೆ ನೆರವಿನಿಂದ ಅಳವಡಿಸಲು ನಿರ್ಧರಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ನಗರದ ಕೆಲವೊಂದು ಭಾಗದಲ್ಲಿ ಬೆಳಗ್ಗೆ ಐದು ಗಂಟೆಗೆ ಜಿಬಿಎ ಮಾರ್ಷಲ್‌ಗಳು, ಕಸ ಹಾಕುವ ಜಾಗದಲ್ಲಿ ಕಾದು ಕುಳಿತಿರುತ್ತಾರೆ. ಗಂಗಾನಗರ ಭಾಗದಲ್ಲಿ, ಕಸ ಹಾಕಿದ ಮಹಿಳೆಯಿಂದಲೇ, ಕಸವನ್ನು ಎತ್ತಿಸಿದ್ದಾರೆ. ಕಸ ಎಸೆಯುವುದನ್ನು ವಿಡಿಯೋ ಮಾಡಲಾಗುತ್ತಿದೆ. ಜೊತೆಗೆ, ಕಸ ತೆಗೆಯಲು ತಕರಾರು ಎತ್ತಿದವರ ಮನೆಯ ಮುಂದೆ ಕಸವನ್ನು ವಾಪಸ್ ಸುರಿಯಲಾಗುತ್ತಿದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಅಡಿಯಲ್ಲಿ ಬರುವ ಮಾರ್ಷಲ್, ಅಧಿಕಾರಿಗಳು, ನಗರದ ವಿವಿಧ ಭಾಗದಲ್ಲಿ ಸಂಚರಿಸಿ, ಎಲ್ಲೆಲ್ಲಿ ಕಸದ ಬುಟ್ಟಿಗೆ ಹಾಕದೇ, ರಸ್ತೆಯಲ್ಲಿ ಕಸವನ್ನು ಎಸೆಯುತ್ತಿದ್ದಾರೋ, ಅಂತವರ ವಿಡಿಯೋವನ್ನು ಮಾಡುತ್ತಿದ್ದಾರೆ. ನಂತರ, ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮುಂಬೈಗೆ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳಿದ್ದೆ. ಅಲ್ಲಿಯೂ ಸಹ ಮೂಲೆ, ಮೂಲೆಯಲ್ಲಿ ಕಸ ರಾಶಿ ಬಿದ್ದಿತ್ತು. ಬೇರೆ, ಬೇರೆ

> ನಗರದ ತ್ಯಾಜ್ಯ ನಿರ್ವಹಣೆ ಸಂಬಂಧ, ಹಲವು ಅಭಿಯಾನಗಳನ್ನು ನಡೆಸಿದ್ದೆವು. ಇದರ ಜೊತೆಗೆ, ಎಚ್ಚರಿಕೆ ಮತ್ತು ದಂಡವನ್ನು ವಿಧಿಸಲೂ ಆರಂಭಿಸಿದ್ದೆವು. ಆದಾಗ್ಯೂ, ಪರಿಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆ ಆಗಿಲ್ಲ. ಈ ನಿಟ್ಟಿನಲ್ಲಿ ಮತ್ತು ಡಿಕೆ ಶಿವಕುಮಾರ್ ಅವರ ಕಟ್ಟುನಿಟ್ಟಿನ ಸೂಚನೆಯ ಮೇರೆಗೆ ಕಸ ಎಸೆಯುವವರ ಮನೆಯ ಮುಂದೆಯೇ ಕಸ ವಾಪಸ್ ಸುರಿಯುವ ನಿರ್ಧಾರಕ್ಕೆ ಬರಲಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಅಧಿಕಾರಿಗಳು ಹೇಳಿದ್ದಾರೆ.

ಕಡೆಯಲ್ಲಿಯೂ ಬಿದ್ದಿರಬಹುದು. ಜನರು ತಮಗೆ ಇರುವ ಅವಕಾಶವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ನಿಲ್ಲಿಸಬೇಕು. ಜನರು ಸ್ವಚ್ಛ ಬೆಂಗಳೂರಿಗೆ ಹೆಚ್ಚು ಸಹಕಾರ ನೀಡಬೇಕು ಎಂದು ಡಿಕೆ ಶಿವಕುಮಾರ್ ಮನವಿಯನ್ನು ಮಾಡಿದ್ದಾರೆ.

> ನಗರದಾದ್ಯಂತ ಎಲ್ಲೆಂದರಲ್ಲಿ ಕಸದ ರಾಶಿ ಇರುವ ಸಮಸ್ಯೆ ಕುರಿತು ವ್ಯಾಪಕ ಟೀಕೆ ವ್ಯಕ್ತವಾಗುತ್ತಿತ್ತು. ಅದರಲ್ಲೂ, ದಸರಾ ಅಥವಾ ದೀಪಾವಳಿಯ ಸಂದರ್ಭದಲ್ಲಂತೂ, ಈ ಸಮಸ್ಯೆ ವಿಪರೀತವಾಗುತ್ತಿತ್ತು. ಜೊತೆಗೆ, ಮಳೆಯೂ ಸುರಿಯುತ್ತಿದ್ದರಿಂದ, ರಸ್ತೆಗಳು ಇನ್ನಷ್ಟು ಗಬ್ಬೆದ್ದು ಹೋಗಿದ್ದವು. ಜಿಬಿಎ ಮಾರ್ಷಲ್ ಮತ್ತು ಅಧಿಕಾರಿಗಳು ಸಾಕಷ್ಟು ಬಾರಿ ನಾಗರೀಕರಲ್ಲಿ ಮನವಿಯನ್ನು ಮಾಡಿದ್ದಾರೆ. ಇಷ್ಟಾದ ಮೇಲೂ, ಸುಧಾರಿಸಿಕೊಳ್ಳದಿದ್ದರೆ ಏನು ಮಾಡಲು ಸಾಧ್ಯ ಈಗಾಗಲೇ ಸಾಕಷ್ಟು ಜಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಇದರಿಂದ ಎಲ್ಲೆಂದರಲ್ಲಿ ಕಸ ಎಸೆಯುವವರನ್ನು ಗುರುತಿಸಿ ಅವರ ಮನೆ ಮುಂದೆಯೇ ಅದೇ ಕಸ ಸುರಿದು ಬುದ್ದಿವಾದ ಹೇಳುವ ಕೆಲಸ ಮಾಡಲಾಗುತ್ತಿದೆ. ಕಸ ಎಸೆಯುವವರಿಗೆ ದಂಡ ವಿಧಿಸುವ ಕೆಲಸವೂ ನಡೆಯುತ್ತಿದೆ ಎಂದು ಡಿಕೆಶಿ ಹೇಳಿದ್ದಾರೆ.

## ಕನ್ನಡ ರಾಜ್ಯೋತ್ಸವ ಎಂದರೆ ಕೇವಲ ಭಾಷಾಭಿಮಾನ ಅಲ್ಲ, ಭಾಷೆಯ ಗರ್ಭ: ಪ್ರಕಾಶ್ ರಾಜ್

• ಉದಯವಾಹಿನಿ, ಬೆಂಗಳೂರು

ರಾಜ್ಯೋತ್ಸವ ಅಂದರೆ ಭಾಷಾಭಿಮಾನ ಅಲ್ಲ. ಭಾಷೆ ಎಂದರೆ ಕೇವಲ ಧ್ವನಿ ಅಷ್ಟೇ. ಕನ್ನಡದ ಭಾಷೆಯ ಭಾವ ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ನಂಬಿಕೆ. ಇದು ಕುವೆಂಪು ಅವರ ವಿಶ್ವಮಾನವ ಸಂದೇಶ. ಎಲ್ಲಾ ಧರ್ಮದವರನ್ನು ಅಪ್ಪಿಕೊಂಡು ಬದುಕು ನಡೆಸುವುದೇ ರಾಜ್ಯೋತ್ಸವ. ಕನ್ನಡಿಗ ತನ್ನ ಭಾಷೆಯ ಬಗ್ಗೆ ಅಭಿಮಾನ, ಪ್ರೀತಿ ಇಟ್ಟುಕೊಳ್ಳುವುದು ಅಹಂಕಾರ ಅಲ್ಲ. ಕನ್ನಡಕ್ಕೆ, ಕರ್ನಾಟಕಕ್ಕೆ ಇರುವ ವೈಶಿಷ್ಟ್ಯತೆಯನ್ನು ಸಂಭ್ರಮಿಸುವುದಾಗಿದೆ ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಅವರು ಹೇಳಿದರು.

ಕನ್ನಡ, ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಿದ ನಂತರ ಎಲ್ಲಾ ಸಾಧಕರ ಪರವಾಗಿ ಪ್ರಕಾಶ್ ರಾಜ್ ಅವರು ಮಾತನಾಡಿದರು.

ಕನ್ನಡ ರಾಜ್ಯೋತ್ಸವವು ಕೇವಲ ಭಾಷಾ ಹೆಮ್ಮೆಯ ಬಗ್ಗೆ ಅಲ್ಲ. ಕೇವಲ ಭಾಷೆಯ ಬಗ್ಗೆಯೂ ಅಲ್ಲ. ಕೆಲವೊಮ್ಮೆ ನಾವು ಭಾಷಾ ಹೆಮ್ಮೆಯ ಅರ್ಥವನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತೇವೆ. ಕನ್ನಡವನ್ನು ಮಾತ್ರ ಮಾತನಾಡುವುದು ಕನ್ನಡ ಹೆಮ್ಮೆಯಲ್ಲ. ಅದರ ಗರ್ಭದೊಳಗೆ ಏನಿದೆ, ಅದು ಯಾವ ಭಾವನೆಯನ್ನು



☛ ಉದಯವಾಹಿನಿ ಚಿತ್ರ

ಹೊಂದಿದೆ. ಅದು ಮುಖ್ಯ ಸಾರವಾಗಿದೆ ಎಂದು ಹೇಳಿದರು.

ಕನ್ನಡಿಗನಾಗಿರುವ ಭಾವನೆ ಎಂದರೆ ಬಸವಣ್ಣನವರ ಸರ್ವ ಜನಾಂಗಧ ಶಾಂತಿಯ ತೋಟ' ಎಲ್ಲಾ ಮಾನವಕುಲಕ್ಕೆ ಶಾಂತಿಯ ಉದ್ಯಾನ ಕಲ್ಪನೆ ಮತ್ತು ಕುವೆಂಪು ಅವರ ವಿಶ್ವಮಾನವ' ಸಾರ್ವತ್ರಿಕ ಮಾನವನ ಸಂದೇಶದ ಮೇಲಿನ ನಂಬಿಕೆಯಾಗಿದೆ. ಸರ್ವಜನಾಂಗದ ಶಾಂತಿಯ ತೋಟದಲ್ಲಿ ನಾವೆಲ್ಲರೂ ವಿಶ್ವ ಮಾನವರಾಗಬೇಕು. ವಿಶ್ವಮಾನವ ಸಂದೇಶವನ್ನು ಸಂಭ್ರಮಿಸುವುದೇ ಕನ್ನಡವನ್ನು ಸಂಭ್ರಮಿಸುವುದಾಗಿದೆ ಎಂದು ತಿಳಿಸಿದರು.

## ಗಡುವು ಮುಗಿದರೂ ರಸ್ತೆ ಗುಂಡಿಗಿಲ್ಲ ಮುಕ್ತಿ: ಸಿಎಂ ಸೂಚನೆ

• ಉದಯವಾಹಿನಿ, ಬೆಂಗಳೂರು

ನಗರದಾದ್ಯಂತ ಇರುವ ರಸ್ತೆ ಗುಂಡಿಗಳನ್ನು ಮುಚ್ಚಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದ ಗಡುವನ್ನು ಪೂರೈಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು ವಿಫಲರಾಗಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ ರಾವ್ ಈ ಕುರಿತು ಮಾತನಾಡಿದ್ದು ಮತ್ತು ಕಳೆದ ತಿಂಗಳ ಮಳೆಯಿಂದಾಗಿ ಗುಂಡಿಗಳನ್ನು ತುಂಬುವ ಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾರೆ.

ಸತತ ಮಳೆ ಮತ್ತು ಸಾಮಾಜಿಕ-ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ಪಾಲಿಕೆ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜನೆಗೊಳಿಸಿದ ಹಿನ್ನೆಲೆಯಲ್ಲಿ ರಸ್ತೆ ಗುಂಡಿ ತುಂಬುವ ಕೆಲಸವನ್ನು ಗಡುವಿನ ಮೊದಲು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಮುಂದಿನ ನಾಲ್ಕು ದಿನಗಳಲ್ಲಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದ್ದಾರೆ.

ಉಪಮುಖ್ಯಮಂತ್ರಿ, ಬೆಂಗಳೂರು



☛ ಉದಯವಾಹಿನಿ ಚಿತ್ರ

ಅಭಿವೃದ್ಧಿ ಸಚಿವ ಡಿಕೆ ಶಿವಕುಮಾರ್ ನವೆಂಬರ್ ವೇಳೆಗೆ ಗುಂಡಿಗಳನ್ನು ತುಂಬುವ ಕೆಲಸವನ್ನು ಪೂರ್ಣಗೊಳಿಸಲು 750 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದರು. ಆದರೆ ಈ ಘೋಷಣೆಯ ಒಂದು ದಿನದ ನಂತರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರಿಕಾಗೋಷ್ಠಿ ನಡೆಸಿ, ಅಕ್ಟೋಬರ್ 31 ರೊಳಗೆ ರಸ್ತೆ ಗುಂಡಿಗಳನ್ನು ತುಂಬುವ ಕೆಲಸವನ್ನು ಪೂರ್ಣಗೊಳಿಸುವಂತೆ ಜಿಬಿಎ ವ್ಯಾಪ್ತಿಯ ಎಲ್ಲಾ ಪಾಲಿಕೆಗಳ ಇಂಜಿನಿಯರ್‌ಗಳು ಮತ್ತು ಆಯುಕ್ತರಿಗೆ ಸೂಚನೆ ನೀಡಿದ್ದರು.

> ಕಂಠೀರವ ಸ್ಟುಡಿಯೋದಲ್ಲಿ ಪ್ರತಿಭಟನೆಯನ್ನು ಆಯೋಜಿಸಿದ್ದ ಮಾಜಿ ಸಚಿವ ಮತ್ತು ಮಹಾಲಕ್ಷ್ಮಿ ಲೇಔಟ್ ಶಾಸಕ ಕೆ. ಗೋಪಾಲಯ್ಯ, ನಗರದ ಮೂಲಸೌಕರ್ಯ ಸಮಸ್ಯೆಗಳ ಬಗ್ಗೆ ಮೌನವಾಗಿರುವುದಕ್ಕೆ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಪ್ರತಿಭಟನೆಯ ನಂತರ ನನ್ನ ಕ್ಷೇತ್ರದಲ್ಲಿದ್ದ ರಸ್ತೆ ಗುಂಡಿಗಳನ್ನು ಸರಿಪಡಿಸಲಾಗಿದೆ ಎಂದು ಹೇಳಿದ್ದಾರೆ.


ಏತನ್ಮಧ್ಯೆ, ರಸ್ತೆ ಗುಂಡಿಗಳನ್ನು ಮುಚ್ಚುವಲ್ಲಿ, ಇತರ ಮೂಲಸೌಕರ್ಯ ಯೋಜನೆಗಳ ಕೆಲಸವನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಮಾಡುತ್ತಿರುವುದನ್ನು ವಿರೋಧಿಸಿ ಬಿಜೆಪಿ ನಾಯಕರು, ಕಾರ್ಮಿಕರು ನಗರದಾದ್ಯಂತ ಪ್ರತಿಭಟನೆಗಳನ್ನು ನಡೆಸಿದರು.

## 1500 ಕೋಟಿ ರೂ. ಅವಳಿ ಗೋಪುರ ಯೋಜನೆಗೆ ನಿರಾಸಕ್ತಿ; ಪ್ಲಾನ್ ಕೈ ಬಿಡುವ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶದಲ್ಲಿ 50 ಅಂತಸ್ತಿನ ಅವಳಿ ಗೋಪುರಗಳನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕರ್ನಾಟಕ ಸರ್ಕಾರ ಕೈಬಿಡುವ ಸಾಧ್ಯತೆಯಿದೆ. 1500 ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚದ ಈ ಬೃಹತ್ ಯೋಜನೆಗೆ ಸರ್ಕಾರ ಪದೇ ಪದೇ ಟೆಂಡರ್ ಕರೆದರೂ ಯಾರೂ ಆಸಕ್ತಿ ತೋರಿಸುತ್ತಿಲ್ಲ.

ಪ್ರಸ್ತುತ, ವಿಕಾಸ ಸೌಧದ ಪಕ್ಕದಲ್ಲಿರುವ ಬಹುಮಹಡಿ ಕಟ್ಟಡ, ಶಾಂತಿನಗರದ ಬಿಎಂಟಿಸಿ ಟರ್ಮಿನಸ್, ಕೋರಮಂಗಲದ ಕೇಂದ್ರೀಯ ಸದನ, ವಿವಿ ಟವರ್ಸ್ ಇತರ ಸ್ಥಳಗಳು ಸೇರಿದಂತೆ ಬೆಂಗಳೂರಿನಾದ್ಯಂತ ಸರ್ಕಾರಿ ಕಚೇರಿಗಳು ಹರಡಿಕೊಂಡಿವೆ. 2020 ರಲ್ಲಿ ಬಿ.ಎಸ್. ಯಡಿಯೂರಪ್ಪ



ಮುಖ್ಯಮಂತ್ರಿಯಾಗಿದ್ದಾಗ, ಎಲ್ಲಾ ಕಚೇರಿಗಳನ್ನು ಒಂದೇ ಸ್ಥಳದಲ್ಲಿ ಇರಿಸಲು ಪ್ರಸ್ತಾಪಿಸಲಾಗಿತ್ತು.

ಗಾಂಧಿನಗರ (ಮೆಜೆಸ್ಟಿಕ್) ಆನಂದ್ ರಾವ್ ಸರ್ಕಲ್ ಫ್ಲೈಓವರ್ ಪಕ್ಕದಲ್ಲಿ 8.8 ಎಕರೆ ಭೂಮಿಯನ್ನು ಗುರುತಿಸಲಾಯಿತು. ತಮ್ಮ ಬಜೆಟ್ ಭಾಷಣದ ಸಮಯದಲ್ಲಿ, ಯಡಿಯೂರಪ್ಪ ಅವರು ತಲಾ 25 ಅಂತಸ್ತುಗಳಿಗೆ ಅಂದಾಜು ರೂ. 400 ಕೋಟಿ ವೆಚ್ಚದ ಅವಳಿ ಗೋಪುರ ಯೋಜನೆಯನ್ನು ಘೋಷಿಸಿದ್ದರು, ಇದನ್ನು ಸಚಿವ ಸಂಪುಟದಲ್ಲಿಯೂ ಅನುಮೋದಿಸಲಾಯಿತು.

ಹಿರಿಯ ಅಧಿಕಾರಿಯೊಬ್ಬರು, ಅವರು ಈ ಹಿಂದೆ ಖಾಸಗಿ-ಸಾರ್ವಜನಿಕ ಸಹಭಾಗಿತ್ವಕ್ಕೆ ಹೋಗಲು ನಿರ್ಧರಿಸಿದ್ದರು. ನಂತರ ಈ ಯೋಜನೆಯನ್ನು ಸಾರ್ವಜನಿಕ ವಲಯದ ಸಂಸ್ಥೆಯಾದ ರಾಷ್ಟ್ರೀಯ ಕಟ್ಟಡ ನಿರ್ಮಾಣ ನಿಗಮಕ್ಕೆ ವಹಿಸಲು ಪ್ರಸ್ತಾಪಿಸಿದ್ದರು ಎಂದು ಹೇಳಿದರು. ಆದರೆ ತಾಂತ್ರಿಕ ಮತ್ತು ಆರ್ಥಿಕ ನಿರ್ಬಂಧಗಳಿಂದಾಗಿ ಇಬ್ಬರೂ ಕೆಲಸ ಮಾಡಲಿಲ್ಲ.

ಈ ವರ್ಷದ ಜನವರಿಯಲ್ಲಿ, ಯೋಜನೆಗೆ ಸಲಹೆಗಾರರನ್ನು ನೇಮಿಸುವ ಪ್ರಸ್ತಾಪವನ್ನು ಕ್ಯಾಬಿನೆಟ್ ಅನುಮೋದಿಸಿತು. ಅಂದಿನಿಂದ, ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯೂಡಿ) ಫೆಬ್ರವರಿ, ಜೂನ್ ಮತ್ತು ಅಕ್ಟೋಬರ್‌ನಲ್ಲಿ ಮೂರು ಬಾರಿ ಟೆಂಡರ್‌ಗಳನ್ನು ಕರೆದಿದೆ. ಹಿಂದಿನ ಎರಡು ಬಾರಿ ನಮಗೆ ಬಿಡ್ಡರ್‌ಗಳನ್ನು ಪಡೆಯಲು ಸಾಧ್ಯವಾಗಲಿಲ್ಲ. ಈ ಬಾರಿಯೂ ನಮಗೆ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂದು ನಮಗೆ ಖಚಿತವಿಲ್ಲ. ಯಾರೂ ಭಾಗವಹಿಸದಿದ್ದರೆ, ನಾವು ಯೋಜನೆಯನ್ನು ಕೈಬಿಡಬೇಕಾಗಬಹುದು ಎಂದು ಅಧಿಕಾರಿಯೊಬ್ಬರು ಹೇಳಿದರು.

## ವಿವಿಧ ಕ್ಷೇತ್ರಗಳ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

• ಉದಯವಾಹಿನಿ, ಬೆಂಗಳೂರು

ವಾಟಾಳ್ ನಾಗರಾಜ್ ಸೇರಿದಂತೆ ಕನ್ನಡಪರ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ವಾಪಸ್ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ 70ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 70 ಮಂದಿ ಸಾಧಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯೋತ್ಸವ ಪ್ರಶಸ್ತಿ ನೀಡಿ, ಸನ್ಮಾನಿಸಿದರು. ಬಳಿಕ ಮಾತನಾಡಿದ ಮುಖ್ಯಮಂತ್ರಿ, ಯಾರು ಯಾವ ಭಾಷೆಯಲ್ಲಿ ಮಾತನಾಡಿಸಿದರೂ ಕನ್ನಡದಲ್ಲೇ ಉತ್ತರ ಕೊಡುತ್ತೀವಿ ಎಂಬ ಸಂಕಲ್ಪ ಮಾಡೋಣ ಎಂದರು.

ಕರ್ನಾಟಕ ಉದಯವಾಗಿ 70 ವರ್ಷಗಳಾಗಿರುವುದನ್ನು ಪರಿಗಣಿಸಿ 70 ಮಂದಿ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ರಾಜ್ಯದ ಮುಖ್ಯಮಂತ್ರಿಯಾಗಿ ಯಾರ ಹೆಸರನ್ನೂ ನಾನು ಪ್ರಶಸ್ತಿಗೆ ಶಿಫಾರಸ್ಸು ಮಾಡಿಲ್ಲ. ಆಯ್ಕೆ ಸಮಿತಿ ತೀರ್ಮಾನವೇ ಅಂತಿಮವಾಗಿದ್ದು,

> ಒಂದೇ ವಿಭಾಗದಲ್ಲಿ ಒಬ್ಬರಿಗಿಂತ ಹೆಚ್ಚು ಸಾಧಕರ ಹೆಸರು ಇದ್ದ ಸಂದರ್ಭದಲ್ಲಿ ಮಾತ್ರ ಪ್ರಾದೇಶಿಕ ನ್ಯಾಯ, ಸಾಮಾಜಿಕ ನ್ಯಾಯದ ಕಾರಣಕ್ಕಾಗಿ ಆ ಅರ್ಹರಲ್ಲೇ ಒಬ್ಬರ ಹೆಸರನ್ನು ಅಂತಿಮಗೊಳಿಸಲಾಗಿದೆ. ಮಾಧ್ಯಮಗಳು ಯಾರ ಆಯ್ಕೆ ಬಗ್ಗೆಯೂ ತಕರಾರು ಮಾಡಿಲ್ಲ. ಆದ್ದರಿಂದ ಅರ್ಹರಿಗೇ ಪ್ರಶಸ್ತಿ ಸಿಕ್ಕಿದೆ ಎಂದು ಭಾವಿಸುತ್ತೇನೆ ಎಂದು ಹೇಳಿದರು.



ಅವರ ನಿರ್ಧಾರದಂತೆ ಆಯ್ಕೆ ನಡೆದಿದೆ ಎಂದು ತಿಳಿಸಿದರು.

ಅರ್ಜಿ ಹಾಕಿದವರನ್ನು ಪರಿಗಣಿಸದೇ ಆಯಾ ಕ್ಷೇತ್ರದ ಪರಿಣಿತರನ್ನೇ ಗುರುತಿಸಿ ಆಯ್ಕೆ ಮಾಡಬೇಕು ಎನ್ನುವುದು ನಮ್ಮ ತೀರ್ಮಾನವಾಗಿತ್ತು. ಪುರಸ್ಕೃತರೆಲ್ಲರೂ ಶತಾಯುಶಿಗಳಾಗಿ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಇನ್ನಷ್ಟು ಸಾಧನೆ ಮಾಡಿ, ನಿಮ್ಮ ಬದುಕು ಸಾರ್ಥಕವಾಗಲಿ ಎಂದು ಹಾರೈಸುತ್ತೇನೆ ಎಂದರು.

## ಚೇನಂಡ ಹಾಕಿ ಪಂದ್ಯಾವಳಿಗೆ 1 ಕೋಟಿ ಅನುದಾನ: ಸಿಎಂ ಘೋಷಣೆ

• ಉದಯವಾಹಿನಿ, ಬೆಂಗಳೂರು

ಕೊಡವರು ಅಂದ್ರೆ, ಹಾಕಿ, ಹಾಕಿ ಅಂದ್ರೆ ಕೊಡವರು. ಚೇನಂಡ ಹಾಕಿ ಪಂದ್ಯಾವಳಿಗೆ ಸರ್ಕಾರದಿಂದ ಒಂದು ಕೋಟಿ ಅನುದಾನ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಗೃಹ ಕಚೇರಿ ಕೃಷ್ಣದಲ್ಲಿ 'ಚೇನಂಡ ಹಾಕಿ ಪಂದ್ಯಾವಳಿ'ಯ ಲೋಗೋ ಬಿಡುಗಡೆ ಮಾಡಿ ಸಿಎಂ ಮಾತನಾಡಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೊಡಗಿನ ಹಾಕಿ ಪಟುಗಳು ಮಿಂಚಿದ್ದಾರೆ. ದೇಶಕ್ಕೆ



☛ ಉದಯವಾಹಿನಿ ಚಿತ್ರ

ಕೀರ್ತಿ ತಂದಿದ್ದಾರೆ. ಏಷ್ಯಾ ಗೇಮ್ಸ್ ಸೇರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಹೆಮ್ಮೆ ಮತ್ತು ಘನತೆ ತಂದುಕೊಟ್ಟಿದ್ದಾರೆ ಎಂದು ಶ್ಲಾಘಿಸಿದರು. ಕೊಡವ ಸಂಸ್ಕೃತಿ ತನ್ನದೇ ಆದ ಭಿನ್ನತೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿದೆ. ಇದು ನಮ್ಮ ಸಂಸ್ಕೃತಿಯ ಹೆಮ್ಮೆ ಎಂದರು. 2026ರ ಮೇ ತಿಂಗಳಲ್ಲಿ ನಡೆಯುವ ಪಂದ್ಯಾವಳಿಗೆ ಸರ್ಕಾರದಿಂದ ಒಂದು ಕೋಟಿ ರೂ. ಅನುದಾನ ಕೊಡುತ್ತೇವೆ.

ಪಂದ್ಯಾವಳಿ ನೋಡಲು ನಾನೂ ಬರುತ್ತೇನೆ ಎಂದು ಭರವಸೆ ನೀಡಿದರು. ಶಾಸಕರೂ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಪೊನ್ನಣ್ಣ ಮತ್ತು ಸಚಿವರಾದ ಬೋಸರಾಜು, ಬೈರತಿ ಸುರೇಶ್ ಮತ್ತು ಶಿವರಾಜ್ ತಂಗಡಗಿ ಸೇರಿ ಕೊಡವ ಸಮುದಾಯದ ಎಲ್ಲಾ ಮುಖಂಡರು ಉಪಸ್ಥಿತರಿದ್ದರು.

## ಕೆ-ಸೆಟ್ ಪರೀಕ್ಷೆ ಸುಗಮ, ಶೇ.90ರಷ್ಟು ಹಾಜರು: ಕೆಇಎ

• ಉದಯವಾಹಿನಿ, ಬೆಂಗಳೂರು

ಪದವಿ ಕಾಲೇಜು ಉಪನ್ಯಾಸಕರ ಅರ್ಹತಾ ಪರೀಕ್ಷೆಯಾದ ಕೆ-ಸೆಟ್-25 ರಾಜ್ಯದ 11 ಜಿಲ್ಲೆಗಳಲ್ಲಿ ಸುಗಮವಾಗಿ ನಡೆಯಿತು.

ಪರೀಕ್ಷಾ ಅಕ್ರಮಗಳನ್ನು ತಡೆಯಲು ಬಿಗಿ ಕ್ರಮಗಳನ್ನು ಕೈಗೊಂಡಿದ್ದರಿಂದ ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಒಟ್ಟು 34 ವಿಷಯಗಳಿಗೆ ನಡೆದ ಕೆ-ಸೆಟ್ ಪರೀಕ್ಷೆಗೆ 1.34 ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದರು.

ಇವರ ಪೈಕಿ 1.21 ಲಕ್ಷ (ಶೇ.90) ಮಂದಿ ಹಾಜರಾಗಿದ್ದರು ಎಂದು ವಿವರಿಸಿದ್ದಾರೆ. ಬೆಂಗಳೂರು, ಬಳ್ಳಾರಿ, ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ವಿಜಯಪುರ ಜಿಲ್ಲೆಗಳ 316 ಕೇಂದ್ರಗಳಲ್ಲಿ ಪರೀಕ್ಷೆ ಯಶಸ್ವಿಯಾಗಿ ನಡೆಯಿತು.

# 10 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲು ಸಿದ್ಧತೆ

**ಮೆಟ್ರೋ 3ನೇ ಹಂತದ ಸಿವಿಲ್ ಕಾಮಗಾರಿಗೆ ಮುಹೂರ್ತ! 2031ಕ್ಕೆ ಕಾಮಗಾರಿ ಮುಕ್ತಾಯಕ್ಕೆ ಡೆಡ್‌ಲೈನ್**

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ 3ನೇ ಹಂತದ ಯೋಜನೆ ಶುರುವಿಗೆ ಕೊನೆಗೂ ಮುಹೂರ್ತ ಕೂಡಿಬಂದಿದೆ. ಜೆ.ಪಿ.ನಗರ 4ನೇ ಹಂತದಿಂದ ಹೆಬ್ಬಾಳದ ಕೆಂಪಾಪುರವರೆಗಿನ ಮಾರ್ಗ ನಿರ್ಮಾಣಕ್ಕೆ ಟೆಂಡರ್ ಕರೆಯಲು ಬಿಎಂಆರ್‌ಸಿಎಲ್ ತಯಾರಿ ನಡೆಸಿದೆ.

ಜೆ.ಪಿ.ನಗರ 4ನೇ ಹಂತ-ಹೆಬ್ಬಾಳದ ಕೆಂಪಾಪುರದವರೆಗೆ 28.4 ಕಿ.ಮೀ ಉದ್ದದ ಮೆಟ್ರೋ ನಿರ್ಮಾಣ ಯೋಜನೆಗೆ ಕೇಂದ್ರ ಸರಕಾರವು ಒಂದು ವರ್ಷದ ಹಿಂದೆಯೇ ಅನುಮೋದನೆ ನೀಡಿದೆ. ಆದರೆ, ಈವರೆಗೆ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಟೆಂಡರ್ ಆಹ್ವಾನಿಸಿಲ್ಲ. ಇದಕ್ಕೆ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

ಇದೇ ಮಾರ್ಗದಲ್ಲಿ ಡಬಲ್ ಡೆಕ್ಕರ್ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದರಿಂದ ಟೆಂಡರ್ ಕರೆಯಲು ವಿಳಂಬ ಮಾಡಲಾಗಿತ್ತು. ಈ ಮಾರ್ಗದಲ್ಲಿ ವಯಾಡಕ್ಟ್, ನಿಲ್ದಾಣ, ಡಿಪೊ ನಿರ್ಮಾಣಕ್ಕೆ ಒಟ್ಟು 10 ಪ್ಯಾಕೇಜ್‌ಗಳಲ್ಲಿ ಟೆಂಡರ್

**ವೆಚ್ಚ ಹೆಚ್ಚಳ ಸಾಧ್ಯತೆ**



☛ ಉದಯವಾಹಿನಿ ಚಿತ್ರ

ಕರೆಯಲು ಸಿದ್ಧತೆ ನಡೆಸಿದೆ. ಮೆಟ್ರೋದೊಂದಿಗೆ ಮೇಲ್ಸೇತುವೆ ನಿರ್ಮಿಸುತ್ತಿರುವ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಹಲವು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಈ ತಿಂಗಳಾಂತ್ಯದೊಳಗೆ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ.

ರಾಜ್ಯ ಸರಕಾರವು 2022ರಲ್ಲೇ ಮೆಟ್ರೋ ಮಾರ್ಗ ನಿರ್ಮಿಸಲು ಅನುಮೋದನೆ ನೀಡಿತ್ತು. ಇದಾಗಿ 2 ವರ್ಷಗಳ ಬಳಿಕ ಕೇಂದ್ರ ಸರಕಾರವು 15,611 ಕೋಟಿ ರೂ. ವೆಚ್ಚದ ಯೋಜನೆಗೆ ಒಪ್ಪಿಗೆ ನೀಡಿತು. ಜಪಾನ್ ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆ (ಜೆಐಸಿಎ) 7,577 ಕೋಟಿ ರೂ. ಸಾಲ ನೀಡುತ್ತಿದ್ದು, ಈ ಮೊತ್ತದಲ್ಲೇ ರೈಲುಗಳನ್ನೂ ಖರೀದಿಸಲು ತೀರ್ಮಾನಿಸಲಾಗಿದೆ.

**ವೆಚ್ಚ ಹೆಚ್ಚಳ ಸಾಧ್ಯತೆ:** ಮೆಟ್ರೋ 3ನೇ ಹಂತದ ವೆಚ್ಚವು ಶೇ. 5ರಷ್ಟು ಜಾಸ್ತಿಯಾಗುವ ಸಾಧ್ಯತೆಗಳಿವೆ. ಮೆಟ್ರೊ 1ನೇ ಹಂತದ 42 ಕಿ.ಮೀ ವೆಚ್ಚವು 6,395 ಕೋಟಿಯಿಂದ 14,133 ಕೋಟಿಗೆ ಏರಿಕೆಯಾಗಿತ್ತು. ಎರಡನೇ ಹಂತದ 72 ಕಿ.ಮೀ ವೆಚ್ಚವು 26,405 ಕೋಟಿಯಿಂದ 40,614 ಕೋಟಿಗೆ ಹೆಚ್ಚಳವಾಗಿತ್ತು. 3ನೇ ಹಂತದ ಮಾರ್ಗಗಳಲ್ಲಿ ಒಟ್ಟು 30 ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ.

ಇದರಲ್ಲಿ 7 ಇಂಟರ್‌ಚೇಂಜ್ ನಿಲ್ದಾಣಗಳು ಸೇರಿವೆ. ಈ ಮಾರ್ಗಗಳಲ್ಲಿ 2029ರಿಂದ ವಾಣಿಜ್ಯ ಸೇವೆ ಆರಂಭಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಕಾಮಗಾರಿ ಆರಂಭ ವಿಳಂಬವಾಗಿರುವುದರಿಂದ 2031ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

**ಡಬಲ್ ಡೆಕ್ಕರ್ ಮೇಲ್ಸೇತುವೆ**

**ಜೆ.ಪಿ.ನಗರ 4ನೇ ಹಂತದಿಂದ ಕೆಂಪಾಪುರದವರೆಗೆ 28.4 ಕಿ.ಮೀ ಮತ್ತು ಮಾಗಡಿ ರಸ್ತೆಯ ಹೊಸಹಳ್ಳಿಯಿಂದ ಕಡಬಗೆರೆವರೆಗೆ 8.6 ಕಿ.ಮೀ ಸೇರಿ ಒಟ್ಟು 37.12 ಕಿ.ಮೀ ಮಾರ್ಗದಲ್ಲಿ ಡಬಲ್ ಡೆಕ್ಕರ್ ನಿರ್ಮಾಣಕ್ಕೆ 9,700 ಕೋಟಿ ರೂ. ವೆಚ್ಚ ಅಂದಾಜಿಸಿ ಸಚಿವ ಸಂಪುಟವು ಸೆಪ್ಟೆಂಬರ್‌ನಲ್ಲಿ ಅನುಮೋದನೆ ನೀಡಿದೆ. ರಾಜ್ಯ ಸರಕಾರವು ಶೇ.50, ಜಿಬಿಎ ಶೇ. 10ರಷ್ಟು ಮೊತ್ತವನ್ನು ಭರಿಸಲಿವೆ. ಉಳಿದ ಶೇ. 40ರಷ್ಟನ್ನು ಸಾಲದ ರೂಪದಲ್ಲಿ ಪಡೆಯಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.**

# ಕಾಲುಬಾಯಿ ಜ್ವರದಿಂದ ಜಾನುವಾರುಗಳನ್ನ ರಕ್ಷಿಸಿ: ಗಣೇಶ್ ಪ್ರಸಾದ್ ಸಲಹೆ

• ಉದಯವಾಹಿನಿ ಗುಂಡ್ಲುಪೇಟೆ

ತಾಲ್ಲೂಕಿನ ಎಲ್ಲಾ ರೈತರು ಜಾನುವಾರುಗಳಿಗೆ ತಪ್ಪದೇ ಲಸಿಕೆ ಹಾಕಿಸುವ ಮೂಲಕ ಕಾಲುಬಾಯಿ ಜ್ವರದಿಂದ ಜಾನುವಾರುಗಳನ್ನ ರಕ್ಷಿಸಿ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಸಲಹೆ ನೀಡಿದರು. ತಾಲ್ಲೂಕಿನ ಅಂಕಹಳ್ಳಿ ಗ್ರಾಮದಲ್ಲಿ 8 ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರ, ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ 8ನೇ ಸುತ್ತಿನ ಕಾಲುಬಾಯಿ ಜ್ವರದ ಲಸಿಕೆ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ತಾಲ್ಲೂಕಿನಲ್ಲಿ ಸಾಕಷ್ಟು ರೈತರಿಗೆ ಹೈನುಗಾರಿಕೆ ಮುಖ್ಯ ಕಸುಬಾಗಿದೆ. ಹಸುಗಳನ್ನು ನೆಚ್ಚಿಕೊಂಡು ಜೀವನ ನಡೆಸುವ ರೈತರಿಗೆ



ಜಾನುವಾರುಗಳ ಆರೋಗ್ಯ ತಮ್ಮ ಆರೋಗ್ಯದಷ್ಟೆ ಮುಖ್ಯವಾಗಿದೆ. ಅಷ್ಟು ಕಾಳಜಿ ವಹಿಸುವುದನ್ನು ನಾವು ಕಾಣುತ್ತೇವೆ. ಇದನ್ನು ಮನಗಂಡು ರೈತರ ಅನುಕೂಲ ಮತ್ತು ಹಸುಗಳ ಆರೋಗ್ಯದಿಂದ ಇರಲಿ ಎಂದು ಲಸಿಕಾ ಕಾರ್ಯಕ್ರಮವನ್ನು ನ.3ರಿಂದ ಡಿ.2ರ ವರೆಗೆ ತಿಂಗಳ ಕಾಲ ಅನುಷ್ಠಾನಗೊಳಿಸಲಾಗುತ್ತದೆ. ಆದ್ದರಿಂದ ತಾಲ್ಲೂಕಿನ ಎಲ್ಲಾ ರೈತರು ಜಾನುವಾರುಗಳಿಗೆ ತಪ್ಪದೇ ಲಸಿಕೆ ಹಾಕಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಮುಂಜಾಗ್ರತೆಯಾಗಿ ಲಸಿಕೆ ಹಾಕುವುದು ಕಾಯಿಲೆಗಳ ಹರಡುವಿಕೆ ತಡೆಯುವ ಪರಿಣಾಮಕಾರಿ ಕ್ರಮವಾಗಿದೆ. ಆದ್ದರಿಂದ ವೈದ್ಯರಿಗೆ ಸಹಕಾರ ನೀಡುವ ಲಸಿಕೆ ಹಾಕಿಸಿ. ಏನೇ ಸಮಸ್ಯೆಗಳಿದ್ದರೂ ಮುಕ್ತವಾಗಿ ಚರ್ಚಿಸಿ, ಲಸಿಕೆ ಹಾಕಿಸುವುದನ್ನು ಯಾವುದೇ ಕಾರಣಕ್ಕೂ ತಪ್ಪಿಸಬೇಡಿ ಎಂದು ಮನವಿ ಮಾಡಿದರು. ಮುಖ್ಯ ಪಶು ವೈದ್ಯಾಧಿಕಾರಿ ಡಾ.ಎಸ್.ಮಾದೇಶ್ ಮಾತನಾಡಿ, ತಾಲ್ಲೂಕಿನಲ್ಲಿ 65000 ಜಾನುವಾರುಗಳಿದ್ದು, ನ.3ರಿಂದ ಡಿ.2ರ ತನಕ ಒಂದು ತಿಂಗಳ ಕಾಲ ಮನೆ ಮನೆ ತೆರಳಿ ಇಲಾಖೆ ಸಿಬ್ಬಂದಿ ಲಸಿಕೆ ನೀಡುತ್ತಾರೆ. ಕಾಲು ಬಾಯಿ ಜ್ವರ ವೈರಾಣುವಿನಿಂದ ಬರುವ ಅಂಟು ರೋಗವಾಗಿದ್ದು, ಇದು ಕಾಣಿಸಿಕೊಂಡರೆ ರೈತರಿಗೆ ಆರ್ಥಿಕವಾಗಿ ನಷ್ಟವಾಗುತ್ತದೆ. ಆದ್ದರಿಂದ ರೈತರು ಪಶು ಇಲಾಖೆ ಜೊತೆಗೆ ಸಹಕರಿಸಿ ಲಸಿಕೆ ಹಾಕಿಸುವ ಮೂಲಕ ಜಾನುವಾರುಗಳನ್ನು ರೋಗದಿಂದ ಮುಕ್ತಗೊಳಿಸಬೇಕೆಂದು ಮನವಿ ಮಾಡಿದರು. ಈ ವೇಳೆ ಪಶು ವೈದ್ಯರಾದ ಡಾ.ಚೇತನ್, ಪಶು ಪರೀಕ್ಷಕ ಬಾಲಸುಬ್ರಮಣ್ಯಂ, ಗ್ರಾಮದ ಮುಖಂಡರಾದ ಪರಮೇಶ್ವರಪ್ಪ, ಉಮೇಶ್, ಅಭಿಷೇಕ್ ಸೇರಿದಂತೆ ಪಶು ವೈದ್ಯ ಸೇವಾ ಇಲಾಖೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಹುಲಿ ದಾಳಿ: ಆಕ್ರೋಶಕ್ಕೆ ಮಣಿದ ಜನಪ್ರತಿನಿಧಿಗಳು

## ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಮೃತ ರೈತರ ಮನೆಗೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿಕೆ

• ಉದಯವಾಹಿನಿ ಸರಗೂರು

ತಾಲ್ಲೂಕಿನ ಕೂಡಗಿ ಗ್ರಾಮದ ರೈತ ದೊಡ್ಡನಿಂಗಯ್ಯ ಹುಲಿ ದಾಳಿಯಿಂದ ಮೃತಪಟ್ಟ ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಮೃತ ರೈತರ ಮನೆಗೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಬಳಿಕ ಗ್ರಾಮಸ್ಥರು ಹಾಗೂ ಅಧಿಕಾರಿಗಳ ಸಭೆ ನಡೆಸಿದರು. 'ಕಾಡುಪ್ರಾಣಿಗಳು–ಮಾನವ ಸಂಘರ್ಷಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಕಡಿವಾಣ ಹಾಕಬೇಕು. ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಹುಲಿ ಓಡಾಟದ ಬಗ್ಗೆ ದೂರು ಬಂದಿದ್ದರೂ ಬೋನು ಇಡುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದರೆ ಕ್ರಮ ವಹಿಸಬೇಕು. ನೊಂದ ಕುಟುಂಬಕ್ಕೆ ಪರಿಹಾರ ಕಲ್ಪಿಸಬೇಕು' ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು.

ಕಾಡುಪ್ರಾಣಿಗಳ ಹಾವಳಿ ತಡೆಗೆ ಅರಣ್ಯ ಇಲಾಖೆ ಸಿಬ್ಬಂದಿ ಕಾಡಂಚಿನ ಗ್ರಾಮಗಳಲ್ಲಿ ಗಸ್ತು ಹೆಚ್ಚಿಸಬೇಕು. ರೈಲು ಕಂಬಿ



ಹಾಕಬೇಕು. ಅರಣ್ಯ ಇಲಾಖೆ ಅಧಿಕಾರಿಗಳು ಹೊಂದಾಣಿಕೆಯಿಂದ ಕೆಲಸ ಮಾಡಬೇಕು' ಎಂದು ನಿರ್ದೇಶನ ನೀಡಿದರು.

**ಸಭೆ:** ಪ್ರಾಣಿಗಳ ಹಾವಳಿ ತಡೆ ಸಂಬಂಧ ಅಧಿಕಾರಿಗಳು, ರೈತರ ಸಭೆಯನ್ನು ಚಾಮರಾಜನಗರದಲ್ಲಿ ಕರೆಯಲಾಗಿದೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಭಾಗವಹಿಸಲಿದ್ದಾರೆ.

ಕಾಡಂಚಿನ ಗ್ರಾಮಗಳಲ್ಲಿನ ಸಮಸ್ಯೆಗಳೇನು ಕಂದಾಯ ಅರಣ್ಯ ಇಲಾಖೆ ನಡುವಿನ ವ್ಯತ್ಯಾಸ, ಅಕ್ರಮ ರೆಸಾರ್ಟ್‌ಗಳಿಂದ ಆಗುವ ಅನಾನುಕೂಲಗಳೇನು? ಸಫಾರಿಗೆ ಕಡಿವಾಣ ಹಾಕಬೇಕೆ ಎಂಬುದು ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಲಾಗುವುದು' ಎಂದು ತಿಳಿಸಿದರು.

> **'ಕಾಡಂಚಿನ ಗ್ರಾಮಗಳ ರೈತರು ಘಟನಾ ಸ್ಥಳದ ಸಮೀಪಕ್ಕೆ ಹೋಗಬಾರದು. ತಾಲ್ಲೂಕಿನಲ್ಲಿ ಮೂರು ಘಟನೆ ನಡೆದಿದೆ. ಇದಕ್ಕೆ ಅರಣ್ಯ ಅಧಿಕಾರಿಗಳೇ ನೇರ ಹೊಣೆಯಾಗಬೇಕು. ಹಿರಿಯ ಅಧಿಕಾರಿಗಳು ಆದೇಶ ನೀಡಿದರೆ ಕಿರಿಯ ಅಧಿಕಾರಿಗಳು ತಪ್ಪದೇ ಕೆಲಸ ಮಾಡಬೇಕು. ಅರಣ್ಯದಲ್ಲಿ ಗಸ್ತು ಮಾಡಬೇಕು. ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕ್ರಮ ವಹಿಸಬೇಕು. ಹುಲಿ ಸೆರೆ ಹಿಡಿಯಬೇಕು' ಎಂದರು.**
> **–ಶಾಸಕ ಅನಿಲ್ ಚಿಕ್ಕಮಾದು**

> **ಅರಣ್ಯಾಧಿಕಾರಿಗಳು ಕೆಲಸದ ಬದಲಿಗೆ ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿದ್ದಾರೆ. ರೈತ ಸಂಪರ್ಕ ಸಭೆ ಮಾಡಿಲ್ಲ. ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಅಗತ್ಯ**
> **–ಅನಿಲ್ ಚಿಕ್ಕಮಾದು ಶಾಸಕ**

ಸಂಸದ ಸುನೀಲ್ ಬೋಸ್, ಶಾಸಕ ಅನಿಲ್ ಚಿಕ್ಕಮಾದು ಅವರೂ ದೊಡ್ಡನಿಂಗಯ್ಯ ಮೃತದೇಹದ ದರ್ಶನ ಪಡೆದರು. ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ, ಪರಿಹಾರ ಕಲ್ಪಿಸುವ ಭರವಸೆ ನೀಡಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ, 'ದೊಡ್ಡನಿಂಗಯ್ಯ ಅವರ ಮೇಲೆ ಹುಲಿ ದಾಳಿ ನಡೆಸಿದಂತಹ ಘಟನೆ ಮರುಕಳಿಸದಂತೆ ಇಲಾಖೆ ಕ್ರಮ ವಹಿಸಬೇಕು. ಕುಟುಂಬದ ಸದಸ್ಯರಲ್ಲಿ ಇಬ್ಬರಿಗೆ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನೀಡಬೇಕು. ಈ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ವಹಿಸಬೇಕು' ಎಂದು ಸೂಚಿಸಿದರು.

# ಶಾಲಾ ಸುತ್ತ ಅಶುಚಿತ್ವ ವಾತಾವರಣ: ಕೆಟ್ಟ ವಾಸನೆಯಿಂದ ಬೇಸತ್ತ ವಿಧ್ಯಾರ್ಥಿಗಳು

• ಉದಯವಾಹಿನಿ ಗುಂಡ್ಲುಪೇಟೆ

ಸ್ವಚ್ಛ ಪರಿಸರದ ಕುರಿತು ಶಾಲೆಯಲ್ಲಿ ಪಾಠ ಪ್ರವಚನ ಕೇಳುವ ಮಕ್ಕಳು ಶಾಲೆಯಿಂದ ಹೊರಬಂದರೆ ಸುತ್ತಲೂ ಕಸದ ರಾಶಿಯಲ್ಲೇ ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ತಾಲ್ಲೂಕಿನ ಶಿವಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಲ್ಲಿಗೌಡನಹಳ್ಳಿ ಗ್ರಾಮದ ಸರ್ಕಾರಿ ಶಾಲಾ ಮುಂಭಾಗದಲ್ಲಿನ ಕೆಟ್ಟ ವಾತಾವರಣದ ದೃಶ್ಯ ಮಕ್ಕಳನ್ನ ಜರ್ಜರಿತಗೊಳಿಸಿದೆ. ಶಾಲೆಯ ಸುತ್ತಲಿನ ಪರಿಸರ ಹದಗೆಟ್ಟುಹೋಗಿದ್ದು ಕೊಠಡಿಯೊಳಗೆ ಒಲ್ಲದ ಮನಸ್ಸಿನಿಂದ ಕೂರಬೇಕಾಗಿದೆ.

ಮಕ್ಕಳಿಗೆ ಅನುಕೂಲವಾಗುವಂತೆ ಸ್ವಚ್ಛತೆಗೊಳಿಸಲು ಗ್ರಾಮ ಪಂಚಾಯತಿಗೆ ಮನವಿ ನೀಡಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮದ ಮುಖಂಡರೊಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ. ಒಂದೆಡೆ ಗ್ರಾಮ ಪಂಚಾಯತಿ ಸ್ವಚ್ಛತಾ ಕಾರ್ಯಕ್ಕೆ ಮುಂದಾಗಿಲ್ಲ ಎಂಬುದು



ಸಮಸ್ಯೆಯಾದರೆ ಶಾಲಾ ಅಕ್ಕಪಕ್ಕದ ಮನೆಯವರು ಕಸವನ್ನ ತಂದು ಅಲ್ಲಿಯೇ ಸುರಿಯುತ್ತಿರುವುದು ಬೇಸರದ ವಿಚಾರವಾಗಿದೆ.

ಜಾನುವಾರುಗಳ ಸಗಣಿಯನ್ನೂ ಸಹ ಮುಂಭಾಗದಲ್ಲಿಯೇ ಶೇಖರಣೆ ಮಾಡುತ್ತಿರುವುದರಿಂದ ನೊಣ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು ಮಕ್ಕಳು ಸಾಂಕ್ರಾಮಿಕ ರೋಗದ ಭೀತಿಯನ್ನ ಎದುರಿಸುತ್ತಿವೆ ಎಂದು ಪೋಷಕರು ದೂರಿದ್ದಾರೆ.

> **ಶಾಲಾ ಆವರಣದ ಸುತ್ತಲಿನ ಅಶುಚಿತ್ವ ವಾತಾವರಣ ಕುರಿತಂತೆ ಗ್ರಾಮಪಂಚಾಯತಿಗೆ ಮಾಹಿತಿ ನೀಡುವ ಮೂಲಕ ಸ್ವಚ್ಛತೆಗೊಳಿಸುವಂತೆ ಮನವಿ ಮಾಡಿದ್ದೇವೆ, ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು ಸ್ಥಳ ಪರಿಶೀಲನೆ ನಡೆಸಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲ, ಶಾಲಾ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಗ್ರಾಮಪಂಚಾಯತಿ ಸ್ವಚ್ಛತಾ ಕಾರ್ಯಕ್ಕೆ ಮುಂದಾಗಬೇಕಿದೆ.**
> **–ರಾಜೇಶ್, ಕಲ್ಲಿಗೌಡನಹಳ್ಳಿ**

ಗ್ರಾಮದ ಶಾಲೆಯಲ್ಲಿ ತಮ್ಮ ಮಕ್ಕಳೇ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂಬ ಸಾಮಾನ್ಯ ಜ್ಞಾನವು ಇಲ್ಲದ ಮಂದಿ ಕಸವನ್ನ ತಂದು ಸುರಿಯುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

# ಭಕ್ತರಹಳ್ಳಿ ಅರಸನಕೆರೆಗೆ ಬಾಗಿನ ಅರ್ಪಣೆ

• ಉದಯವಾಹಿನಿ ಚಿಂತಾಮಣಿ

ಭವಿಷ್ಯದಲ್ಲಿ ಎತ್ತಿನಹೊಳೆ ನೀರು ಸಂಗ್ರಹಿಸಿಕೊಳ್ಳುವ ನಿಟ್ಟಿನಲ್ಲಿ ನಗರಕ್ಕೆ ಕುಡಿಯುವ ನೀರು ಪೂರೈಕೆ ಮಾಡುವ ಭಕ್ತರಹಳ್ಳಿ ಅರಸನ ಕೆರೆಯನ್ನು ರೂ.35 ಕೋಟಿ ವೆಚ್ಚದಲ್ಲಿ ವಿಸ್ತರಣೆ ಮಾಡಲಾಗುವುದು.

ಇದಕ್ಕೆ ಸಚಿವ ಸಂಪುಟದ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಭಕ್ತರಹಳ್ಳಿ ಅರಸನಕೆರೆ ಕೋಡಿ ಹರಿದಿರುವುದರಿಂದ ನಗರಸಭೆ, ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ಸಂಯುಕ್ತವಾಗಿ ಬಾಗಿನ ಅರ್ಪಿಸಲಾಯಿತು.

ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಪೂರ್ವಿಕರು ಸಾವಿರಾರು ಕೆರೆಗಳನ್ನು ನಿರ್ಮಾಣ ಮಾಡಿದ್ದರು.

ಇದರ ಫಲವಾಗಿ ಕೃಷಿ ಮತ್ತು ಕುಡಿಯುವ ನೀರನ್ನು ಬಳಸುತ್ತಿದ್ದೇವೆ. ಭಕ್ತರಹಳ್ಳಿ ಕೆರೆ ಈ ಭಾಗದ ರೈತರ ಜೀವನಾಡಿ. ಕೋರ್ಲಪರ್ತಿ ವೆಂಕಟೇಶ ಸಾಗರ ಮತ್ತು ಭಕ್ತರಹಳ್ಳಿ ಕೆರೆಗಳು ದೊಡ್ಡ ಕೆರೆಗಳು. ಮುಂದಿನ



ಪೀಳಿಗೆಗೆ ಭೂಮಿಯ ಫಲವತ್ತತೆ, ಉತ್ತಮ ಗಾಳಿ, ಶುದ್ಧ ಕುಡಿಯುವ ನೀರು ಕೊಡುವ ಹಿನ್ನಲೆಯಲ್ಲಿ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ. ಇದಕ್ಕೆ ಜನರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಎಚ್.ಎನ್.ವ್ಯಾಲಿ ಯೋಜನೆಯಿಂದ ರೂ.237 ಕೋಟಿ ವೆಚ್ಚದಲ್ಲಿ ಚಿಂತಾಮಣಿಯ 119 ಕೆರೆಗಳು ಹಾಗೂ ಶಿಡ್ಲಘಟ್ಟದ 45 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೂ ಸಂಪುಟ ಅನುಮೋದನೆ ನೀಡಿದ್ದು, ಶೀಘ್ರವೇ ಕಾಮಗಾರಿ ಆರಂಭವಾಗಲಿದೆ. ಕೆ.ಸಿ. ವ್ಯಾಲಿಯಲ್ಲಿ ಮೊದಲ ಹಂತದಲ್ಲಿ 6 ಹಾಗೂ ಎರಡನೇ ಹಂತದಲ್ಲಿ 40 ಕೆರೆಗಳನ್ನು ತುಂಬಿಸಲಾಗುತ್ತದೆ ಎಂದರು.

# ಮಳ್ಳೂರಲ್ಲಿ 15ನೇ ಶತಮಾನದ ಶಾಸನ ಪತ್ತೆ

• ಉದಯವಾಹಿನಿ ಶಿಡ್ಲಘಟ್ಟ

ತಾಲ್ಲೂಕಿನ ಮಳ್ಳೂರು ಗ್ರಾಮದ ವೃತ್ತದ ಬಳಿ ಹಂದಿಬೇಟೆಯನ್ನಾಡುವ ನಾಯಿಯ ಸ್ಮಾರಕದ ಶಿಲ್ಪ ಪತ್ತೆಯಾಗಿದೆ. ಅದರ ಜತೆಯಲ್ಲಿ ನಾಲ್ಕು ಸಾಲುಗಳ ಕನ್ನಡ ಶಾಸನ ಕೂಡ ಕಂಡುಬಂದಿದೆ.

ಮಣ್ಣಿನಲ್ಲಿ ಹುದುಗಿದ್ದ ಈ ಕಲ್ಲುಗಳನ್ನು ಗ್ರಾಮಸ್ಥರಾದ ನಾರಾಯಣಸ್ವಾಮಿ, ಮಂಜುನಾಥ್, ನಾಣಿ, ರೆಡ್ಡಿ, ಬೇಕರಿ ವೆಂಕಟೇಶ್, ಮಧು, ಶ್ರೀನಿವಾಸ ನಾಯಕ್, ನರಸಿಂಹಮೂರ್ತಿ, ಅಶೋಕ್ ಹೊರತೆಗೆದಿದ್ದಾರೆ. ಶಾಸನತಜ್ಞ ಧನಪಾಲ್ ಮತ್ತು ತ್ಯಾಗರಾಜ್ ಅದರಲ್ಲಿ ಕೆತ್ತಿರುವ ಕನ್ನಡ ಲಿಪಿಯನ್ನು ಓದಿದ್ದಾರೆ.

ಈ ಶಿಲ್ಪವು ಶಾಸನದ ಲಿಪಿಯ ದೃಷ್ಟಿಯಿಂದ ಸುಮಾರು 15ನೇ ಶತಮಾನಕ್ಕೆ ಅಂದರೆ ಕ್ರಿ.ಶ. 1432ರ ಮಾರ್ಚ್ 8ರ ಶನಿವಾರಕ್ಕೆ ಅಂದಾಜಿಸಬಹುದು. ಗ್ರಾಮದ ಹೊಲಗಳಲ್ಲಿ ಹಂದಿಯ ಉಪಟಳ ಹೆಚ್ಚಾದಾಗ ಗ್ರಾಮದ ಗಡ್ಡೆದಡೆ ವೊಂಡೆದೆಯರ ಬಾಣ ಎಂಬಾತನು ತನ್ನ ಮುದ್ದಿನ ಬೀಮಾಂಚ ಎಂಬ ನಾಯಿಯೊಡನೆ ಬೇಟೆಗೆ ಹೋದಾಗ, ಬಲಿಷ್ಠ ಹಂದಿಯೊಡನೆ ಹೋರಾಡಿ ಹಂದಿಯನ್ನು ಕೊಂದು ನಾಯಿಯೂ ಮರಣಹೊಂದಿದಾಗ, ತನ್ನ ಮುದ್ದಿನ ನಾಯಿಯ ವೀರತ್ವ ಸೂರ್ಯ ಚಂದ್ರರು ಇರೋವರೆಗೂ ಮುಂದಿನ ಜನಾಂಗಕ್ಕೆ ತಿಳಿಯಲು ಈ ಸ್ಮಾರಕವನ್ನು ಹಾಕಲಾಗಿದೆ ಎಂದು ಅವರು ವಿವರಿಸಿದರು.

ಈ ಬಗ್ಗೆ ಮತ್ತಷ್ಟು ವಿವರಗಳನ್ನು ನೀಡಿದ ಶಾಸನತಜ್ಞ ಡಿ.ಎನ್.ಸುದರ್ಶನರೆಡ್ಡಿ ಅವರು, ಹಂದಿಬೇಟೆ ವೀರಗಲ್ಲು ಎಂದರೆ ಸಾಮಾನ್ಯ ಎಂದು ನಾವು ಭಾವಿಸಬಾರದು. ಇಂತಹುದೇ ಒಂದು ವೀರಗಲ್ಲು ಕನ್ನಡನಾಡಿನ ಚರಿತ್ರೆಯ ಒಂದು ಮಹತ್ವದ ಘಟನೆ–ಚೋಳರ ಮೇಲಿನ ಕನ್ನಡಿಗರ ವಿಜಯದ ಬಗ್ಗೆ ನಮಗೆ ತಿಳಿಸಿಕೊಡುತ್ತದೆ. ಮಂಡ್ಯ ಜಿಲ್ಲೆಯ ಆತಕೂರಿನಲ್ಲಿ ಇರುವ ಹಂದಿಬೇಟೆ ವೀರಗಲ್ಲು ತಕ್ಕೋಳಂ ಕದನದ ವಿವರಗಳನ್ನು ಒಳಗೊಂಡಿದೆ.

ಕ್ರಿ.ಶ.943ನೇ ಇಸವಿಯಲ್ಲಿ ರಾಷ್ಟ್ರಕೂಟರ ಮೂರನೇ ಕೃಷ್ಣನು ಚೋಳರ ಯುವರಾಜ ರಾಜಾದಿತ್ಯನ ವಿರುದ್ಧ ಅರಕೋಣಂ



ಬಳಿ ಯುದ್ಧ ಮಾಡಿದ. ಅವನ ಪರವಾಗಿ ಗಂಗ, ನೊಳಂಬ ರಾಜರೂ ಹೋರಾಡಿದ್ದರು.

ಹೋರಾಟದಲ್ಲಿ ಗಂಗರ ರಾಜಕುಮಾರ ಇಮ್ಮಡಿ ಬೂತುಗನು ರಾಜಾದಿತ್ಯನು ಕುಳಿತಿದ್ದ ಆನೆಯ ಮೇಲೆ ಜಿಗಿದು ಅಂಬಾರಿಯನ್ನೇ ಸಮರಾಂಗಣ ಮಾಡಿಕೊಂಡು ರಾಜಾದಿತ್ಯನನ್ನು ಕೊಂದನು. ಜಯವು ಕನ್ನಡಿಗರಾದ ರಾಷ್ಟ್ರಕೂಟ ಮಿತ್ರಪಡೆಯದಾಯಿತು. ತಮಿಳುನಾಡು ಕನ್ನಡಿಗರ ವಶವಾಯಿತು. ಮೂರನೇ ಕೃಷ್ಣ ರಾಮೇಶ್ವರದಲ್ಲಿ ವಿಜಯಸ್ಥಂಭನೆಟ್ಟನು. ಈ ಯುದ್ಧದ ಸಾಹಸಿ ಬೂತುಗನಿಗೆ ರಾಷ್ಟ್ರಕೂಟರ ಮೂರನೇ ಕೃಷ್ಣ ಬೆಳುವಲದ ವರೆಗಿನ ಪ್ರದೇಶ ಬಳುವಳಿಯಾಗಿ ಕೊಟ್ಟರೆ, ಬೂತುಗನ ಅಂಕಕಾರ ಮನಲೇರನಿಗೆ ಆತಕೂರು ಪ್ರದೇಶ ಕೊಡುಗೆಯಾಗಿ ಸಿಕ್ಕಿತು. ಜೊತೆಗೆ ಮನಲೇರನಿಗೆ ಅವನ ಕೋರಿಕೆಯ ಮೇರೆಗೆ ಕೃಷ್ಣನ ನಾಯಿ ಕಾಳಿಯೂ ಸಿಕ್ಕಿತು.

ಮುಂದೊಂದು ದಿನ ಕಾಳಿ ನಾಯಿಯು ಒಂದು ಬೃಹತ್ ಕಾಡುಹಂದಿ ಜತೆ ಹೋರಾಡುವಾಗ ಮರಣಿಸಿತು. ಮನಲೇರ ಅದಕ್ಕೆ ಒಂದು ಆಲಯ ಕಟ್ಟಿಸಿ, ಅದರ ಪೂಜೆಗೆ ಜನರನ್ನು, ನಿರ್ವಹಣೆಗೆ ಭೂಮಿಯನ್ನೂ ವ್ಯವಸ್ಥೆ ಮಾಡಿದ. ಈ ಎಲ್ಲಾ ಅಂಶಗಳೂ ಆತಕೂರು ಹಂದಿಬೇಟೆ ವೀರಗಲ್ಲಿನಲ್ಲಿ ನಮಗೆ ಓದಲು ಸಿಗುತ್ತವೆ. ಈ ವೀರಗಲ್ಲು ಸಿಗಲಿಲ್ಲ ಎಂದಿದ್ದರೆ ಚೋಳರ ಪರಾಜಯ, ಕನ್ನಡಿಗರ ಈ ವಿಜಯ ಇತಿಹಾಸದಲ್ಲಿ ಮರೆಯಾಗಿ ಹೋಗುತ್ತಿತ್ತು ಎಂದು ಅವರು ವಿವರಿಸಿದರು.

# ಮಾನವ–ಪ್ರಾಣಿ ಸಂಘರ್ಷ ತಡೆಗೆ ಸಿಬ್ಬಂದಿ ನಿಯೋಜನೆ

• ಉದಯವಾಹಿನಿ ಚಾಮರಾಜನಗರ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮಾನವ ಹಾಗೂ ಪ್ರಾಣಿ ಸಂಘರ್ಷ ತಡೆಯಲು ಉಪ ವಲಯ ಅರಣ್ಯಾಧಿಕಾರಿಗಳು, ಗಸ್ತು ವನಪಾಲಕರು, ಅರಣ್ಯ ವೀಕ್ಷಕರನ್ನು ತಾತ್ಕಾಲಿಕವಾಗಿ ಒಂದು ವಾರದ ಅವಧಿಗೆ ನಿಯೋಜಿಸಿ ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಆದೇಶ ಹೊರಡಿಸಿದ್ದಾರೆ.ಉಪ ವಲಯ ಅರಣ್ಯಾಧಿಕಾರಿಗಳಾದ ಕೆ.ಉದಯ್ ಕುಮಾರ್, ಎ.ವಿ.ಶಿವಶಂಕರ್, ಜಿ.ಶರಣ್, ಮನೋಜ್ ಕುಮಾರ್, ಭಾನುಪ್ರಕಾಶ್, ಚಿದಾನಂದ, ಮುಥುನ್ ಗೌಡ, ಮನೋಜ್, ಶ್ರೀ ಹಾಲೇಶ ಗೊರವರ, ಶ್ರೀನಿವಾಸ ಮೂರ್ತಿ, ಟಿ.ಸಿದ್ದರಾಜು, ಅಮೃತ್ ದೇಸಾಯಿ, ಶರತ್, ದೇವರಾಜ್ ಬಾನರ್, ಬಿ.ವಿ.ಬಾಲಕೃಷ್ಣ, ನಿಂಗಯ್ಯ, ತೌಫಿಕ್ ಬಾಷಾ, ಬಿ.ನಾಗರಾಜ, ಕೆ.ವಿ.ಲೋಕೇಶ್, ಸುದೀಪ ತಲಗೇರಿ, ಚೆನ್ನವೀರಪ್ಪ ಪೂಜಾರ, ಮೋಕ್ಷಜ್ಞ, ಪ್ರದೀಪ ಬಿ.ಎನ್. ಎಂ.ಜೆ.ಅಶ್ವಿನಿ ಅವರನ್ನು ನಿಯೋಜಿಸಲಾಗಿದೆ.

# ಪ್ರವಾಸಿತಾಣ ವೀಕ್ಷಿಸಲು ಪ್ಯಾಕೇಜ್ ರೂಪಿಸಿ: ಕೊತ್ತೂರು ಮಂಜುನಾಥ್

• ಉದಯವಾಹಿನಿ ಕೋಲಾರ

ಕರ್ನಾಟಕ ರಾಜ್ಯೋತ್ಸವದ ವಿಶೇಷ ಸಂದರ್ಭದಲ್ಲಿ ಸಾರ್ವಜನಿಕರು ದೇವಸ್ಥಾನಗಳನ್ನು ವೀಕ್ಷಿಸಲು ರಾಜ್ಯ ರಸ್ತೆ ಸಾರಿಗೆಯಿಂದ ಒಂದು ದಿನದ ಟೂರ್ ಪ್ಯಾಕೇಜ್ ರೂಪಿಸುವಂತೆ ಶಾಸಕ ಕೊತ್ತೂರು ಮಂಜುನಾಥ್, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿಗೆ ಸೂಚನೆ ನೀಡಿದರು.

ನಗರದಲ್ಲಿ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಜಿಲ್ಲೆಯ ಪ್ರವಾಸಿತಾಣಗಳ ವೀಕ್ಷಿಸಲು ಸಾರ್ವಜನಿಕರಿಂದ ಹೆಚ್ಚಿನ ಬೇಡಿಕೆ ಬರುತ್ತಿರುವ ಹಿನ್ನೆಲೆಯಲ್ಲಿ ಪ್ರವಾಸಿ ಕ್ಷೇತ್ರಗಳ ವೀಕ್ಷಣೆಗೆ ವಿಶೇಷ ಬಸ್ಸುಗಳ ವ್ಯವಸ್ಥೆ ಮಾಡಬೇಕು ಎಂದರು. ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುವಾಗ ದೂರುಗಳು ಸಹಜ.

ಯಾವುದನ್ನೂ ತಲೆಕೆಡಿಸಿಕೊಳ್ಳದೇ ಪ್ರಾಮಾಣಿಕವಾಗಿ ಕೆಲಸ ಮಾಡಿ ಉತ್ತಮ



ನೌಕರರಾಗಬೇಕು. ಇವತ್ತು ಕೇವಲ 20 ಚಾಲಕರಿಗಷ್ಟೇ ಉತ್ತಮ ಚಾಲಕರಿಗೆ ಬೆಳ್ಳಿ ಪದಕ ನೀಡಲಾಗಿದೆ. ಮುಂದೆ ಎಲ್ಲರಿಗೂ ಕೊಡುವ ನಿಟ್ಟಿನಲ್ಲಿ ಒಳ್ಳೆಯ ಕೆಲಸ ಮಾಡಿ ಎಂದು ಹೇಳಿದರು. ಅಪಘಾತ ರಹಿತ ಚಾಲನೆ ಮಾಡಿದ 20 ಚಾಲಕರನ್ನು ಬೆಳ್ಳಿ ಪದಕ ನೀಡಿ ಗೌರವಿಸಲಾಯಿತು. ಕೋಲಾರ ವಿಭಾಗೀಯ ಕಾರ್ಯಾಗಾರದಲ್ಲಿ ಸ್ತಬ್ಧಚಿತ್ರವನ್ನು ತಯಾರಿಸಿದ್ದು, ಇದರಲ್ಲಿ ಕನ್ನಡ ಭಾಷೆಯ, ನಿಗಮದ ಮತ್ತು ಕೋಲಾರ ಜಿಲ್ಲೆಯ ಎಲ್ಲಾ ಆರೂ ತಾಲ್ಲೂಕುಗಳ ವಿಷಯ ಬಿಂಬಿಸಲಾಗಿತ್ತು.

ಏಳು ವಿವಿಧ ರೀತಿಯ ಬಸ್‌ಗಳ ತ್ರೀ–ಡಿ ಮಾದರಿ ಸಹ ಪ್ರದರ್ಶಿಸಲಾಗಿತ್ತು.

> **'ರಾಜ್ಯೋತ್ಸವ ಖುಷಿಯಿಂದ ಆಚರಣೆ ಮಾಡಲಾಗುತ್ತದೆ. ಸಾರಿಗೆ ಸಂಸ್ಥೆಯ ಬಸ್‌ಗಳ ಬಣ್ಣ ಬದಲಾಗಬೇಕು. ಸಾರ್ವಜನಿಕರ ಸ್ನೇಹಿಯಾಗಿ ಸಾರಿಗೆ ಸಂಸ್ಥೆ ಇರಬೇಕು. ಜನರೊಂದಿಗೆ ನಾವು ಎಂಬ ಭಾವನೆ ಬರಬೇಕು' ಎಂದರು**
> **ಸಂಸದ ಎಂ.ಮಲ್ಲೇಶ್ ಬಾಬು**

ಇಬ್ಬರು ಮಹಿಳಾ ತಾಂತ್ರಿಕ ಸಿಬ್ಬಂದಿ ಭುವನೇಶ್ವರಿ ರೀತಿ ವೇಷ ಧರಿಸಿದ್ದರು.

# ಹಣದ ಹೊಳೆ; ಶುರುವಾಗದ ವೈದ್ಯಕೀಯ ಕಾಲೇಜು

## ಬಿಜೆಪಿ ಸರ್ಕಾರದ ಅವಧಿಯಲ್ಲಿ ಚಿಕ್ಕಬಳ್ಳಾಪುರ ವೈದ್ಯಕೀಯ ಕಾಲೇಜಿಗೆ ರೂ.375 ಕೋಟಿ ಬಿಡುಗಡೆ

• ಉದಯವಾಹಿನಿ ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರದ ನಂದಿ ವೈದ್ಯಕೀಯ ಶಿಕ್ಷಣ ಮಹಾವಿದ್ಯಾಲಯದ ಕಾಮಗಾರಿಗಳಿಗೆ ಸರ್ಕಾರಗಳು ಇಲ್ಲಿಯವರೆಗೆ ಒಟ್ಟು ರೂ. 810 ಕೋಟಿ ಬಿಡುಗಡೆ ಮಾಡಿವೆ.

ವೈದ್ಯಕೀಯ ಶಿಕ್ಷಣ ಕಾಲೇಜಿನ ನಿರ್ಮಾಣ ವೆಚ್ಚವು ಚಿಕ್ಕಬಳ್ಳಾಪುರ ರಾಜಕೀಯದಲ್ಲಿ ತೀವ್ರ ಚರ್ಚೆಗೂ ಕಾರಣವಾದ ವಿಚಾರ. ಸಂಸದ ಡಾ.ಕೆ.ಸುಧಾಕರ್ ಮತ್ತು ಸಚಿವ ಡಾ.ಎಂ.ಸಿ.ಸುಧಾಕರ್ ನಡುವೆ ವೆಚ್ಚ ಮತ್ತು ನಿರ್ಮಾಣ ಕಾಮಗಾರಿಗಳ ವಿಚಾರವಾಗಿ ಈ ಹಿಂದಿನಿಂದಲೂ ವಾಕ್ಸಮರ ನಡೆಯುತ್ತಲೇ ಇದೆ.




ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ಆರಂಭದಲ್ಲಿ ಚಿಕ್ಕಬಳ್ಳಾಪುರ ರಾಜಕಾರಣದಲ್ಲಿ ವೈದ್ಯಕೀಯ ಕಾಲೇಜಿನ ನಿರ್ಮಾಣ ವೆಚ್ಚದ ಬಗ್ಗೆ ಬಿರುಸಿನ ಚರ್ಚೆಗಳು ನಡೆದಿದ್ದವು. ಆದರೆ ಈಗ ಈ ಹಿಂದಿನ ಬಿಜೆಪಿ ಸರ್ಕಾರಕ್ಕಿಂತ ಕಾಂಗ್ರೆಸ್ ಸರ್ಕಾರವೇ ಹೆಚ್ಚಿನ ಹಣ ಬಿಡುಗಡೆ ಮಾಡಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಚಿಕ್ಕಬಳ್ಳಾಪುರ ವೈದ್ಯಕೀಯ ಕಾಲೇಜಿಗೆ ರೂ.375 ಕೋಟಿ ಬಿಡುಗಡೆಯಾಗಿದ್ದರೆ ಕಾಂಗ್ರೆಸ್‌ನ ಈ ಎರಡೂವರೆ ವರ್ಷಗಳ ಅವಧಿಯಲ್ಲಿ ರೂ.435 ಕೋಟಿ ಮಂಜೂರಾಗಿದೆ. ಒಟ್ಟಾರೆ ಇಲ್ಲಿಯವರೆಗೆ ರೂ.810 ಕೋಟಿ ತಲುಪಿದೆ.

**ರೇಡಿಯಾಲಜಿ ಬ್ಲಾಕ್ ನಿರ್ಮಾಣ ಕಾರ್ಯ**

ನಂದಿ ವೈದ್ಯಕೀಯ ಕಾಲೇಜು 60 ಎಕರೆಯಲ್ಲಿದೆ. ರೇಡಿಯಾಲಜಿ ಬ್ಲಾಕ್ ನಿರ್ಮಾಣ ಕಾರ್ಯ ಬಹುತೇಕ ಪೂರ್ಣವಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿಧಿಯಿಂದ ಇದಕ್ಕೆ ನೆರವು ನೀಡಲಾಗಿದೆ.

ಹೊಸ ಅಕಾಡೆಮಿ ಬ್ಲಾಕ್ ಸಹ ಸಿದ್ಧವಾಗಿದ್ದು ಪೂರ್ಣ ಪ್ರಮಾಣದ ಶೈಕ್ಷಣಿಕ ಉಪಕರಣಗಳ ಸ್ಥಾಪನೆಗಾಗಿ ಸಚಿವ ಸಂಪುಟದ ಅನುಮೋದನೆಗೆ ಕಾಯಲಾಗುತ್ತಿದೆ.

ಕಾಲೇಜಿನಲ್ಲಿ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಿಬ್ಬಂದಿ ನಿವಾಸಗಳ ನಿರ್ಮಾಣ ಕಾಮಗಾರಿ ಸಹ ಪೂರ್ಣವಾಗಿದೆ. ಎಂಬಿಬಿಎಸ್ ಸೀಟುಗಳ ಸಂಖ್ಯೆ 100ರಿಂದ 150ಕ್ಕೆ ಹೆಚ್ಚಳವಾಗಿದೆ. ಕಾಲೇಜಿನಲ್ಲಿ ಸದ್ಯ ಎಂಬಿಬಿಎಸ್ ವಿಭಾಗದಲ್ಲಿ 500, ನರ್ಸಿಂಗ್ ವಿಭಾಗದಲ್ಲಿ 400, ಅಲೈಡ್ ಹೆಲ್ತ್ ಸೈನ್ಸ್ ವಿಭಾಗದಲ್ಲಿ 300 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ.

ಅಲ್ಲದೆ ಚಿಕ್ಕಬಳ್ಳಾಪುರದ ಜಿಲ್ಲಾ ಆಸ್ಪತ್ರೆಯೂ ವೈದ್ಯಕೀಯ ಶಿಕ್ಷಣ ಕಾಲೇಜು ವ್ಯಾಪ್ತಿಗೆ ಒಳಪಟ್ಟಿದ್ದು ಇಲ್ಲಿ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನಿಂಗ್ ಘಟಕಗಳ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.

ಸರ್ಕಾರವು ಎಂಆರ್‌ಐ ಘಟಕಗಳ ಉಪಕರಣಗಳ ಖರೀದಿಗೆ 12 ಕೋಟಿ ಮತ್ತು ಸಿಟಿ ಸ್ಕ್ಯಾನಿಂಗ್ ಘಟಕದ ಉಪಕರಣಗಳ ಖರೀದಿಗೆ ರೂ. 8 ಕೋಟಿ ಮಂಜೂರು ಮಾಡಿದೆ. ಯಂತ್ರಗಳ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತದಲ್ಲಿದೆ.

ಹೀಗೆ ಜಿಲ್ಲೆಗೆ ಮಹತ್ವದ ಯೋಜನೆಯಾದ ವೈದ್ಯಕೀಯ ಶಿಕ್ಷಣ ಕಾಲೇಜಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಕೈ ಬಿಚ್ಚಿ ಹಣ ಮಂಜೂರು ಮಾಡಿವೆ.

> **ಹೆಚ್ಚಿದ್ದ ಯೋಜನಾ ವೆಚ್ಚ**
> **ಚಿಕ್ಕಬಳ್ಳಾಪುರ ವೈದ್ಯಕೀಯ ಶಿಕ್ಷಣ ಕಾಲೇಜಿಗೆ ಭೂಮಿ ಪೂಜೆ ನೆರವೇರಿದಾಗ ಕಾಲೇಜು ನಿರ್ಮಾಣಕ್ಕೆ ರೂ.525 ಕೋಟಿ ಯೋಜನಾ ವೆಚ್ಚವಿತ್ತು. ನಂತರ ರೂ.810 ಕೋಟಿಗೆ ವೆಚ್ಚ ಅದು ತಲುಪಿತು. ಯೋಜನಾ ವೆಚ್ಚ ಹೆಚ್ಚಿದ್ದರ ಬಗ್ಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ವೈದ್ಯಕೀಯ ಶಿಕ್ಷಣ ಸಚಿವರು ಮಾಹಿತಿ ಕಲೆ ಹಾಕಿದ್ದರು.**

# ಮಿನಿ ನ್ಯೂಸ್

## ಆದಿಯೋಗಿ ಪ್ರತಿಮೆಗೆ ನಾಡಧ್ವಜದ ರಂಗು

• ಉದಯವಾಹಿನಿ ಚಿಕ್ಕಬಳ್ಳಾಪುರ

ತಾಲ್ಲೂಕಿನ ಆವಲಗುರ್ಕಿಯ ಈಶಾ ಯೋಗ ಕೇಂದ್ರದಲ್ಲಿ ನಡೆದ 70ನೇ ರಾಜ್ಯೋತ್ಸವ ಕಾರ್ಯಕ್ರಮ ವೇಳೆ ಆದಿಯೋಗಿಯ ಪ್ರತಿಮೆ ಮೇಲೆ ನಾಡಧ್ವಜದ ಬಣ್ಣಗಳನ್ನು ಬೆಳಗಿಸಲಾಯಿತು. ಈ ವೇಳೆ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಸಂಭ್ರಮಿಸಿದರು. ಇದೇ ಮೊದಲ ಬಾರಿಗೆ ನಾಡಧ್ವಜದ ಬಣ್ಣಗಳಲ್ಲಿ 112 ಅಡಿ ಎತ್ತರದ ಆದಿಯೋಗಿ ಪ್ರತಿಮೆ ಮೇಲೆ ಬೆಳಗಿಸಲಾಯಿತು. ಸಂಜೆ 6.30ಕ್ಕೆ ಕೇಂದ್ರದಲ್ಲಿ ರಾಜ್ಯೋತ್ಸವ ಕಾರ್ಯಕ್ರಮಗಳು ಆರಂಭವಾದವು. ಯೋಗ ಕೇಂದ್ರದಲ್ಲಿ ಧ್ವಜಾರೋಹಣವನ್ನೂ ಮಾಡಲಾಯಿತು.

**ಪೊಲೀಸ್ ಮಹಾನಿರ್ದೇಶಕ ಭೇಟಿ:** ಈಶಾ ಯೋಗ ಕೇಂದ್ರಕ್ಕೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಭೇಟಿ ನೀಡಿ ಪೂಜೆ ಸಲ್ಲಿಸಿದರು. ಯೋಗ ಕೇಂದ್ರದ ಆದಿಯೋಗಿ ಪ್ರತಿಮೆ, ನಾಗಮಂಟಪ ಮತ್ತಿತರ ಸ್ಥಳಗಳಿಗೆ ಅವರು ಭೇಟಿ ನೀಡಿದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಗನ್ನಾಥ್ ರೈ ಹಾಗೂ ಪೊಲೀಸ್ ಅಧಿಕಾರಿಗಳು ಹಾಜರಿದ್ದರು.

## ಕನ್ನಡವೇ ನಿತ್ಯ ಕನ್ನಡವೇ ಸತ್ಯ

• ಉದಯವಾಹಿನಿ ಚನ್ನಪಟ್ಟಣ

ರಾಜ್ಯೋತ್ಸವದಂದು ಸಿರಿ ಸಾಮಾಜಿಕ, ಶಿಕ್ಷಣ ಟ್ರಸ್ಟ್ ಕನ್ನಡ ಭಾಷೆ, ನೆಲ, ಜಲ, ಪರಿಸರ ಸಂರಕ್ಷಣೆ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿತ್ತು. ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉಪನ್ಯಾಸಕ ಬಿ.ಪಿ. ಸುರೇಶ್ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕನ್ನಡ ರಾಜ್ಯೋತ್ಸವವು ನಾಡಿನ ಏಕತೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆಯ ಪ್ರತೀಕ. ಕನ್ನಡಿಗರು ಭಾಷಾ ಅಭಿಮಾನ ಬೆಳಸಿಕೊಳ್ಳುವ ಅಗತ್ಯವಿದೆ ಎಂದರು. ಕರ್ನಾಟಕದಲ್ಲಿ ಕನ್ನಡವೇ ಮೊದಲು. ನಾಡಿನಾದ್ಯಂತ ಪ್ರತಿಯೊಬ್ಬರು ವ್ಯವಹಾರಿಕ ಭಾಷೆಯಾಗಿ ಕನ್ನಡವನ್ನೇ ಬಳಸಬೇಕು. ಕನ್ನಡವನ್ನು ಬೆಳೆಸಬೇಕು ಎಂದು ಬಿ.ಆರ್. ಶಿವಕುಮಾರ್ ಬ್ಯಾಡರಹಳ್ಳಿ ಹೇಳಿದರು. ಭಾವಿಪ ಅಧ್ಯಕ್ಷ ಗುರುಮಾದಯ್ಯ, ನಿವೃತ್ತ ಫಾರ್ಮಸಿ ಅಧಿಕಾರಿ ಎಂ. ವೇದಮೂರ್ತಿ, ಸಮರ್ಪಣಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಎಸ್.ಆರ್.ಮನುಜ, ಪತ್ರಕರ್ತ ಎಲೇಕೇರಿ ಮಂಜುನಾಥ್, ಅಪ್ಪಾಜಿಗೌಡ, ಭರತ್ ಕುಮಾರ್ ಭಾಗವಹಿಸಿದ್ದರು. ಟ್ರಸ್ಟ್ ಕಾರ್ಯದರ್ಶಿ ಎಸ್. ಪೂರ್ಣಿಮಾ ಪ್ರಾಸ್ತಾವಿಕ ಮಾತನಾಡಿದರು. ಗಾಯಕರಾದ ಗುಬ್ಬಿ ಆನಂದ್, ಭರತ್ ಕುಮಾರ್ ಕನ್ನಡ ನಾಡುನುಡಿ ಬಿಂಬಿಸುವ ಗಾಯನ ನಡೆಸಿಕೊಟ್ಟರು. ಬಿವಿಎಸ್ ಸಂಚಾಲಕ ಎಸ್. ಕುಮಾರ್ ನಿರೂಪಿಸಿದರು.

## ಗಾಂಜಾ ಮಾರಾಟ; ಮಹಿಳೆ ಸೆರೆ



• ಉದಯವಾಹಿನಿ ಚಿಂತಾಮಣಿ

ನಗರದ ಕೀರ್ತಿ ನಗರ ಬಡಾವಣೆ ಮನೆಯೊಂದರಲ್ಲಿ ಸಕ್ರಿಯವಾಗಿದ್ದ ಅಕ್ರಮ ಗಾಂಜಾ ಮಾರಾಟ ಜಾಲವನ್ನು ಪೊಲೀಸರು ರಾತ್ರಿ ಭೇದಿಸಿದ್ದಾರೆ. ಗಾಂಜಾ ಮಾರಾಟ ಮಾಡಿದ ಆರೋಪದ ಮೇರೆಗೆ ಶಬಾನ ಎಂಬ ಮಹಿಳೆಯನ್ನು ಪೊಲೀಸರು ಬಂಧಿಸಿದ್ದು, ಅವರ ಬಳಿ ಇದ್ದ 2 ಕೆ.ಜಿಯಷ್ಟು ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ. ಪ್ಲಾಸ್ಟಿಕ್‌ನಲ್ಲಿ ಪ್ಯಾಕ್ ಮಾಡಿದ್ದ ಗಾಂಜಾ ಪಾಕೆಟ್‌ಗಳನ್ನು ಚೀಲಗಳಲ್ಲಿ ಬಚ್ಚಿಡಲಾಗಿತ್ತು. ಒಟ್ಟಾರೆ 2.4 ಕೆ.ಜಿಯಷ್ಟು ಗಾಂಜಾ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಕ್ರಮವಾಗಿ ಶ್ರೀಂಗಧ ಮತ್ತು ಗಾಂಜಾ ಮಾರಾಟ ಪ್ರಕರಣದಲ್ಲಿ ಶಬಾನ ಕುಟುಂಬಸ್ಥರು ಹಲವು ಬಾರಿ ಬಂಧಿತರಾಗಿದ್ದರು. ಜೊತೆಗೆ ಜಿಲ್ಲೆಯಿಂದಲೂ ಗಡೀಪಾರಾಗಿದ್ದರು. ಜೈಲಿನಿಂದ ವಾಪಸ್ ಬರುತ್ತಲೇ ಮತ್ತೆ ತಮ್ಮ ಚಾಳಿ ಮುಂದುವರೆಸುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಚಿಂತಾಮಣಿ ಉಪ ವಿಭಾಗದ ಡಿವೈಎಸ್‌ಪಿ ಮುರುಳೀಧರ್, ನಗರ ಠಾಣೆ ಇನ್ಸ್‌ಪೆಕ್ಟರ್ ವಿಜಿಕುಮಾರ್, ಪಿಎಸ್‌ಐಗಳಾದ ರಮೇಶ್, ಪದ್ಮ ಇದ್ದರು.

## ದೇವೇಗೌಡರ ಹೆಸರಲ್ಲಿ ಅಪ್ಪ–ಮಕ್ಕಳ ರಾಜಕಾರಣ: ಎನ್.ಚಲುವರಾಯಸ್ವಾಮಿ

• ಉದಯವಾಹಿನಿ ಮಂಡ್ಯ

'ಅಪ್ಪ–ಮಕ್ಕಳು ಇನ್ನೂ ಎಷ್ಟು ವರ್ಷ ದೇವೇಗೌಡರ ಹೆಸರಲ್ಲಿ ರಾಜಕಾರಣ ಮಾಡ್ತಾರೋ ಗೊತ್ತಿಲ್ಲ. ಜೆಡಿಎಸ್‌ನವರು ಬಾಯಿ ಹಿಡಿತ ಇಲ್ಲದಂತೆ ಮಾತನಾಡುತ್ತಾರೆ. ಈ ಬಾರಿ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ನಾವು ಹೆಚ್ಚು ಸ್ಥಾನ ಪಡೆದಿದ್ದೇವೆ.

ಸತ್ಯ ಒಪ್ಪಿಕೊಂಡು ಸುಮ್ಮನಿರಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು. ನಿಖಿಲ್ ಕುಮಾರಸ್ವಾಮಿ ಟೀಕೆಗೆ ಶನಿವಾರ ಮಾಧ್ಯಮದವರೊಂದಿಗೆ ಚಲುವರಾಯಸ್ವಾಮಿ ಅವರು ಪ್ರತಿಕ್ರಿಯಿಸಿ, ನಾವು ವಾಮಾಮಾರ್ಗದ ಚುನಾವಣೆ ಮಾಡಲ್ಲ. ಹಾಸನದಲ್ಲಿ ಜೆಡಿಎಸ್‌ನವರು ಗೆದ್ದಿದ್ರು. ಹಾಗಾದರೆ ಅವರು ವಾಮಾಮಾರ್ಗದಲ್ಲಿ ಗೆದ್ರಾ? ಜೆಡಿಎಸ್ ಬಗ್ಗೆ ನಾನು ಟೀಕೆ ಮಾಡಲ್ಲ. ಇಂದಿರಾಗಾಂಧಿ, ಅಂಬೇಡ್ಕರ್ ಅವರಂಥ ಮಹಾನ್ ನಾಯಕರು ಚುನಾವಣೆಯಲ್ಲಿ ಸೋತಿದ್ದಾರೆ. ಸೋಲು– ಗೆಲುವನ್ನು ಒಪ್ಪಿಕೊಳ್ಳಬೇಕು. ಲಘುವಾಗಿ ಮಾತನಾಡುವುದನ್ನು ನಿಲ್ಲಿಸಿ. ಯಾವ ಚುನಾವಣೆಯಲ್ಲೂ ನಾನು ತೊಡೆ ತಟ್ಟಿಲ್ಲ. ಮಂಡ್ಯ ಜಿಲ್ಲೆಗೆ ಜೆಡಿಎಸ್ ಕೊಡುಗೆ ಏನು ಎಂದು ಪ್ರಶ್ನಿಸಿದರು. ಬೆಳಗಾವಿಯಲ್ಲಿ ಎಂಇಎಸ್ ಪುಂಡಾಟಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಭಾಷೆ ಮೇಲೆ ಆಕ್ರಮಣ ಮಾಡುವುದು ನಿರಂತರವಾಗಿ ನಡೆಯುತ್ತಿದೆ. ನೆಲ, ಜಲ, ಭಾಷೆ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗೆ ತಿಲಾಂಜಲಿ ಹೇಳಲು ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರ ಇದೆ. ಕೇಂದ್ರ ಸರ್ಕಾರ ಆ ರಾಜ್ಯಗಳನ್ನ ಕರೆದು ಮಾತನಾಡಬೇಕು. ನಮ್ಮ ಕನ್ನಡಿಗರನ್ನು ಕಾಪಾಡಲು ನಮ್ಮ ಸರ್ಕಾರ ಸೂಕ್ತ ಕ್ರಮ ಕೈಗೊಂಡಿದೆ. ನಮ್ಮ ಭಾಷೆ, ಜನ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳುತ್ತದೆ ಎಂದರು. ಜೆಡಿಎಸ್ ನವರು ಎಷ್ಟು ಜನ ಕಾರ್ಯಕರ್ತರಿಗೆ ಬೆಂಬಲ ಕೊಟ್ಟಿದ್ದಾರೆ ಸ್ಥಳೀಯ ಚುನಾವಣೆಯಲ್ಲಿ ಎಷ್ಟು ಜನರನ್ನು ಗೆಲ್ಲಿಸಿದ್ದಾರೆ ಪಾಪ ಪುಟ್ಟರಾಜು ಒಬ್ಬರೇ ಓಡಾಡುತ್ತಾರೆ.

ಅಂತರಾಳದಿಂದ... EDITORIAL

# ಪ್ರಜಾಪ್ರಭುತ್ವದ ಕೊರಳಿಗೆ ಎಸ್‌ಐಆರ್ ನೇಣಿನ ಕುಣಿಕೆ

ಈ ಬಗ್ಗೆ ಕುಟುಂಬವು ಅಜ್ಞಾತ ವ್ಯಕ್ತಿಗಳ ವಿರುದ್ಧ ಆತ್ಮಹತ್ಯೆ ಪ್ರಚೋದನೆಯ ಆರೋಪವನ್ನು ಹೊರಿಸಿ ದೂರನ್ನು ನೀಡಿದೆ. ಪ್ರದೀಪ್ ಕಾರ್ ಮುಸ್ಲಿಮನಾಗಿರಲಿಲ್ಲ, ಬಾಂಗ್ಲಾ ನುಸುಳುಕೋರನೂ ಅಲ್ಲ. ಇಷ್ಟಾದರೂ ಆತ ಪೌರತ್ವ ಸಾಬೀತಿಗೆ ಯಾಕೆ ಹೆದರಬೇಕಾಯಿತು ಎನ್ನುವ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದರೆ, ಎಸ್‌ಐಆರ್ ಎನ್ನುವ ಮುಖವಾಡದಲ್ಲಿ ಮರಳಿ ಬಂದಿರುವ ಎನ್‌ಆರ್‌ಸಿ ಎನ್ನುವ ಮಾರ್ಜಾಲ ಸನ್ಯಾಸಿಯ ಅಸಲಿಯತ್ತು ಬಯಲಾಗಿ ಬಿಡುತ್ತದೆ. ಬಿಹಾರದಲ್ಲಿ ಸಾಕಷ್ಟು ವಿವಾದಗಳಿಗೆ, ಕಾನೂನು ಹೋರಾಟಗಳಿಗೆ ಕಾರಣವಾದ, ಅಲ್ಲಿನ ಲಕ್ಷಾಂತರ ಮತದಾರರ ಹೆಸರುಗಳು ಪಟ್ಟಿಯಿಂದ ನಾಪತ್ತೆಯಾಗಿಸಿದ ಹೆಗ್ಗಳಿಕೆಯನ್ನು ಹೊಂದಿರುವ ಎಸ್‌ಐಆರ್ ಎನ್ನುವ ಎರಡು ಅಲಗಿನ ಕತ್ತಿಯನ್ನು ಇದೀಗ ದೇಶಾದ್ಯಂತ ಪ್ರಯೋಗಿಸಲು ಚುನಾವಣಾ ಆಯೋಗ ಹೊರಟಿದೆ. ಅಕ್ಟೋಬರ್ 27ರಂದು ಚುನಾವಣಾ ಆಯುಕ್ತರು ಈ ಕುರಿತು ಪ್ರಕಟಣೆ ಹೊರಡಿಸಿದ್ದು ಮತದಾರರ ಪಟ್ಟಿಗಳ ಈ ವಿಶೇಷ ತೀವ್ರ ಪರಿಷ್ಕರಣೆಯು ಮುಂದಿನ ವರ್ಷದ ಫೆಬ್ರವರಿ 27ರಂದು ದೇಶಾದ್ಯಂತ ಸಮಾಪ್ತಿಗೊಳ್ಳಲಿದೆ ಎಂದು ಹೇಳಿದ್ದಾರೆ. ಈ ಎಸ್‌ಐಆರ್ ಬಳಿಕ ಮತದಾನದ ಹಕ್ಕನ್ನು ಕಳೆದುಕೊಳ್ಳುವ ಯಾವುದೇ ಪ್ರಜೆ ಪರೋಕ್ಷವಾಗಿ ತನ್ನ ಪೌರತ್ವವನ್ನೂ ನಿರಾಕರಿಸಲ್ಪಡುತ್ತಾನೆ. ಚುನಾವಣಾ ಆಯೋಗವು ಮತದಾರನ ಪಟ್ಟಿಯಲ್ಲಿ ಹೆಸರು ನಮೂದಿಸಬೇಕಾದರೆ ಆತ ಆಯೋಗ ಹೇಳಿದ ಸೂಕ್ತ ದಾಖಲೆಗಳನ್ನು ಒದಗಿಸಬೇಕು. ಅದರಲ್ಲಿ ವಿಫಲನಾದರೆ ಆತ ಚುನಾವಣೆಯಲ್ಲಿ ಭಾಗವಹಿಸುವ ಅರ್ಹತೆಯನ್ನು ಕಳೆದುಕೊಳ್ಳುತ್ತಾನೆ. ಅಂದರೆ ಚುನಾವಣಾ ಆಯೋಗ ಆತನನ್ನು ಈ ದೇಶದ ಪೌರನಲ್ಲ ಎಂದು ಪರಿಗಣಿಸಿ ಚುನಾವಣೆಯಿಂದ ಹೊರಗಿಡುತ್ತದೆ. ಭವಿಷ್ಯದಲ್ಲಿ ಆತ ತನ್ನ ಪೌರತ್ವವನ್ನು ಸಾಬೀತು ಪಡಿಸದೇ ಇದ್ದರೆ ಸರಕಾರದ ಎಲ್ಲಾ ಸವಲತ್ತುಗಳನ್ನು ಹಂತ ಹಂತವಾಗಿ ಕಳೆದುಕೊಳ್ಳುವ ಸಾಧ್ಯತೆಗಳಿರುತ್ತವೆ ಮತ್ತು ಅಂತಿಮವಾಗಿ ಆತನನ್ನು ಅಕ್ರಮ ಬಂಧನ ಕೇಂದ್ರಗಳು ಸ್ವಾಗತಿಸಲು ಸಿದ್ಧವಾಗಿರುತ್ತವೆ. ನೀವು ಈ ದೇಶದ ಪೌರರು ಹೌದಾದರೆ ಪೌರತ್ವ ಸಾಬೀತು ಮಾಡುವುದಕ್ಕೆ ಅಥವಾ ಚುನಾವಣಾ ಆಯೋಗ ಕೇಳುವ ದಾಖಲೆಗಳನ್ನು ಒದಗಿಸುವುದಕ್ಕೆ ಇರುವ ಅಡ್ಡಿಯೇನು ಎನ್ನುವ ಪ್ರಶ್ನೆಯನ್ನು ಕೇಂದ್ರ ಸರಕಾರ ಪರೋಕ್ಷವಾಗಿ ಕೇಳುತ್ತಿದೆ.

> **ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯ ಘೋಷಣೆಯನ್ನು ಭಾರತೀಯ ಚುನಾವಣಾ ಆಯೋಗ ಹೊರಡಿಸಿದ ಮರುದಿನವೇ ಪಶ್ಚಿಮಬಂಗಾಳದಲ್ಲಿ 57 ವರ್ಷದ ವ್ಯಕ್ತಿಯೊಬ್ಬರು, ಪೌರತ್ವವನ್ನು ಸಾಬೀತು ಮಾಡಲು ಸಾಧ್ಯವಾಗುವುದಿಲ್ಲ. ಎಂಬ ಆತಂಕದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಮೃತನನ್ನು ಪ್ರದೀಪ್ ಕಾರ್ ಎಂದು ಗುರುತಿಸಲಾಗಿದೆ. 'ಎಸ್‌ಐಆರ್ ಮತ್ತು ಎನ್‌ಆರ್‌ಸಿ ಕುರಿತಾದ ಆತಂಕದಿಂದ ನಾನು ಸಾವಿಗೆ ಶರಣಾಗುತ್ತಿದ್ದೇನೆ' ಎಂದು ಅವರು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.**

ಸಮಸ್ಯೆಗಳು ಎದುರಾಗುವುದು ನಮ್ಮ ಪೌರತ್ವವನ್ನು ಅಥವಾ ನಾನು ಮತ ಹಾಕಲು ಅರ್ಹನೆಂದು ಚುನಾವಣಾ ಆಯೋಗ ತೀರ್ಮಾನಿಸಲು ಕಡ್ಡಾಯವಾಗಿ ನಮ್ಮೊಂದಿಗೆ ಇರಬೇಕಾದ ದಾಖಲೆಗಳ ಪ್ರಶ್ನೆ ಬಂದಾಗ. ಚುನಾವಣಾ ಆಯೋಗ ಬಿಹಾರದಲ್ಲಿ ಎಸ್‌ಐಆರ್ ಆರಂಭಿಸಿದಾಗ ಸುಮಾರು 11 ದಾಖಲೆಗಳನ್ನು ಕಡ್ಡಾಯವಾಗಿ ಹೊಂದಿರಬೇಕು ಎಂದು ಆದೇಶ ಹೊರಡಿಸಿತು.

ಇದರ ಹಿಂದೆ ಇದ್ದುದು, ಬಿಹಾರದಲ್ಲಿರುವ ಲಕ್ಷಾಂತರ ಜನರ ಮತದಾನದ ಹಕ್ಕನ್ನು ಕಿತ್ತುಕೊಳ್ಳುವ ದುರುದ್ದೇಶ ಮಾತ್ರವಲ್ಲ, ಅವರ ಪೌರತ್ವವನ್ನೇ ನಿರಾಕರಿಸುವ ಸಂಚು. ಎನ್‌ಆರ್‌ಸಿಯನ್ನು ದೇಶಾದ್ಯಂತ ವಿಸ್ತರಿಸುವ ಯೋಜನೆ ವಿಫಲವಾದ ಬಳಿಕ, ಕೇಂದ್ರ ಸರಕಾರವು ಎಸ್‌ಐಆರ್ ಮೂಲಕ ಅದನ್ನು ಮತ್ತೆ ಜಾರಿಗೆ ತರಲು ಚುನಾವಣಾ ಆಯೋಗವನ್ನು ಬಳಸಿಕೊಂಡಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಈವರೆಗೆ ಆಧಾರ್ ಕಾರ್ಡ್, ರೇಶನ್ ಕಾರ್ಡ್‌ಗಳು ಸಾಕಾಗುತ್ತಿತ್ತು. ಇದೀಗ ಏಕಾಏಕಿ 11 ದಾಖಲೆಗಳನ್ನು ಕೇಳಿದ ಪರಿಣಾಮವಾಗಿ ಲಕ್ಷಾಂತರ ಮತದಾರರು ಮತಹಾಕುವ ಹಕ್ಕಿನ ಜೊತೆ ಜೊತೆಗೆ ಪೌರತ್ವವನ್ನೂ ಪರೋಕ್ಷವಾಗಿ ಕಳೆದುಕೊಳ್ಳುತ್ತಾರೆ. ಇದರ ವಿರುದ್ಧ ಎಲ್ಲಾ ರಾಜಕೀಯ ಸಂಘಟನೆಗಳು, ಸಾಮಾಜಿಕ ಹೋರಾಟಗಾರರು ಸುಪ್ರೀಂಕೋರ್ಟ್ ಮೊರೆ ಹೋದರು. ಪರಿಣಾಮವಾಗಿ ಆಧಾರ್ ಕಾರ್ಡ್‌ನ್ನು ದಾಖಲೆಯಾಗಿ ಸ್ವೀಕರಿಸಬೇಕು ಎಂದು ಅದು ಸೂಚನೆ ನೀಡಿತು. ಈ ಸೂಚನೆಯನ್ನು ನೀಡಿದ ಬಳಿಕವೂ ಎಸ್‌ಐರ್‌ನಿಂದ ಸುಮಾರು 65 ಲಕ್ಷ ಜನರು ಹೊರಗುಳಿದರು.

ಹೀಗೆ ಮತದಾರರ ಪಟ್ಟಿಯಿಂದ ಹೊರಗುಳಿದ ಜನರೆಲ್ಲರೂ ವಲಸಿಗರು, ನುಸುಳುಕೋರರು ಎಂದು ಚುನಾವಣಾ ಆಯೋಗ ಹೇಳುತ್ತದೆಯೆ? ಇದೇ ಸಂದರ್ಭದಲ್ಲಿ ಬಿಹಾರದಲ್ಲಿ ಎಸ್‌ಐಆರ್‌ನಲ್ಲಿ ನಡೆದಿರುವ ಭಾರೀ ಅಕ್ರಮಗಳು, ಗೊಂದಲಗಳು ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿವೆ. ಎಸ್‌ಐಆರ್‌ನ ವೈಫಲ್ಯಗಳನ್ನು ರಾಜಕೀಯ ಪಕ್ಷಗಳು ಸುಪ್ರೀಂಕೋರ್ಟ್ ಮುಂದೆ ತಂದಿದ್ದು, ವಿಚಾರಣೆ ಮುಂದುವರಿದಿದೆ.

ಇವುಗಳ ನಡುವೆಯೇ ಚುನಾವಣಾ ಆಯೋಗ ದೇಶಾದ್ಯಂತ ಅವಸರವಸರವಾಗಿ ಎಸ್‌ಐಆರ್ ನಡೆಸುವ ಕಾರ್ಯಾಚರಣೆಗೆ ಯಾಕೆ ಇಳಿದಿದೆ ಈ ಬಗ್ಗೆ ಸುಪ್ರೀಂಕೋರ್ಟ್ ತನ್ನ ಸ್ಪಷ್ಟ ತೀರ್ಪನ್ನು ನೀಡುವ ಮೊದಲೇ ದೇಶಾದ್ಯಂತ ಎಸ್‌ಐಆರ್ ನಡೆಸಿದರೆ ಆ ಮತದಾರರ ಪಟ್ಟಿ ಮುಂದಿನ ಚುನಾವಣೆಯಲ್ಲಿ ಮಾನ್ಯವಾಗುವುದೆ ಎಸ್‌ಐಆರ್ ಸಂವಿಧಾನ ಬಾಹಿರ ಎಂದು ಸುಪ್ರೀಂಕೋರ್ಟ್ ಹೇಳಿದರೆ ಈ ಎಸ್‌ಐಆರ್ ವ್ಯರ್ಥವಾಗುವುದಿಲ್ಲವೆ ಈ ಪ್ರಶ್ನೆಗಳಿಗೆ ಚುನಾವಣಾ ಆಯೋಗದ ಬಳಿ ಉತ್ತರವಿಲ್ಲ.ಈ ದೇಶದಲ್ಲಿ ಅರ್ಹ ಮತದಾರರು ಚುನಾವಣೆಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವ ಮೂಲಕ ಪ್ರಜಾಸತ್ತೆಯನ್ನು ಯಶಸ್ವಿಗೊಳಿಸಬೇಕಾದ ಚುನಾವಣಾ ಆಯೋಗವೇ ಮತದಾರರನ್ನು ಚುನಾವಣೆಯಿಂದ ದೂರ ಉಳಿಸಲು ಶ್ರಮಿಸುತ್ತಿರುವುದು ವಿಪರ್ಯಾಸವಾಗಿದೆ.



# ಟೀ ಕುಡಿದರೂ ಕ್ಯಾನ್ಸರ್ ಬರುತ್ತೆ!

**ಸುಮಾರು 5 ಲಕ್ಷ ಮಂದಿಯ ಮೇಲೆ ಸಂಶೋಧನೆ**

ಟೀ ಕುಡಿದರೂ ಕ್ಯಾನ್ಸರ್ ಬರಬಹುದು ಹೀಗೆ ಮಾಡಿದರೆ ಅಪಾಯ ಖಚಿತ. ನಮ್ಮ ದಿನಚರಿ ಬೆಳಗಿನ ಬಿಸಿ ಟೀ ಅಥವಾ ಕಾಫಿ ಇಲ್ಲದೆ ಪ್ರಾರಂಭವಾಗುವುದೇ ವಿರಳ. ಅನೇಕರಿಗೆ ನಿದ್ರೆಯಿಂದ ಎದ್ದ ಕೂಡಲೇ ಟೀ ಅಥವಾ ಕಾಫಿ ಕುಡಿಯುವ ಅಭ್ಯಾಸ ಇರುತ್ತದೆ. ಇದು ನಮ್ಮ ಜೀವನ ಶೈಲಿಯ ಅಂಗವಾಗಿ ಬೆಳೆದಿರುವ ಪದ್ಧತಿ. ನಿಜ ಹೇಳಬೇಕಾದರೆ, ಒಂದು ಕಪ್ ಟೀ ಬೆಳಗಿನ ಸುಸ್ತನ್ನು ದೂರ ಮಾಡಿ ತಾಜಾತನವನ್ನು ಕೊಡುತ್ತದೆ.

ಆದರೆ, ಅದೇ ಟೀ ಅಥವಾ ಕಾಫಿಯನ್ನು ಖಾಲಿ ಹೊಟ್ಟೆಯಲ್ಲಿ, ಹೆಚ್ಚಾಗಿ ಬಿಸಿ ಬಿಸಿ ಆಗಿರುವಾಗ ಕುಡಿಯುವುದು ಆರೋಗ್ಯಕ್ಕೆ ದೊಡ್ಡ ಅಪಾಯ ತಂದುಕೊಡುತ್ತದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

**ಅಧ್ಯಯನ ಏನು ಹೇಳುತ್ತದೆ:** ಇತ್ತೀಚೆಗೆ ಯುಕೆ ಬಯೋ ಬ್ಯಾಂಕ್, ಅಮೇರಿಕಾದ ನ್ಯಾಷನಲ್ ಕ್ಯಾನ್ಸರ್ ಇನ್ಸ್ಟಿಟ್ಯೂಟ್ ಸಹಭಾಗಿತ್ವದಲ್ಲಿ ಒಂದು ಅಧ್ಯಯನ ನಡೆದಿದೆ. ಇದರಲ್ಲಿ ಸುಮಾರು 5 ಲಕ್ಷ ಮಂದಿಯ ಮೇಲೆ ಸಂಶೋಧನೆ ನಡೆಸಲಾಗಿದೆ. ಇದರ ಪ್ರಕಾರ, ದಿನಕ್ಕೆ 8 ರಿಂದ 10 ಕಪ್‌ಗಳಷ್ಟು ಬಿಸಿ ಟೀ ಕುಡಿಯುವವರಲ್ಲಿ ಅನ್ನನಾಳದ ಕ್ಯಾನ್ಸರ್ ಅಪಾಯ ಹೆಚ್ಚಿರುವುದು ಪತ್ತೆಯಾಗಿದೆ.

ವಿಶೇಷವಾಗಿ, ನೀವು ಸೇವಿಸುವ ಪಾನೀಯದ ತಾಪಮಾನ ಜಾಸ್ತಿಯಾದಂತೆ ಅಪಾಯವೂ ಹೆಚ್ಚಾಗುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಆರಂಭಿಕ ಹಂತದಲ್ಲಿ ಈ ಸಮಸ್ಯೆ ಸಾಮಾನ್ಯ ಆಮ್ಲತೆ, ಹೃದಯದ ಹುರಿ, ಕೆಮ್ಮು ಎಂದು ತೋರಿಸಿಕೊಳ್ಳಬಹುದು. ಬಹುತೇಕ ಜನರು ಇದನ್ನು ನಿರ್ಲಕ್ಷ್ಯ ಮಾಡುತ್ತಾರೆ.

ಆದರೆ ಮುಂದೆ ಅದು ಆಹಾರ ನುಂಗುವಲ್ಲಿ ತೊಂದರೆ, ಹೃದಯ ನೋವು, ಧ್ವನಿಯಲ್ಲಿ ಬದಲಾವಣೆ, ನಿರಂತರ ಕೆಮ್ಮು ಮುಂತಾದ ಲಕ್ಷಣಗಳಿಂದ ಸ್ಪಷ್ಟವಾಗುತ್ತದೆ.

ಇಂತಹ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು ಅತ್ಯಂತ ಮುಖ್ಯ.

**ತಜ್ಞರ ಸಲಹೆಗಳು:** ಮುನ್ನೆಚ್ಚರಿಕೆ, ತಡೆಗಟ್ಟುವಿಕೆ

**ತಣ್ಣಗಾಗಿಸಿ ಕುಡಿಯಿರಿ:** ಬಿಸಿ ಪಾನೀಯ ಕುಡಿಯುವ ಮೊದಲು ಸ್ವಲ್ಪ ತಣ್ಣಗಾಗಲು ಬಿಡಿ. ಸೌಕರ್ಯವಾಗಿ ಕುಡಿಯಬಹುದಾದ ತಾಪಮಾನದಲ್ಲಿ' ಇರುವುದು ಮುಖ್ಯ.

**ಧೂಮಪಾನ, ಮದ್ಯಪಾನ ತ್ಯಜಿಸಿ:** ಧೂಮಪಾನ, ಮದ್ಯಪಾನ ಮತ್ತು ತಂಬಾಕು ಸೇವನೆ ಸಂಪೂರ್ಣವಾಗಿ ತಪ್ಪಿಸಬೇಕು.

**ಆಮ್ಲೀಯತೆಗೆ ಚಿಕಿತ್ಸೆ:** ನಿರಂತರ ಆಮ್ಲತೆ ಅಥವಾ ಹೊಟ್ಟೆಯ ಸಮಸ್ಯೆಗಳಿದ್ದರೆ ತಕ್ಷಣ ಚಿಕಿತ್ಸೆ ಪಡೆಯಬೇಕು.


**ಆರೋಗ್ಯಕರ ಜೀವನಶೈಲಿ:** ನಿಯಮಿತ ವ್ಯಾಯಾಮ ಮಾಡಿ, ಆರೋಗ್ಯಕರ ಆಹಾರ ಸೇವಿಸಿ, ತೂಕವನ್ನು ನಿಯಂತ್ರಣದಲ್ಲಿಡಬೇಕು.

**ಮಿತವಾಗಿ ಸೇವಿಸಿ:** ದಿನಕ್ಕೆ ಹೆಚ್ಚಿನ ಪ್ರಮಾಣದ ಟೀ ಅಥವಾ ಕಾಫಿ ಕುಡಿಯುವುದನ್ನು ಬಿಟ್ಟು ಮಿತವಾಗಿ ಸೇವಿಸಬೇಕು.

ಒಟ್ಟಾರೆಯಾಗಿ, ಟೀ ಅಥವಾ ಕಾಫಿ ಸೇವನೆ ಬೇಡ ಎಂಬುವುದೇ ಸಮಸ್ಯೆಯಲ್ಲ. ನಿಜವಾದ ಅಪಾಯ ಅದು ಎಷ್ಟು ಬಿಸಿ ಇದೆ ಎನ್ನುವುದರಲ್ಲಿ ಅಡಗಿದೆ. ಅತಿಯಾಗಿ ಬಿಸಿ ಟೀ ಅಥವಾ ಕಾಫಿ ಕುಡಿಯುವುದರಿಂದ ಅನ್ನನಾಳದ ಆರೋಗ್ಯ ಹಾಳಾಗಿ, ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುತ್ತದೆ. ಆದ್ದರಿಂದ, ಇನ್ಮುಂದೆ ಬೆಳಗಿನ ಕಪ್ ಟೀ ಹಿಡಿದಾಗ, ಅದನ್ನು ಸ್ವಲ್ಪ ತಣ್ಣಗಾದ ಬಳಿಕವೇ ಕುಡಿಯಿರಿ. ಇದರಿಂದ ನಿಮ್ಮ ಆರೋಗ್ಯ, ಶಕ್ತಿ ಮತ್ತು ಆಯುಷ್ಯ ಕಾಪಾಡಿಕೊಳ್ಳಬಹುದು.

**ಬಿಸಿ ಟೀ ಅಥವಾ ಕಾಫಿಯಿಂದ ಕ್ಯಾನ್ಸರ್ ಹೇಗೆ ಬರುತ್ತದೆ**

- ಅತಿಯಾಗಿ ಬಿಸಿ ಟೀ ಅಥವಾ ಕಾಫಿ ನಮ್ಮ ಆಹಾರ ನಾಳದಲ್ಲಿನ ಸೂಕ್ಷ್ಮ ಕಣಗಳನ್ನು ಸುಡುತ್ತದೆ.
- ಪ್ರಾರಂಭದಲ್ಲಿ ಅಲ್ಲಿ ಗಾಯ ಅಥವಾ ಉರಿಯೂತ ಉಂಟಾಗುತ್ತದೆ.
- ನಿಧಾನವಾಗಿ ಆ ಭಾಗದ ಕಣಗಳು ಹಾನಿಗೊಳಗಾಗಿ ಟಿಷ್ಯೂ ದೋಷಗಳು ಕಂಡುಬರುತ್ತವೆ.
- ಕಾಲಕ್ರಮೇಣ ಇವು ಕ್ಯಾನ್ಸರ್‌ಗಾಗಿ ಮಾರ್ಪಡಬಹುದಾದ ಸಾಧ್ಯತೆ ಇದೆ.



ಸಾಮಾಜಿಕ ಕಳಕಳಿ

**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

# ಉಸಿರೇ ಕನ್ನಡ ಎನ್ನೋಣ

ದೇಷ, ಅಸೂಯೆ ಎಲ್ಲವ ತೊರೆದು
ಕನ್ನಡವ ಕಲಿಸುತ ನುಡಿಯೋಣ
ಕನ್ನಡವೇ ನಮ್ಮ ಉಸಿರೆಂದು ನಲಿಯೋಣ
ಉಸಿರೇ ನಮ್ಮ ಕನ್ನಡ ಎನ್ನೋಣ...
ನಮ್ಮ ಮನಸುಗಳ ಸರೋವರದಿ
ಕನ್ನಡ ಡಿಂಡಿಮ ಬಾರಿಸುತಲಿ
ಸಾಗುವ ನಮ್ಮದೇ ದಾರಿಯಲ್ಲಿ
ಕನ್ನಡ ಕನ್ನಡ ಎನ್ನುತಲಿ....
ಚಿರಕಾಲವಿರಲಿ ಕನ್ನಡ ನಾಡು
ಕಣಕಣದಲ್ಲೂ ತುಂಬಿರಲಿ
ಕನ್ನಡದ ಪ್ರೀತಿ
ಇದುವೇ ಸಂಸ್ಕೃತಿಯ ನೆಲೆ ಬೀಡು
ಕಲೆಗಳ ತವರೂ ನಮ್ಮ ನಾಡು....
ನನ್ನ ನಾಡು ನನ್ನ ನುಡಿ ಕನ್ನಡವು
ಎನ್ನುತ್ತಾ ಎಲ್ಲರೂ ಬಾಳುವೆವು
ಕನ್ನಡಾಂಬೆಯನು ನಮಿಸುತಲಿ
ಭಾರತಾಂಬೆಯನ್ನು ನೆನೆಯುತಲಿ....







# ಎಳನೀರು ಸೇವನೆ ಇರಲಿ

ಎಳನೀರು ಆರೋಗ್ಯಕ್ಕೆ ಪೂರಕವಾಗಿದ್ದು ತೂಕ ಇಳಿಕೆಯ ಪ್ರಯತ್ನಗಳಿಗೆ ಅತಿ ಹೆಚ್ಚಿನ ನೆರವು ನೀಡುತ್ತದೆ. ಅಲ್ಲದೇ ಅಗತ್ಯ ಇರುವಶಕ್ತಿಯನ್ನು ತಕ್ಷಣವೇ ಒದಗಿಸುವುದು, ರೋಗನಿರೋಧಕ ಶಕ್ತಿಯನ್ನು ಬಲಪಡಿಸುವುದು, ಸೂಕ್ಷ್ಮಜೀವಿಗಳಿಂದ ರಕ್ಷಣೆ ಒದಗಿಸುವುದು, ಮೂತ್ರದ ಪ್ರಮಾಣವರ್ಧಿಸಿ ದೇಹದಿಂದ ಕಲ್ಮಶಗಳನ್ನು ನಿವಾರಿಸಲು ನೆರವಾಗುತ್ತದೆ. ನಿತ್ಯವೂ ಬೆಳಗ್ಗಿನ ಪ್ರಥಮ ಆಹಾರವಾಗಿ ಒಂದು ಭರ್ತಿ ಎಳನೀರನ್ನು ಕುಡಿದರೆ ದಿನದ ಅಗತ್ಯದ ಎಲೆಕ್ಟ್ರೋಲೈಟುಗಳು ಲಭಿಸುತ್ತವೆಹಾಗೂ ಇವು ಅಧಿಕ ರಕ್ತದೊತ್ತಡ ಎದುರಾಗದಂತೆ ತಡೆಯುತ್ತವೆ. ಎಳನೀರು ಥೈರಾಯ್ಡ್ ಗ್ರಂಥಿಯ ಸ್ರವಿಕೆಗೆ ಪ್ರಚೋದನೆಒದಗಿಸುತ್ತದೆ. ಪೋಷಕಾಂಶಗಳಿಂದ ಸಮೃದ್ಧವಾಗಿದೆ. ಅವಶ್ಯಕ ಎಲೆಕ್ಟ್ರೋಲೈಟುಗಳ ಹೊರತಾಗಿಕಾಲ್ಸಿಯಂ, ಗಂಧಕ, ಪೊಟ್ಯಾಶಿಯಂ ಮತ್ತು ಸೋಡಿಯಂ ಅಂಶಗಳು ಪ್ರಮುಖವಾಗಿದ್ದು ಆರೋಗ್ಯವನ್ನು ಕಾಪಾಡುವಲ್ಲಿ ನೆರವಾಗುತ್ತವೆ. ತ್ವಚೆಯ ಕಾಂತಿ ಹೆಚ್ಚಿಸುತ್ತದೆ ತ್ವಚೆಯ ಆರೋಗ್ಯ ಉತ್ತಮ ಆಗಿರಲು ದೇಹದಲ್ಲಿ ಸಾಕಷ್ಟು ಪ್ರಮಾಣದ ಆದ್ರತೆ ಇರಬೇಕು. ಎಳನೀರನ್ನು ಕುಡಿಯುವಹೊರತಾಗಿ ಎಳನೀರನ್ನು ತ್ವಚೆಗೆ ಹಚ್ಚಿಕೊಳ್ಳುವ ಮೂಲಕವೂ ಅಗತ್ಯವಿರುವ ಪೋಷಣೆಯನ್ನು ಒದಗಿಸಬಹುದು. ಪರಿಣಾಮವಾಗಿ ಕ್ಷಿಪ್ರ ಸಮಯದಲ್ಲಿಯೇ ತ್ವಚೆ ಹೊಳೆಯಲಾರಂಭಿಸುತ್ತದೆ. ಎಳನೀರು ನೈಸರ್ಗಿಕ ಹಾಗೂ ಅತ್ಯುತ್ತಮವಾದ ತೇವಕಾರಕವಾಗಿದೆ, ಈ ಗುಣ ಮೊಡವೆಗಳನ್ನು ದೂರವಿಡುತ್ತದೆ. ಎಳನೀರಿನಲ್ಲಿರುವ ಸೈಟೋಕಿನಿನ್ ಎಂಬ ಪೋಷಕಾಂಶಕ್ಕೆ ಚರ್ಮದ ಸೆಳೆತವನ್ನು ಹೆಚ್ಚಿಸುವ ಗುಣವಿದ್ದು ವೃದ್ಧಾಪ್ಯದ ಚಿಹ್ನೆಗಳು ಆವರಿಸುವುದನ್ನು ತಡವಾಗಿಸಿ ವೃದ್ಧಾಪ್ಯವನ್ನು ಮುಂದೂಡುತ್ತದೆ. ಅಲ್ಲದೇ ಎಕ್ಸಿಮಾ ಎಂಬ ಚರ್ಮರೋಗಕ್ಕೆ ಅತ್ಯುತ್ತಮ ಔಷಧಿಯೂ ಹೌದು. ಬಾಯಾರಿಕೆಗೆ ಎಳನೀರಿಗಿಂತ ಉತ್ತಮವಾದ ಜಲ ಈ ಜಗತ್ತಿನಲ್ಲಿಲ್ಲ. ವಿಶೇಷವಾಗಿ ಇದರಲ್ಲಿರುವ ಎಲೆಕ್ಟ್ರೋಲೈಟುಗಳು ದಣಿದ ದೇಹಕ್ಕೆ ಶಕ್ತಿಯನ್ನು ಒದಗಿಸುವ ಜೊತೆಗೇ ಬೆವರು, ಅತಿಸಾರ, ವಾಂತಿ ಮೊದಲಾದ ಕಾರಣಗಳಿಂದ ದೇಹದಿಂದ ನಷ್ಟವಾಗಿದ್ದ ನೀರಿನಂಶವನ್ನು ಮರುದುಂಬಿಸಿ ಕೋಡುತ್ತದೆ. ಎಳನೀರಿನಲ್ಲಿಯೂ ವಿಟಮಿನ್ ಸಿ ಉತ್ತಮ ಪ್ರಮಾಣದಲ್ಲಿದ್ದು ಇದರ ಜೊತೆಗೇ ಪೊಟ್ಯಾಶಿಯಂ ಮೆಗ್ನಿಶಿಯಂ ರಕ್ತದೊತ್ತಡವನ್ನು ನಿಯಂತ್ರಿಸಲು ನೆರವಾಗುತ್ತವೆ. ವಿಶೇಷವಾಗಿ ಉಪ್ಪಿನಲ್ಲಿರುವ ಸೋಡಿಯಂ ಅಂಶದಿಂದ ಎದುರಾಗಿದ್ದ ಪರಿಣಾಮಗಳಿಗೆ ವಿರುದ್ದ ಪರಿಣಾಮವನ್ನು ಪೊಟ್ಯಶಿಯಂ ಒದಗಿಸಿ ಅಧಿಕ ರಕ್ತದೊತ್ತಡವಾಗದಂತೆ ತಡೆಯುತ್ತದೆ. ಎಳನೀರಿನ ಅತ್ಯುತ್ತಮ ಪ್ರಯೋಜನಗಳಲ್ಲಿ ಇದು ಪ್ರಮುಖವಾಗಿದೆ.

# ಬೆಂಗಳೂರು-ಕೊಚ್ಚಿ ವಂದೇ ಭಾರತ್ ಎಕ್ಸ್‌ಪ್ರೆಸ್: ಅಧಿಕೃತ ವೇಳಾಪಟ್ಟಿ ಪ್ರಕಟ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವಿನ ಹೈಸ್ಪೀಡ್ ರೈಲು ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಸಲುವಾಗಿ, ಭಾರತೀಯ ರೈಲ್ವೆ ಸಚಿವಾಲಯವು ಬೆಂಗಳೂರು-ಕೊಚ್ಚಿ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಅಧಿಕೃತ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಶೀಘ್ರದಲ್ಲೇ ಸಾರ್ವಜನಿಕ ಸೇವೆ ಪ್ರಾರಂಭಿಸಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್, ದಕ್ಷಿಣ ಭಾರತದಲ್ಲಿ ಸಂಚಾರ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುವ ನಿರೀಕ್ಷೆಯಿದೆ.


ಶುಕ್ರವಾರ ಹೊರಡಿಸಲಾದ ಅಧಿಸೂಚನೆಯ ಪ್ರಕಾರ, ರೈಲು ಸಂಖ್ಯೆ 26651 ಕೆಎಸ್‌ಆರ್ ಬೆಂಗಳೂರು-ಎರ್ನಾಕುಲಂ ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರತಿ ದಿನ ಬೆಳಗ್ಗೆ 5:10ಕ್ಕೆ ಬೆಂಗಳೂರು ನಿಲ್ದಾಣದಿಂದ ಹೊರಳಿ, ಮಧ್ಯಾಹ್ನ 1:50ಕ್ಕೆ ಎರ್ನಾಕುಲಂ ಜಂಕ್ಷನ್ ತಲುಪಲಿದೆ. ಮರಳಿ ಪ್ರಯಾಣಕ್ಕಾಗಿ, ರೈಲು ಸಂಖ್ಯೆ 26652 ಎರ್ನಾಕುಲಂನಿಂದ ಮಧ್ಯಾಹ್ನ 2:20ಕ್ಕೆ ಹೊರಟು, ರಾತ್ರಿ 11:00ಕ್ಕೆ ಬೆಂಗಳೂರಿಗೆ ಆಗಮಿಸಲಿದೆ.



ಈ ರೈಲು ಕೃಷ್ಣರಾಜಪುರಂ, ಸೇಲಂ, ಈರೋಡ್, ತಿರುಪ್ಪೂರು, ಕೊಯಮತ್ತೂರು, ಪಾಲಕ್ಕಾಡ್ ಮತ್ತು ತ್ರಿಶೂರ್ ನಿಲ್ದಾಣಗಳಲ್ಲಿ ನಿಗದಿತ ನಿಲುಗಡೆ ಇರಲಿದೆ. ನಿಯಮಿತ ಸೇವೆ ಆರಂಭಕ್ಕೂ ಮೊದಲು ಪರೀಕ್ಷಾರ್ಥ ವಿಶೇಷ ರೈಲು ಸಂಚಾರ ಸಾಧ್ಯತೆಯೂ ಇದೆ. ದಕ್ಷಿಣ ಹಾಗೂ ನೈಋತ್ಯ ರೈಲ್ವೆ ವಲಯಗಳಿಗೆ ತ್ವರಿತ ಸಿದ್ಧತೆ ಮಾಡಲು ಸಚಿವಾಲಯ ನಿರ್ದೇಶನ ನೀಡಿದೆ.

**ನವೆಂಬರ್ ಮಧ್ಯಭಾಗದಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್**

**ಅಕ್ಟೋಬರ್ ಆರಂಭದಲ್ಲಿಯೇ ಬೆಂಗಳೂರಿನಿಂದ ಕೇರಳದ ಪ್ರಮುಖ ನಗರಗಳಾದ ತ್ರಿಶೂರ್ ಮತ್ತು ಪಾಲಕ್ಕಾಡ್‌ಗಳೊಂದಿಗೆ ಸಂಪರ್ಕಿಸುವ ಈ ವಿಶೇಷ ರೈಲುಗಳ ಕುರಿತ ಘೋಷಣೆ ಮಾಡಲಾಗಿತ್ತು. ಇದು ವಿಶೇಷವಾಗಿ ಬೆಂಗಳೂರಿನ ತಂತ್ರಜ್ಞಾನ ಮತ್ತು ಸೇವಾ ವಲಯಗಳಲ್ಲಿ ಕೆಲಸ ಮಾಡುವ ಮಲಯಾಳಿ ಸಮುದಾಯದಲ್ಲಿ ಗಮನಾರ್ಹ ಉತ್ಸಾಹವನ್ನು ಹುಟ್ಟುಹಾಕಿತ್ತು. ರೈಲ್ವೆ ಸಚಿವೆ ಅಶ್ವಿನಿ ವೈಷ್ಣವ್ ಅವರ ಹೇಳಿರುವಂತೆ ಎರ್ನಾಕುಲಂ ಮತ್ತು ಬೆಂಗಳೂರು ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ನವೆಂಬರ್ ಮಧ್ಯಭಾಗದಲ್ಲಿ ಪ್ರಾರಂಭವಾಗಲಿದೆ.**



# ರಾಮಾಯಣ

**ಸೀತಾದೇವಿಯು ರಾವಣನಿಗೆ ತಮ್ಮ ವೃತ್ತಾಂತವನ್ನು ಹೇಳಿದ್ದು**

• ಹಿಂದಿನ ಸಂಚಿಕೆಯಿಂದ

**120 ನೆಯ ಅಧ್ಯಾಯ**

ನಾನು ನಾನಾದೇಶಗಳಿಂದ ರೂಪಲಾವಣ್ಯಗಳುಳ್ಳ ವಿಲಾಸವತಿಯರಾದ ಅನೇಕ ಸ್ತ್ರೀಯರನ್ನು ತಂದಿಟ್ಟುಕೊಂಡಿದ್ದೇನೆ. ಅವರೆಲ್ಲರಿಗೂ ನೀನು ಜ್ಯೇಷ್ಠೆಯಾಗಿ ನನ್ನ ಪಟ್ಟದರಾಣಿಯಾಗಿರು.

ನನಗೆ ಸಮುದ್ರದ ಮಧ್ಯದಲ್ಲಿ ಲಂಕಾಪುರಿಯೆಂಬ ಪಟ್ಟಣವುಂಟು. ಆ ಪಟ್ಟಣವು ತ್ರಿಕೂಟ ಪರ್ವತದ ಮೇಲಿದೆ. ಅಂಥ ಪಟ್ಟಣದಲ್ಲಿ ರಮಣೀಯವಾದ ಉದ್ಯಾನ ವನದಲ್ಲಿ ನನ್ನೊಡನೆ ಕ್ರೀಡಿಸಿಕೊಂಡಿರು. ಈ ಅರಣ್ಯದಲ್ಲಿರುವುದು ನಿನಗೆ ಉಚಿತವಲ್ಲ. ನೀನು ನನ್ನ ಭಾರ್ಯೆಯಾದರೆ ಸರ್ವಾಭರಣಭೂಷಿತೆಯರಾದ ಐದು ಸಾವಿರ ಮಂದಿ ಊಳಿಗದ ಸ್ತ್ರೀಯರನ್ನು ನಿನಗೆ ಸೇವೆಮಾಡಿಕೊಂಡಿರುವಂತೆ ನಿಯಮಿಸುತ್ತೇನೆ ಎಂದು ನುಡಿದನು. ಆ ಮಾತನ್ನು ಕೇಳಿ ಸೀತಾದೇವಿಯು ಅತ್ಯಂತ ಕೋಪಯುಕ್ತಳಾದಳು. ಅವಳು ರಾವಣನನ್ನು ಲೆಕ್ಕಿಸದೆ ಪ್ರತ್ಯುತ್ತರ ಕೊಟ್ಟಳು ಎಲೈ ರಾವಣ, ನಾನು ಮಹಾಮೇರುಪರ್ವತದಂತೆ ಧೀರನೂ ಮಹಾಸಮುದ್ರದಂತೆ ತಡೆಯಲು ಶಕ್ತನಲ್ಲದವನೂ ದೇವೇಂದ್ರನಿಗೆ ಸಮಾನನೂ ಆದ ಶ್ರೀರಾಮನ ಪಟ್ಟದರಾಣಿ ಸರ್ವಲಕ್ಷಣಸಂಪನ್ನನೂ ಸತ್ಯಸಂಧನೂ ಮಹಾಪರಾಕ್ರಮವುಳ್ಳವನೂ ಆದ ಮಹಾಭಾಗ್ಯಶಾಲಿಯಾದ ಶ್ರೀರಾಮನಲ್ಲಿಯೇ ನಿಯಮವ್ರತವುಳ್ಳವಳು. ಆಜಾನುಬಾಹುವೂ ವಿಶಾಲವೃಕ್ಷನೂ ಸಿಂಹರಾಜನನ್ನು ಅತಿಕ್ರಮಿಸುವ ಪರಾಕ್ರಮವುಳ್ಳವನೂ ಪೂರ್ಣಚಂದ್ರನಂತೆ ಮುಖಕಾಂತಿಯುಳ್ಳವನೂ ಮಹಾತ್ಮನೂ ಆದ ನನ್ನ ಪತಿಗೆ ಸಮಾನರಾದವರಿಲ್ಲ. ಜಂಬುಕವು ಮಹಾಪರಾಕ್ರಮವುಳ್ಳ ಹೆಣ್ಣು ಸಿಂಹವನ್ನು ಬಯಸುವಂತೆ ಅಜ್ಞಾನದಿಂದ ನೀನು ನನ್ನನ್ನು ಬಯಸುತ್ತಿದ್ದೀಯೆ. ಮಂದಭಾಗ್ಯನಾದವನು ಮರಣವು ಪ್ರಾಪ್ತವಾದಾಗ ಸ್ವಪ್ನದಲ್ಲಿ ಸುವರ್ಣ ಮಯವಾದ ವೃಕ್ಷಗಳನ್ನು ಕಾಣುವಂತೆ ನೀನು ನನ್ನನ್ನು ಬಯಸುತ್ತಿದ್ದೀಯೆ. ಹಸಿದಿರುವ ಸಿಂಹದ ಬಾಯಿಯಿಂದ ಅದರ ಕೋರೆಹಲ್ಲನ್ನು ಕೀಳಬಯಸಿದ್ದೀಯೆ. ಕೃಷ್ಣಸರ್ಪತಿ ಬಾಯಿದಿಂಗ ವಿಷದಂಶವನ್ನು ತೆಗೆಯಲಿಚ್ಛಿಸುವದನಂತೆಯೂ ಪ್ರಜ್ವಲಿಸುತ್ತಿರುವ ಅಗ್ನಿಯನ್ನು ಇಲ್ಲಿ ಕಟ್ಟಲಿಚ್ಛಿಸುವದನಂತೆಯೂ ಶ್ರೀರಾಮನ ಪತ್ನಿಯಾಗ ನನ್ನನ್ನು ಸಹರಿಸಲಿ. ಸುಬ್ಬಯೆ. ಕಾಲಕೂಟವಿಷವನ್ನು ಪಾನಮಾಡಿ ಬದುಕಲಿಚ್ಛಿಸುದತೆ ನನ್ನನ್ನು ಆಸಹರಿಗೆ ಬೇಪಿಸು ಬಯಸಿದ್ದೀಯೆ. ಸಿಂಹಕ್ಕೂ ನರಿಗೂ ಎಷ್ಟು ವ್ಯತ್ಯಾಸವುಂಟೋ, ಸಮುಗ್ರಕ್ಕೂ ಕಾಲುರೆಗೂ ಎಷ್ಟು ಭೇಗವುಂಟ, ಗೇವೋತ್ರನಮನಿಗೂ ಕಿರಾಜಿನಿಗೂ ಎದ್ದು ವಾರ ಯುವಟೋ ಸುವರ್ಣಕ್ಕೂ ಸೀಸಕ್ಕೂ ಎಷ್ಟು ಅಂತರವುಂಟೋ, ಶ್ರೀಗಂಧಕ್ಕೂ ಕೆಸರಿಗ ಎಷ್ಟು ಭೇಗವುಂಟೋ ಅಷ್ಟು ವ್ಯತ್ಯಾಸವು ಶ್ರೀರಾಮನಿಗೂ ನಿನಗೂ ಇದೆ. ಆನೆಗೂ ಬೆಕ್ಕಿಗೂ, ಗರುಡಸಿಗೂ ಕಾಗೆಗೂ ನವಿಲಿಗೂ ಗೂಬೆಗೂ, ಹಂಸಕ್ಕೂ ಪದ್ದಿಗೂ ಇರುವಷ್ಟು ಭೇಗವು ಶ್ರೀರಾಮನಿಗೂ ನಿನಗೂ ಇದೆ. ದೇವೇಂದ್ರನಿಗೆ ಸಮಾನನಾದ ಶ್ರೀರಾಮನು ಧನುರ್ಧಾರಿಯಾಗಿ ನಿನ್ನನ್ನು ಎದುರಿಸಿದರೆ, ನೀನು ಏನು ಮಾಡಬಲ್ಲೆ ನೊಣದ ಮೇಲೆ ವಜ್ರಾಯುಧವು ಪಿರಗಿದಂತಾದೀತು

**ಮುಂದುವರಿಯುವುದು...**

# ತುಳಸಿಯೊಂದಿಗೆ ಶ್ರೀವಿಷ್ಣುವಿನ ವಿವಾಹ ಮಾಡುವುದೇ ತುಳಸಿ ವಿವಾಹ



**ತುಳಸಿ ಶ್ರೀಸಖಿ ಶುಭೇ ಪಾಪಹಾರಿಣಿ ಪುಣ್ಯದೇ
ನಮಸ್ತೇ ನಾರದನುತೇ ನಾರಾಯಣಮನಃಪ್ರಿಯೇ**

**ಅರ್ಥ:** ಹೇ ತುಳಸಿ ನೀನು ಲಕ್ಷ್ಮೀ ದೇವಿಯ ಸಖಿ, ಶುಭದಾಯಕಿ, ಪಾಪಹಾರಿಣಿ ಮತ್ತು ಪುಣ್ಯದಾಯಕಿ.

ನಾರದರಿಂದ ಸ್ತುತಿಸಲ್ಪಟ್ಟ, ನಾರಾಯಣನಿಗೆ ಅತಿಪ್ರಿಯವಾದ ತಳಸಿಯೇ, ನಿನಗೆ ನಮಸ್ಕಾರ ಮಾಡುತ್ತೇನೆ.

**ತಿಥಿ :** ಈ ವಿಧಿಯನ್ನು ಕಾರ್ತಿಕ ಶುಕ್ಲ ದ್ವಾದಶಿಯಿಂದ ಹುಣ್ಣಿಮೆಯ ವರೆಗಿನ ಯಾವುದಾದರೊಂದು ದಿನ ಮಾಡುತ್ತಾರೆ.

**ಪೂಜೆ:** ತುಳಸಿಯೊಂದಿಗೆ ಶ್ರೀವಿಷ್ಣುವಿನ ಬಾಲಕೃಷ್ಣನ ಮೂರ್ತಿಯ ವಿವಾಹವನ್ನು ಮಾಡುವುದೇ ತುಳಸಿ ವಿವಾಹದ ವಿಧಿಯಾಗಿದೆ. ವಿವಾಹದ ಹಿಂದಿನ ದಿನ ತುಳಸಿ ಬೃಂದಾವನವನ್ನು ಬಣ್ಣ ಹಚ್ಚಿ ಅಲಂಕರಿಸುತ್ತಾರೆ. ಬೃಂದಾವನದಲ್ಲಿ ಕಬ್ಬು, ಚೆಂಡು ಹೂವುಗಳನ್ನು ಹಾಕುತ್ತಾರೆ ಮತ್ತು ಅದರ ಬುಡದಲ್ಲಿ ಹುಣಸೇಕಾಯಿ ಮತ್ತು ನೆಲ್ಲಿಕಾಯಿಗಳನ್ನು ಇಡುತ್ತಾರೆ. ಈ ವಿವಾಹದ ವಿಧಿಯನ್ನು ಸಾಯಂಕಾಲ ಮಾಡುತ್ತಾರೆ.

**ವೈಶಿಷ್ಟ್ಯ:** ತುಳಸಿ ವಿವಾಹದ ಬಳಿಕ ಚಾತುರ್ಮಾಸದಲ್ಲಿ ಕೈಗೊಂಡ ಎಲ್ಲಾ ವ್ರತಗಳನ್ನು ಸಮಾಪ್ತಗೊಳಿಸುತ್ತಾರೆ. ಚಾತುರ್ಮಾಸದಲ್ಲಿ ಯಾವ ಪದಾರ್ಥಗಳನ್ನು ವರ್ಜ್ಯ ಮಾಡಿರುತ್ತಾರೆಯೋ, ಆ ಪದಾರ್ಥಗಳನ್ನು ಬ್ರಾಹ್ಮಣರಿಗೆ ದಾನ ಮಾಡಿ ನಂತರ ತಾವೂ ಸೇವಿಸುತ್ತಾರೆ.ದೀಪಾವಳಿ ಹಬ್ಬದ ನಂತರ ಬರುವ ಇನ್ನೊಂದು ಹಬ್ಬ ತುಳಸಿ ಹಬ್ಬ ಅಥವಾ ತುಳಸಿ ಮದುವೆ. ಕಾರ್ತಿಕ ಮಾಸದ ಶುಕ್ಲ ಪಕ್ಷದ ದ್ವಾದಶಿಯಂದು ಈ ಪವಿತ್ರ ದಿನವನ್ನು ತುಳಸಿ ಮದುವೆಯನ್ನಾಗಿ ಆಚರಿಸುವರು. ಅಂದಿನ ದಿನ ರೇವತಿ ನಕ್ಷತ್ರದ ಯೋಗವಿದ್ದರೆ ಇನ್ನೂ ಶ್ರೇಷ್ಠ.

**ಉತ್ಥಾನವೆಂದರೆ ಏಳು ಎಂಬರ್ಥ.** ಶ್ರೀಮನ್ನಾರಾಯಣನು ತನ್ನ ನಿದ್ರಾವಸ್ಥೆಯಿಂದ ಹೊರ ಬಂದು ತನ್ನ ಭಕ್ತಾದಿಗಳಿಗೆ ದರ್ಶನ ಕೊಡುವನೆಂಬ ಪ್ರತೀತಿ ಇದೆ. ಆ ಭಗವಂತನು ಹಾಲ್ಗಡಲಿನಲ್ಲಿ ಮಲಗಿದ್ದು, ಅವನನ್ನು ಸುಪ್ರಭಾತ ಸೇವೆಯ ಮೂಲಕ ಎಬ್ಬಿಸುವುದರಿಂದ ಈ ವ್ರತವನ್ನು ಕ್ಷೀರಾಬ್ಧಿ ವ್ರತವೆಂದೂ ಕರೆಯುವರು. ಕಾರ್ತಿಕ ಶುಕ್ಲ ಪಕ್ಷ ಏಕಾದಶಿಯಂದು ಪ್ರಾತಃ ಕಾಲದಲ್ಲಿ ಕುಂಭದಾನವನ್ನು ಮಾಡಿ ಉಪವಾಸ ವ್ರತವನ್ನಾಚರಿಸಬೇಕು. ಅಂದು ಸೋಮವಾರವಾಗಿದ್ದು, ಉತ್ತರಾಷಾಢ ನಕ್ಷತ್ರವಾಗಿದ್ದರೆ ತುಂಬಾ ಶ್ರೇಷ್ಠ. ಅಂದಿನ ರಾತ್ರಿಯಂದೇ ವಿಷ್ಣುವನ್ನು ಎಬ್ಬಿಸಬೇಕು. ಹಾಗೆ ಎಬ್ಬಿಸುವಾಗ ಈ ಕೆಳಕಂಡ ವೇದೋಕ್ತ ಮಂತ್ರವನ್ನು ಹೇಳಬೇಕು.

**ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್
ಸಮೂಢಮಸ್ಯ ಪಾಗೇಂಸುರೇ**



ಮಳೆಗಾಲದ ನಾಲ್ಕು ತಿಂಗಳುಗಳಲ್ಲಿ ಮಳೆಯು ಹೆಚ್ಚಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿರುತ್ತದೆ.

ಇಂತಹ ಸಂದರ್ಭದಲ್ಲಿ ಸನ್ಯಾಸಿಗಳು ದೇಶ ಸಂಚಾರವನ್ನು ಮಾಡದೇ ಒಂದೆಡೆಯಲ್ಲಿ, ಚಾತುರ್ಮಾಸ್ಯ ವ್ರತವನ್ನು ಆಚರಿಸುವರು. ಆ ಸಂದರ್ಭದಲ್ಲಿ ಶ್ರೀಮನ್ನಾರಾಯಣನು ನಿದ್ರಾವಸ್ಥೆಯಲ್ಲಿರುತ್ತಾನೆಂದೂ, ಚಾತುರ್ಮಾಸ್ಯ ಮುಗಿಯುವ ವೇಳೆಯಲ್ಲಿ ಅವನನ್ನು ಎಬ್ಬಿಸಲು ಸುಪ್ರಭಾತವನ್ನು ಹಾಡುವರು. ಅದು ಸಂಕ್ಷಿಪ್ತವಾಗಿ ಹೀಗಿದೆ.

**ಉತ್ತಿಷ್ಠೋತ್ತಿಷ್ಠ ಗೋವಿಂದ ಉತ್ತಿಷ್ಠ ಗರುಡಧ್ವಜ
ಉತ್ತಿಷ್ಠ ಕಮಲಾಕಾಂತ ತ್ರೈಲೋಕ್ಯಂ ಮಂಗಲಂಕುರು**

ಚಾತುರ್ಮಾಸ್ಯದ ಕೊನೆಯ ಹಂತದ ಏಕಾದಶಿಯ ರಾತ್ರಿ ಒಂದು ಕುಂಭದಲ್ಲಿ ಉದ್ದಿನಕಾಳಿನ ಪ್ರಮಾಣದ ಚಿನ್ನದ ಮೀನಿನ ಮೂರ್ತಿಗೆ ಪಂಚಾಮೃತ ಅಭಿಷೇಕ ಮಾಡಿ, ಪೂಜಿಸಿ, ಅಂದು ಜಾಗರಣೆಯನ್ನು ಮಾಡಿ, ದ್ವಾದಶಿಯ ಬೆಳಗ್ಗೆ ಮತ್ತೆ ಪೂಜಿಸಿ ಬ್ರಾಹ್ಮಣರಿಗೆ ದಕ್ಷಿಣೆ ಸಮೇತವಾಗಿ ದಾನ ಮಾಡಬೇಕು. ಅಂದು ಧಾತ್ರೀ ದೇವಿಯ ಸ್ವರೂಪವಾದ ನೆಲ್ಲಿಯ ಮರವನ್ನು ಪೂಜಿಸಿ, ಧಾತ್ರೀ, ಶಾಂತಿ, ಮೇಧಾ, ಪ್ರಕೃತಿ, ವಿಷ್ಣುಪತ್ನೀ, ಮಹಾಲಕ್ಷ್ಮೀ, ರಮ್ಯಾ, ಕಮಲಾ, ಇಂದಿರಾ, ಲೋಕಮಾತಾ, ಕಲ್ಯಾಣೀ, ಕಮನೀಯಾ, ಸಾವಿತ್ರೀ, ಜಗದ್ಧಾತ್ರೀ, ಗಾಯತ್ರೀ, ಸುಧೃತೀ, ಅವ್ಯಕ್ತಾ, ವಿಶ್ವರೂಪಾ, ಸುರೂಪಾ ಮತು ಅಬ್ಧಿಭವಾ ಎಂಬ ಹೆಸರುಗಳಿಂದ ಅರ್ಚಿಸಬೇಕು. ಕೆಲವು ಮನೆಗಳಲ್ಲಿ ತುಲಸೀ ಮತ್ತು ಶ್ರೀಮನ್ನಾರಾಯಣನಿಗೆ ವಿವಾಹವನ್ನು ಮಾಡುವ ಪದ್ಧತಿಯೂ ಇದೆ. ಭಗವಂತನಿಗೆ ಪುರುಷಸೂಕ್ತದಿಂದಲೂ ಮತ್ತು ತುಲಸಿ ದೇವಿಗೆ ಶ್ರೀಸೂಕ್ತದಿಂದಲೂ ಅರ್ಚನೆ ಮಾಡಬೇಕು. ತುಲಸಿಯ ಎದುರಿಗೆ ಶ್ರೀ ಕೃಷ್ಣನ ಪ್ರತಿಮೆಯನ್ನಿರಿಸಿ ಮಧ್ಯದಲ್ಲಿ ಅಂತರಪಟವನ್ನು ಹಿಡಿದು ಮದುವೆ ಮಾಡಿಸುತ್ತಾರೆ. ನೆಲ್ಲಿಯಲ್ಲಿ ವಾತ ಪಿತ್ತಗಳನ್ನು ಶಮನ ಮಾಡುವ ಶಕ್ತಿಯಿದೆ. ರಕ್ತದೋಷವನ್ನೂ ನಿವಾರಿಸುವ ಶಕ್ತಿಯಿದೆ. ಅದರ ಹಾರವನ್ನು ತುಲಸೀ ಮತ್ತು ನಾರಾಯಣನಿಗೆ ಹಾಕುವುದು ಪದ್ಧತಿ. ಪ್ರಾತಃ ಕಾಲದಲ್ಲಿ ಪೂಜೆಯನ್ನು ಮಾಡಿದರೆ, ಸಂಜೆಯ ಸಮಯದಲ್ಲಿ ತುಲಸಿ ವಿವಾಹವನ್ನು ಮಾಡುವರು.

## ನ್ಯಾಯ ಒದಗಿಸುವಲ್ಲಿ ವಕೀಲರ ಪಾತ್ರ ಪ್ರಮುಖ: ಬಿ. ವೀರಪ್ಪ


ಉದಯವಾಹಿನಿ ಚಿತ್ರ

• ಉದಯವಾಹಿನಿ ಕೊಪ್ಪಳ

ಸಾಮಾಜಿಕ ಜೀವನದಲ್ಲಿ ತೊಂದರೆಗೊಳಗಾದ ಸಾರ್ವಜನಿಕರಿಗೆ ನ್ಯಾಯ ಒದಗಿಸುವಲ್ಲಿ ವಕೀಲರ ಕಾರ್ಯ ಮಹತ್ವದ್ದಾಗಿದೆ' ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಹೇಳಿದರು. ಜಿಲ್ಲಾ ವಕೀಲರ ಸಂಘದ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ವಕೀಲರ ಸಂಘ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸಾರ್ವಜನಿಕ ಆಡಳಿತ ಮತ್ತು ಲೋಕಾಯುಕ್ತ ಕಾಯ್ದೆ-1988 ರ ಅಡಿಯಲ್ಲಿ ವಕೀಲರ ಪಾತ್ರದ ಕುರಿತು ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ನ್ಯಾಯಾಲಯದಲ್ಲಿ ಯಾವುದೇ ಧರ್ಮ, ಜಾತಿ ಭೇದವಿಲ್ಲ. ಇಡೀ ಪ್ರಪಂಚದಲ್ಲಿ ಪವಿತ್ರವಾದ ಮಂದಿರ ನ್ಯಾಯ ಮಂದಿರವಾಗಿದೆ. ನ್ಯಾಯ ಎಂದರೇ ಎಲ್ಲರೂ ತಲೆ ಬಾಗಿಸಲೇಬೇಕು' ಎಂದರು.

ನ್ಯಾಯಾಧೀಶರು, ನ್ಯಾಯವಾದಿಗಳು, ಸಿಬ್ಬಂದಿ ಮತ್ತು ನ್ಯಾಯಾಲಯದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರ ಸಂಕಲ್ಪ ನ್ಯಾಯ ಒದಗಿಸುವುದಾಗಿದೆ. ಇದರಲ್ಲಿ ವಕೀಲರ ಪಾತ್ರವೂ ಪ್ರಮುಖವಾಗಿದೆ. ನ್ಯಾಯಲಯದಲ್ಲಿ ಯಾವುದೇ ಒಂದು ಪ್ರಕರಣವನ್ನು ಇತ್ಯರ್ಥಪಡಿಸಬೇಕಾದರೆ ವಕೀಲರ ಪಾತ್ರ ಅಷ್ಟೇ ಅಲ್ಲದೇ ನ್ಯಾಯಾಧೀಶರ ಮತ್ತು ನ್ಯಾಯಾಂಗ ಇಲಾಖೆಯ ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಪಾತ್ರವು ಬಹು ಮುಖ್ಯವಾಗಿದೆ' ಎಂದು ಹೇಳಿದರು. ದೇಶದ ರಕ್ಷಣೆಗಾಗಿ ಸೈನಿಕರು ಗಡಿಯಲ್ಲಿ ಪ್ರತಿನಿತ್ಯ ತಮ್ಮ ಪ್ರಾಣಾರ್ಪಣೆ ಮಾಡುತ್ತಿದ್ದಾರೆ. ಗಡಿಯಲ್ಲಿ ಹಗಲಿರುಳು, ಚಳಿ, ಮಳೆ, ಗಾಳಿ, ಬಿಸಿಲು ಎನ್ನದೇ ತಮ್ಮ ಜೀವದ ಹಂಗನ್ನು ತೊರೆದು ಅವರು ನಮಗಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸ್ವಾತಂತ್ರ್ಯದಿಂದ ಬಂದಂತಹ ನಮ್ಮ ಹಕ್ಕು , ಕರ್ತವ್ಯಗಳನ್ನು ಸರಿಪಡಿಸಲು ನ್ಯಾಯಾಂಗದ ಪೆನ್ನು ಗಟ್ಟಿಯಾಗಿರಬೇಕು ಎಂದು ಕಿವಿಮಾತು ಹೇಳಿದರು.

### ಲಿಂಗಾಯತಕ್ಕೆ ಮಾತ್ರ ಪ್ರತ್ಯೇಕ ಧರ್ಮದ ಮಾನ್ಯತೆ ಪಡೆಯುವ ಅರ್ಹತೆ ಇದೆ: ಮಾತೆ ಗಂಗಾದೇವಿ

# ವೀರಶೈವ ಲಿಂಗಾಯತ ಪ್ರತ್ಯೇಕ ಧರ್ಮ ಅಸಾಧ್ಯ

• ಉದಯವಾಹಿನಿ ದಾವಣಗೆರೆ

ವೀರಶೈವ ಲಿಂಗಾಯತಕ್ಕೆ ಶತಮಾನ ಕಳೆದರೂ ಪ್ರತ್ಯೇಕ ಧರ್ಮದ ಮಾನ್ಯತೆ ಸಿಗುವುದಿಲ್ಲ. ಲಿಂಗಾಯತಕ್ಕೆ ಮಾತ್ರ ಪ್ರತ್ಯೇಕ ಧರ್ಮದ ಮಾನ್ಯತೆ ಪಡೆಯುವ ಅರ್ಹತೆ ಇದೆ ಎಂದು ಕೂಡಲಸಂಗಮದ ಬಸವಧರ್ಮ ಪೀಠದ ಅಧ್ಯಕ್ಷೆ ಮಾತೆ ಗಂಗಾದೇವಿ ಅಭಿಪ್ರಾಯಪಟ್ಟರು.

'ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟ ಹಲವು ವರ್ಷಗಳಿಂದ ನಡೆಯುತ್ತಿದೆ. ಮಾತೆ ಮಹಾದೇವಿ ಇದಕ್ಕೆ ಸಾಕಷ್ಟು ಶ್ರಮಿಸಿದ್ದಾರೆ. ಪ್ರತ್ಯೇಕ ಧರ್ಮದ ಮಾನ್ಯತೆ ಸಿಗುವವರೆಗೂ ಹೋರಾಟ ನಡೆಯಲಿದೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಪಾದಿಸಿದರು.

**ಬಸವ ಸಂಸ್ಕೃತಿ ಅಭಿಯಾನ ಯಶಸ್ವಿ**

ಗುರು-ವಿರಕ್ತ ಪರಂಪರಂಒಗ್ಗೂಡುವುದಕ್ಕೆ ವಿರೋಧವಿಲ್ಲ. ಆದರೆ, ವೀರಶೈವ-ಲಿಂಗಾಯತ ಪ್ರತ್ಯೇಕ ಧರ್ಮದ ಪ್ರಸ್ತಾವ ಬೆಂಬಲಿಸುವುದಿಲ್ಲ. 12ನೇ ಶತಮಾನದಲ್ಲಿ ಧರ್ಮ ಸ್ಥಾಪನೆ ಮಾಡಿದ ಬಸವಣ್ಣನವರನ್ನು ಧರ್ಮಗುರು, ವಚನಗಳನ್ನು ಧರ್ಮಗ್ರಂಥ ಹಾಗೂ ಕೂಡಲಸಂಗಮವನ್ನು ಧರ್ಮಕ್ಷೇತ್ರ ಎಂಬುದಾಗಿ ಒಪ್ಪಿಕೊಳ್ಳುವವರೊಂದಿಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದಕ್ಕೆ ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಸಿದ್ಧರಿದ್ದಾರೆಯೇ' ಎಂದು ಪ್ರಶ್ನಿಸಿದರು.

**ಧರಣಿಗೆ ನಿರ್ಣಯ**

**ಕನೇರಿ ಮಠದ ಕಾಡಸಿದ್ದೇಶ್ವರ ಸ್ವಾಮೀಜಿ ಲಿಂಗಾಯತ ಮಠಾಧೀಶರನ್ನು ನಿಂದಿಸಿದ್ದು ಖಂಡನೀಯ. ಸ್ವಾಮೀಜಿ ಹೇಳಿಕೆಯನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವ ಶಾಸಕರು, ಲಿಂಗಾಯತ ಮುಖಂಡರ ಮನೆಯ ಮುಂದೆ ಧರಣಿ ನಡೆಸಲು ರಾಷ್ಟ್ರೀಯ ಬಸವ ದಳದ ಜಿಲ್ಲಾ ಸಮ್ಮೇಳನ ನಿರ್ಣಯ ಕೈಗೊಂಡಿದೆ.**

ಹಿಂದೂ ಎಂಬುದು ಧರ್ಮವಲ್ಲ, ಅದೊಂದು ಜೀವನಕ್ರಮ. ಭಾರತದಲ್ಲಿ ಜನಿಸಿದ ಬಹುತೇಕರು ಸಾಂಸ್ಕೃತಿಕವಾಗಿ ಹಿಂದೂಗಳೇ ಆಗಿರುತ್ತಾರೆ. ಪುರಾಣದ ಕಾಲ್ಪನಿಕ ದೇವರುಗಳನ್ನು ಲಿಂಗಾಯತರು ಪೂಜೆ ಮಾಡುವುದಿಲ್ಲ. ಗುರು-ಲಿಂಗ ಪೂಜೆ ಮಾತ್ರ ಲಿಂಗಾಯತರ ಧಾರ್ಮಿಕ ಆಚರಣೆ. ಮುಖವಾಡ ಧರಿಸಿ ಬಸವಾದಿ ಶರಣರ ಹಿಂದೂ ಸಮಾವೇಶ ಮಾಡುವವರ ಬಗ್ಗೆ ಎಚ್ಚರದಿಂದ ಇರುವ ಅಗತ್ಯವಿದೆ' ಎಂದರು.


ಉದಯವಾಹಿನಿ ಚಿತ್ರ

**ಒಡೆದು ಹಾಕಲು ಧರ್ಮವೇನು ಮಡಿಕೆಯಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಂತಹ ಕಾರ್ಯಕ್ಕೆ ಎಂದಿಗೂ ಕೈಹಾಕಿಲ್ಲ. ಬಸವಣ್ಣನವರ ಮೇಲೆ ಅವರಿಗೆ ಅಪಾರ ಅಭಿಮಾನವಿದೆ. -ಮಾತೆ ಗಂಗಾದೇವಿ, ಪೀಠಾಧ್ಯಕ್ಷೆ, ಬಸವಧರ್ಮ ಪೀಠ, ಕೂಡಲಸಂಗಮ**

'ಬಸವ ಸಂಸ್ಕೃತಿ ಅಭಿಯಾನ ಯಶಸ್ವಿಯಾಗಿದೆ. ಬಸವ ಭಕ್ತರಲ್ಲಿ ಜಾಗೃತಿ ಮೂಡಿಸಿದೆ. ಇದನ್ನು ಸಹಿಸದ ಕೆಲ ಶಕ್ತಿಗಳು ಅಪಪ್ರಚಾರ, ನಕಾರಾತ್ಮಕ ಭಾವನೆಗಳನ್ನು ಬಿತ್ತುತ್ತಿವೆ. ಇದಕ್ಕೆ ಬಸವ ಭಕ್ತರು ಕಿವಿಗೊಡುವ ಅಗತ್ಯವಿಲ್ಲ. ನ.11ರಂದು ಕೂಡಲಸಂಗಮದಲ್ಲಿ ಚಿಂತನ-ಮಂಥನ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಪ್ರತ್ಯೇಕ ಧರ್ಮದ ಹೋರಾಟದ ರೂಪುರೇಷಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಯಲಿದೆ' ಎಂದರು.

ಶಾಸಕ ಬಸವಗೌಡ ಪಾಟೀಲ ಯತ್ನಾಳ ಹಾಗೂ ಚಕ್ರವರ್ತಿ ಸೂಲಿಬೇಲಿ ಅವರಿಗೆ ಲಿಂಗಾಯತರ ಹೋರಾಟ ಸಹಿಸಿಕೊಳ್ಳಲು ಆಗುತ್ತಿಲ್ಲ. ವಚನ ಸಾಹಿತ್ಯದ ಬಗ್ಗೆ ಅರಿಯದ ಅವರು ಪ್ರತ್ಯೇಕ ಧರ್ಮದ ಹೋರಾಟ ವಿರೋಧ ಮಾಡುತ್ತಿರುವುದು ಖಂಡನೀಯ' ಎಂದು ರಾಷ್ಟ್ರೀಯ ಬಸವದಳದ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ ಆಕ್ರೋಶ ವ್ಯಕ್ತಪಡಿಸಿದರು.

**ಜ.12ರಿಂದ ಶರಣ ಮೇಳ**

**ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟಕ್ಕೆ ಸಂಬಂಧಿಸಿದಂತೆ ಜ.12ರಿಂದ 14ರವರೆಗೆ ಕೂಡಲಸಂಗಮದಲ್ಲಿ ಶರಣ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾತೆ ಗಂಗಾದೇವಿ ತಿಳಿಸಿದರು. 'ವರ್ಷಕ್ಕೊಮ್ಮೆ ನಡೆಯುವ ಶರಣ ಮೇಳಕ್ಕೆ ರಾಜ್ಯದ ವಿವಿಧೆಡೆಯಿಂದ ಬಸವ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆ ಇದೆ. 108 ವಚನಗಳ ಪಾರಾಯಣ, ಪ್ರಾರ್ಥನೆ ಹಾಗೂ ಪೀಠಾರೋಹಣ ಕಾರ್ಯಗಳು ಜರುಗಲಿವೆ' ಎಂದು ಮಾಹಿತಿ ನೀಡಿದರು.**

ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ದೆಹಲಿಯಲ್ಲಿ ರ್‍ಯಾಲಿ ನಡೆಸಬೇಕು. ಲಿಂಗಾಯತರಿಗೆ ಧಾರ್ಮಿಕ ಅಲ್ಪಸಂಖ್ಯಾತರು ಎಂಬ ಮಾನ್ಯತೆ ಸಿಗಬೇಕು. ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲಿ ಕೂಡ ವಚನ ಸಾಹಿತ್ಯ ಪ್ರಚುರಪಡಿಸಬೇಕು. ಲಿಂಗಾಯತ ಪ್ರತ್ಯೇಕ ಧರ್ಮದ ಮಾನ್ಯತೆಗೆ ಶಿಫಾರಸು ಮಾಡಿದ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿ ಮರುಪರಿಶೀಲಿಸಬೇಕು ಎಂದು ಸಮ್ಮೇಳನ ಒತ್ತಾಯಿಸಿತು.

## ದಿ.ವೈಜನಾಥ ಪಾಟೀಲರ 06ನೇ ಪುಣ್ಯಸ್ಮರಣೆ


ಉದಯವಾಹಿನಿ ಚಿತ್ರ
ಸಮಾಧಿಗೆ ವಿಶೇಷ ಪೂಜೆ

• ಉದಯವಾಹಿನಿ, ಚಿಂಚೋಳಿ

ಕಲ್ಯಾಣ ಕರ್ನಾಟಕ 371ಜೆ ಕಲಂ ವಿಶೇಷ ಸ್ಥಾನಮಾನಕ್ಕಾಗಿ ಹೋರಾಟ ಮಾಡಿದ ಮಾಜಿ ಸಚಿವರು ದಿ.ವೈಜನಾಥ ಪಾಟೀಲರ 6ನೇ ಪುಣ್ಯಸ್ಮರಣೆಯು ಕೇತಕಿ ಸಂಗಮೇಶ್ವರ ಮಲ್ಟಿಸ್ಪೇಷಾಲೀಟಿ ಆಸ್ಪತ್ರೆಯ ಆವರಣದಲ್ಲಿರುವ ಅವರ ಸಮಾಧಿಗೆ ಕುಟುಂಬಸ್ಥರು ಸೇರಿದಂತೆ ಅಭಿಮಾನಿ ಬಳಗದವರು ವಿಶೇಷ ಪೂಜೆ ಸಲ್ಲಿಸಿ ಪುಷ್ಪನಮನ ಸಲ್ಲಿಸಿದರು. ಮಾಜಿ ಸಚಿವರು ದಿ.ವೈಜನಾಥ ಪಾಟೀಲ ಸುಪುತ್ರರಾದ ಜಿಪಂ.ಮಾಜಿ ಸದಸ್ಯ ಗೌತಮ್ ಪಾಟೀಲ,ಡಾ.ಬಸವೇಶ ಪಾಟೀಲ,ಸುಪುತ್ರಿಯರಾದ ಆರತಿ, ಭಾರತಿ, ಹಾಗೂ ಗಜೇಂದ್ರ ಪಾಟೀಲ, ಗೋಪಾಲರಾವ ಕಟ್ಟಿಮನಿ,ಕೆಎಂಬಾರಿ,ಅಬ್ದುಲ್ ಬಾಷೀದ್, ಅಶೋಕ ಪಾಟೀಲ, ಜಗನ್ನಾಥ ಗುತ್ತೇದಾರ, ಭವಾನಿ ಫತ್ತೇಪೂರ, ಗೋಪಾಲರೆಡ್ಡಿ ಕೊಳ್ಳೂರ, ಸಂತೋಷ ಗಡಂತಿ, ಶ್ರೀಹರಿ ಕಾಟಾಪೂರ, ಕಿರಣಪಾಟೀಲ ಬೀದರ, ಸೋಮಶೇಖರ ಪಾಟೀಲ ಬೀದರ, ಶಾಂತವೀರ ಹೀರಾಪೂರ, ಶ್ರೀಮಂತ ಕಟ್ಟಿಮನಿ, ನರಸಪ್ಪಾ, ಕಾಶಿನಾಥ ನಾಟೀಕಾರ, ಮಧುಸೂದನ್ ರೆಡ್ಡಿ ಕಲ್ಲೂರ,ಭೀಮಶೆಟ್ಟಿ ಮುರುಡಾ, ಕುಪೇಂದ್ರರಾವ ಫತ್ತೇಪೂರ, ಚಿತ್ರಶೇಖರ ಪಾಟೀಲ, ಶ್ರೀನಂದರೆಡ್ಡಿ ಜೀಲವರ್ಷ, ಸಂತೋಷ ಗುತ್ತೇದಾರ, ಸೈಯದ್ ಖಲೀಲ್ ಪಟೇಲ, ಮಧುಕರ ಮಡಿವಾಳ, ಸೇರಿದಂತೆ ಅನೇಕರಿದ್ದರು.

## ನಿತ್ಯ ಬಳಕೆಯಿಂದ ಕನ್ನಡ ಭಾಷೆ ಉಳಿವು: ನಯನಾ ಮೋಟಮ್ಮ

• ಉದಯವಾಹಿನಿ ಮೂಡಿಗೆರೆ

ನಿತ್ಯ ಕನ್ನಡ ಭಾಷೆ ಬಳಸುವ ಜತೆಗೆ ಭಾಷೆಯ ಬಗ್ಗೆ ಅಭಿಮಾನ ಮೂಡಿಸಿಕೊಂಡಾಗ ಮಾತ್ರ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಸಾಧ್ಯ ಎಂದು ಶಾಸಕಿ ನಯನಾ ಮೋಟಮ್ಮ ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿಯಿಂದ ಶನಿವಾರ ಪಟ್ಟಣದ ಹೊಯ್ಸಳ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು. ನಮ್ಮ ಹಿರಿಯರು ಸರಳ ಹಾಗೂ ಪ್ರೀತಿಯಿಂದ ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಇದೇ ಮಾದರಿ ಅನುಸರಿಸಿ ಯುವ ಪೀಳಿಗೆಗೆ ಜಾಗೃತಿ ಮೂಡಿಸುವ ಕೆಲಸ ಆಗಬೇಕಿದೆ. ಅಲ್ಲದೇ ಯುವ ಜನತೆ ಇಂದಿನ ತಂತ್ರಜ್ಞಾನ ಯುಗಕ್ಕೆ ಮಾರುಹೋಗಿದ್ದಾರೆ. ಹಾಗಾಗಿ ವಾಟ್ಸ್‌ಆಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ಗಳಲ್ಲಿ ಕನ್ನಡ ಭಾಷೆ, ನಾಡು, ನೆಲದ ಬಗ್ಗೆ ಜಾಗೃತಿ ಮೂಡಿಸುವಂತಹ ವಿಷಯವನ್ನು ಹೆಚ್ಚಾಗಿ ಅಳವಡಿಸುವ ಅವಶ್ಯಕತೆ ಇದೆ' ಎಂದು ಹೇಳಿದರು. ಪಟ್ಟಣದಲ್ಲಿ ಪ್ರತಿದಿನ ಕಸ ಸಂಗ್ರಹಿಸುವ ವಾಹನ ಮನೆ ಬಾಗಿಲಿಗೆ ಬಂದರೂ ಜನರು ತಮ್ಮ ಜವಾಬ್ದಾರಿ ಮರೆತು. ರಸ್ತೆ ಬದಿಯಲ್ಲಿ ಕಸ ಹಾಕುವ ಮೂಲಕ ಪಟ್ಟಣದ ಸ್ವಚ್ಛತೆ ಹಾಳು ಮಾಡುತ್ತಿದ್ದಾರೆ. ಜನರೇ ಈಡೇರಿಸಿಕೊಳ್ಳುವಂತಹ ಸಣ್ಣಪುಟ್ಟ ಸಮಸ್ಯೆಗಳನ್ನು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಮಾಡಬೇಕೆಂದು ತಮ್ಮ ಜವಾಬ್ದಾರಿ ಮರೆಯುತ್ತಿರುವುದು ಕಳವಳಕಾರಿಯಾಗಿದೆ. ಇಂತಹ ಸ್ಥಿತಿಯಲ್ಲಿ ಪಟ್ಟಣವನ್ನು ಪುರಸಭೆ ಮಾಡುವ ಮೂಲಹ ಸ್ಮಾರ್ಟ್ ಸಿಟಿಗೊಳಿಸಲು ಚಿಂತನೆ ನಡೆಸಲಾಗಿದೆ. ಆದರೆ ಜನರು ಮೊದಲು ಸ್ಮಾರ್ಟ್ ಆಗಬೇಕಿದೆ' ಎಂದು ಹೇಳಿದರು.

ತಹಶೀಲ್ದಾರ್ ಎಸ್.ಅಶ್ವಿನಿ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು. ಮಾಜಿ ಸಚಿವೆ ಮೋಟಮ್ಮ, ಪ.ಪಂ.ಅಧ್ಯಕ್ಷ ಕೆ.ವೆಂಕಟೇಶ್, ಉಪಾಧ್ಯಕ್ಷ ರಮೇಶ್ ಹೊಸ್ಕೆರೆ, ಸದಸ್ಯರಾದ ಹಂಜಾ, ಮನೋಜ್, ಕಸಾಪ ಅಧ್ಯಕ್ಷ ಡಿ.ಕೆ.ಲಕ್ಷ್ಮಣಗೌಡ, ಸಿಪಿಐ ಕೆ.ವಿ. ರಾಜಶೇಖರ್, ಬಿಇಒ ಎನ್.ಎ. ಮೀನಾಕ್ಷಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಂಘ ಸಂಸ್ಥೆ ಮುಖಂಡರು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

**ಇ-ಸ್ವತ್ತು ದಾಖಲೆ ವಿತರಣೆ**

**ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು. ಲೋಕವಳ್ಳಿ ಬಡಾವಣೆ ಜನರಿಗೆ ಇ-ಸ್ವತ್ತು ದಾಖಲೆ ವಿತರಣೆ ಮಾಡಲಾಯಿತು. ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಹಾಗೂ ಬೆಥನಿ ಶಾಲೆಯ ವಿದ್ಯಾರ್ಥಿಗಳು ಆಕರ್ಷಕ ನೃತ್ಯ ಪ್ರದರ್ಶಿಸಿದರು.**

## ಸ್ವಚ್ಛ ಪ್ರಗತಿಯಲ್ಲಿ ಮುಂದಿರುವ ಉಡುಪಿ ಜಿಲ್ಲೆ: ಲಕ್ಷ್ಮಿ ಹೆಬ್ಬಾಳ್ಕರ್


• ಉದಯವಾಹಿನಿ, ಪಡುಬಿದ್ರಿ

ಉಡುಪಿ ರಾಜ್ಯದಲ್ಲಿಯೇ ಅತ್ಯಂತ ಸ್ವಚ್ಛ ಹಾಗೂ ಪ್ರಗತಿಯಲ್ಲೂ ಅತೀ ವೇಗವಾಗಿ ಬೆಳೆಯುತ್ತಿರುವ ಜಿಲ್ಲೆಯಾಗಿದೆ. ಎಲ್ಲಡೆ ಇರುವಂತೆ ಉಡುಪಿ ಜಿಲ್ಲೆಯಲ್ಲೂ ತ್ಯಾಜ್ಯ ಸಮಸ್ಯೆಗಳಿವೆ. ಇದರ ವಿಲೇವಾರಿಗೆ ವಿನೂತನ ಯೋಜನೆ ಅನುಷ್ಠಾನಿಸಿರುವುದು ಹೆಮ್ಮೆಯಾಗಿದೆ. ಇಂತಹ ಘಟಕ ರಾಜ್ಯದ ಎಲ್ಲಾ ಕಡೆಗಳಲ್ಲೂ ಅನುಷ್ಠಾನಗೊಳ್ಳಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ವಿವಿಧ ಸಂಜೀವಿನಿ ಒಕ್ಕೂಟಗಳ ಸಹಕಾರದಲ್ಲಿ ಎಲ್ಲೂರಿನಲ್ಲಿನ ಕಾಪು ಪುರಸಭಾ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಆರಂಭಿಸಲಾದ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ಸಮಗ್ರ ಘನತ್ಯಾಜ್ಯ ನಿರ್ವಹಣಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳು ಸ್ವಚ್ಛ ಗ್ರಾಮ ಪರಿಕಲ್ಪನೆಯಡಿ, ಸಂಜೀವಿನಿ ಒಕ್ಕೂಟಗಳ ಮಹಿಳಾ ಸದಸ್ಯರೇ ನಿರ್ವಹಿಸಲಿರುವ ರೂ.1.30 ಕೋಟಿ ವೆಚ್ಚದ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಚಾಲನೆ ನೀಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಮಹಿಳೆಯರ ಸಬಲೀಕರಣಕ್ಕೆ ತ್ಯಾಜ್ಯ ವಿಲೇವರಿ ಘಟಕವನ್ನು ನಿರ್ವಹಣೆ ಮಾಡುತ್ತಿರುವುದು ದೇಶದಲ್ಲಿಯೇ ಮೊದಲು. ಇದು ನಮಗೆಲ್ಲಾ ಆದರ್ಶ. ಮುಂದಿನ ದಿನಗಳಲ್ಲಿ ಉಡುಪಿ ಜಿಲ್ಲೆಯ ಇತರೆಡೆಗಳಿಗೂ ಇದನ್ನು ವಿಸ್ತರಿಸಲಾಗುವುದು ಎಂದರು.



**ಸಿಇಒ ಕಾರ್ಯಕ್ಕೆ ಮೆಚ್ಚುಗೆ**

**ಕಸ ವಿಲೇವಾರಿ ಮಾಡುವುದು ರಾಜ್ಯದಲ್ಲಿಯೇ ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಉಡುಪಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಅವರ ಪ್ರಯತ್ನ ಮೆಚ್ಚಲೇಬೇಕು. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೂ ಉಡುಪಿ ಜಿಲ್ಲೆಗೆ ಭೇಟಿ ನೀಡಿ ಇಲ್ಲಿನ ಕಾರ್ಯವೈಖರಿಯ ಬಗ್ಗೆ ತಿಳಿದುಕೊಳ್ಳಬೇಕಾಗಿದೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.**

## ಪೊಲೀಸರ ಕಿರುಕುಳ ಆರೋಪ: ಠಾಣೆಗೆ ಮುತ್ತಿಗೆ

• ಉದಯವಾಹಿನಿ, ಸಂತೇಬೆನ್ನೂರು

ಸಮೀಪದ ಚಿಕ್ಕಬೆನ್ನೂರು ಗ್ರಾಮದ ಯುವಕನೊಬ್ಬ ಆತ್ಮಹತ್ಯೆಗೆ ಯತ್ನಿಸಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಆದರೆ, ಪೊಲೀಸರ ಕಿರುಕುಳ ನೀಡಿದ್ದೇ ಯುವಕ ಆತ್ಮಹತ್ಯೆಗೆ ಯತ್ನಿಸಲು ಕಾರಣ ಎಂದು ಆರೋಪಿಸಿ ಯುವಕನ ಸಂಬಂಧಿಗಳು ಮತ್ತು ಸಮುದಾಯದ ಮುಖಂಡರು ಸಂತೇಬೆನ್ನೂರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ದರೋಡೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ವಿಚಾರಣೆಗೆಂದು ಗ್ರಾಮದ ಯುವಕ ಕಿರಣ್ (25) ಎಂಬವನನ್ನು ಕರೆದೊಯ್ದು ವಿಚಾರಣೆ ನಡೆಸಿದ್ದ ಪೊಲೀಸರು, ಮೂರು ದಿನಗಳ ನಂತರ ಮತ್ತೆ ವಿಚಾರಣೆಗೆ ಬರಬೇಕೆಂದು ಸೂಚಿಸಿದ್ದರು. ಆದರೆ, ವಿನಾಕಾರಣ ಕಿರುಕುಳ ನೀಡಿದ್ದರಿಂದ ಶುಕ್ರವಾರ ಸಂಜೆ ಯುವಕ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎಂದು ಕುಟುಂಬ ಸದಸ್ಯರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದರು.

ಪೊಲೀಸ್ ಠಾಣೆಯಿಂದ ಮನೆಗೆ ಮರಳಿದ ಯುವಕ ಆತ್ಮಹತ್ಯೆಗೆ ಯತ್ನಿಸಿ ಅಸ್ವಸ್ಥನಾಗಿದ್ದರಿಂದ ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ಯುವಕನನ್ನು ವಿಚಾರಣೆಗೆ ಒಳಪಡಿಸಿ, ಮನೆಗೆ ಕಳುಹಿಸಲಾಗಿತ್ತು. ತಂದೆ, ತಾಯಿ, ಪತ್ನಿ ಪೊಲೀಸರು ಕಿರುಕುಳ ನೀಡಿದ್ದಾರೆ ಎಂದು ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಎಸ್‌ಪಿ ಸ್ಯಾಮ್ ವರ್ಗೀಸ್ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

ನ. 27ರಂದು ಕಿರಣ್‌ನನ್ನು ಪೊಲೀಸರು ವಿಚಾರಣೆಗೆ ಚನ್ನಗಿರಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ರಾತ್ರಿಯಿಡೀ ವಿಚಾರಿಸಿ ಹೊಡೆದಿದ್ದಾರೆ. ಮಾರನೇ ದಿನವೂ ಮತ್ತೆ ಕರೆಯಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಪ್ರಕರಣದೊಂದಿಗೆ ತನಗೆ ಯಾವುದೇ ಸಂಬಂಧವಿಲ್ಲ ಎಂದರೂ ಬಿಡದೆ ಕಿರುಕುಳ ನೀಡಲಾಗಿದೆ. ನ.29ರಂದೂ ಹಿಂಸೆ ನೀಡಲಾಗಿದೆ. ಇದರಿಂದ ಪತಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ' ಎಂದು ಪತ್ನಿ ಸಿಂಧು ದೂರು ನೀಡಿದ್ದಾರೆ. ಕೊರಚ ಸಮಾಜದ ಕಾರ್ಯಾಧ್ಯಕ್ಷ ಸಿದ್ದೇಶ್ ಮಾದಾಪುರ, ಜಿಲ್ಲಾ ಘಟಕದ ಅಧ್ಯಕ್ಷ ಪರಶುರಾಮ್, ಸಂತೋಷ್, ಕೆಂಚಪ್ಪ, ಕೆ.ಬಿ. ದೇವೇಂದ್ರಪ್ಪ, ಪ್ರಕಾಶ್ ನಿಗಾಡಿ, ಚಂದ್ರಪ್ಪ, ಪೊಲೀಸ್ ಠಾಣೆ ಎದುರು ಇದ್ದರು.

## ಮಿನಿ ನ್ಯೂಸ್

### ಸರ್ಕಾರಿ ಶಾಲೆ ಮುಚ್ಚಿದರೆ ಕನ್ನಡಕ್ಕೆ ಆಪತ್ತು

• ಉದಯವಾಹಿನಿ ಸಕಲೇಶಪುರ

ಕನ್ನಡ ಕಲಿಕೆ ಉಳಿಕೆ ಸರ್ಕಾರಿ ಶಾಲೆಗಳಲ್ಲಿ ಮಾತ್ರವೇ ಇಂದು ಕಾಣುತ್ತಿದೆ. ಸರ್ಕಾರಿ ಶಾಲೆಗಳನ್ನು ಹಂತ ಹಂತವಾಗಿ ಮುಚ್ಚುತ್ತಾ ಹೋದರೆ ಕನ್ನಡದ ಉಳಿವು ಹೇಗೆ ಎಂಬ ಆತಂಕ ಉಂಟಾಗಿದೆ' ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು. ಇಲ್ಲಿಯ ಸುಭಾಷ್ ಮೈದಾನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. '25 ವರ್ಷಗಳ ಹಿಂದೆ ಇಡೀ ರಾಜ್ಯದಲ್ಲಿ ಶೇ.90ಕ್ಕಿಂತ ಹೆಚ್ಚು ಮಂದಿ ಕನ್ನಡ ಮಾತನಾಡುತ್ತಿದ್ದರು. ಆದರೆ ಇಂದು ಕನ್ನಡ ಭಾಷೆಯ ಮೇಲೆ ಇಂದಿನ ಮಕ್ಕಳಿಗೆ ಅಭಿಮಾನ ಹಾಗೂ ಪ್ರೀತಿ ಕಡಿಮೆ ಆಗುತ್ತಿದೆ' ಎಂದರು. ಉಪವಿಭಾಗಾಧಿಕಾರಿ ಎಚ್.ಡಿ. ರಾಜೇಶ್ ಮಾತನಾಡಿ, 'ಕನ್ನಡ ಭಾಷೆಗೆ ಐತಿಹಾಸಿಕ ಹಾಗೂ ಸಾಹಿತ್ಯದ ಶ್ರೀಮಂತಿಕೆ ಇದೆ. ಇಂತಹ ಭಾಷೆಯನ್ನು ಸಂರಕ್ಷಣೆ ಮಾಡುವ ಹೊಣೆ ಪ್ರತಿಯೊಬ್ಬ ಕನ್ನಡಿಗರಿಗೆ ಇದೆ' ಎಂದರು.

### ಕನ್ನಡದಲ್ಲಿ ನಾಮಫಲಕ ಅಳವಡಿಸದಿದ್ದರೆ ದಂಡ: ಶಾಸಕ ಸಿ.ಎನ್. ಬಾಲಕೃಷ್ಣ

• ಉದಯವಾಹಿನಿ ಚನ್ನರಾಯಪಟ್ಟಣ

ವಾಣಿಜ್ಯ ಮಳಿಗೆಗಳಲ್ಲಿ ಕನ್ನಡದಲ್ಲಿ ನಾಮಫಲಕ ಅಳವಡಿಸದಿದ್ದರೆ ಅಂಥ ಮಳಿಗೆಗೆ 10 ಸಾವಿರ ದಂಡ ವಿಧಿಸಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು. ತಾಲ್ಲೂಕು ಆಡಳಿತದ ವತಿಯಿಂದ ಇಲ್ಲಿನ ಮಾಧ್ಯಮಿಕ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕನ್ನಡ ನಾಡು, ನುಡಿಗೆ ನಾವು ಆದ್ಯತೆ ನೀಡಬೇಕು. ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಮಹತ್ವ ನೀಡಬೇಕು' ಎಂದರು. 'ಕನ್ನಡ ಪ್ರಾಚೀನ ಭಾಷೆ. ತನ್ನದೇ ಇತಿಹಾಸ ಹೊಂದಿದೆ. ಶಾಲೆಗಳಲ್ಲಿ ಕನ್ನಡಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳಬೇಕು. ವ್ಯಾಕರಣಬದ್ಧ ಕನ್ನಡ ಕಲಿಸಲು ಶಿಕ್ಷಕರು ಒತ್ತು ನೀಡಬೇಕು' ಎಂದು ತಿಳಿಸಿದರು. ಧ್ವಜಾರೋಹಣ ನೆರವೇರಿಸಿದ ತಹಶೀಲ್ದಾರ್ ಜಿ.ಎಸ್. ಶಂಕರಪ್ಪ ಮಾತನಾಡಿ, ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂಬುದನ್ನು ಮರೆಯಬಾರದು ಎಂದು ಹೇಳಿದರು. ವಿವಿಧ ಕ್ಷೇತ್ರದ ಸಾಧಕರು ಮತ್ತು ಎಸ್ ಎಸ್ ಎಲ್‌ಸಿಯಲ್ಲಿ 125 ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

### ಮುಳುಗಡೆಯಾಗುವ ಹಳ್ಳಿ ಆಸ್ತಿಗೂ ಮೌಲ್ಯ ಪುನರ್‌ವಸತಿ ಸಂತ್ರಸ್ತರಿಗೇ ಆಯ್ಕೆ ಅವಕಾಶ

• ಉದಯವಾಹಿನಿ ಬಾಗಲಕೋಟೆ

ಮುಳುಗಡೆಯಾಗುವ ಹಳ್ಳಿಗಳಿಗೆ ಪುನರ್ ವಸತಿ ಕೇಂದ್ರದ ನಿರ್ಮಾಣದ ಬದಲು. ಆಸ್ತಿ ಮೌಲ್ಯ ನೀಡುವ ಬಗ್ಗೆ ಚರ್ಚೆ ನಡೆದಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪುನರ್‌ವಸತಿ ಪರ್ಯಾಯ ನೀತಿ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಈ ಹಿಂದೆ ಪುನರ್ ವಸತಿ ಕೇಂದ್ರಗಳನ್ನು ನಿರ್ಮಾಣ ಮಾಡಿ ಎರಡು ದಶಕಗಳು ಕಳೆದರೂ ಶೇ 30ರಷ್ಟು ಜನರೂ ಸ್ಥಳಾಂತರವಾಗಿಲ್ಲ. ಮುಳುಗಡೆಯಾಗುವ ಆಸ್ತಿಗೆ ದರ ನಿಗದಿ ಮಾಡಿ, ಆ ಮೌಲ್ಯ ಪಾವತಿಸುವುದು. ಅವರಿಗೆ ಬೇಕಾದಲ್ಲಿ ಮನೆ ನಿರ್ಮಿಸಿಕೊಳ್ಳಬಹುದಾಗಿದೆ' ಎಂದರು.



'ಕಬ್ಬಿನ ಬೆಲೆ ನಿಗದಿಗೆ ಸಂಬಂಧಿಸದಂತೆ ನಾನೂ ಸೇರಿದಂತೆ ಅಧಿಕಾರಿಗಳು ರೈತರು ಹಾಗೂ ಕಾರ್ಖಾನೆಗಳವರೊಂದಿಗೆ ಸಭೆ ಮಾಡಿದ್ದೇವೆ. ರೈತರು ಹಾಗೂ ಸಕ್ಕರೆ ಕಾರ್ಖಾನೆಯವರು ಚರ್ಚಿಸಿ ಬೆಲೆಯ ಬಗೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕು. ರಾಜ್ಯ ಸರ್ಕಾರ ಎಫ್‌ಆರ್‌ಪಿ ದರ ಕೊಡಿಸಲಾಗುವುದು. ಹಿಂದಿನ ಬಿಲ್ ಪಾವತಿ ಮಾಡುವಂತೆ ಕಾರ್ಖಾನೆಗಳವರಿಗೆ ಸೂಚಿಸಲಾಗಿದೆ' ಎಂದು ಹೇಳಿದರು. ಬೆಳೆ ವಿಮಾ ಹಣವನ್ನು ಮಧ್ಯವರ್ತಿಗಳು ದುರ್ಬಳಕೆ ಮಾಡಿಕೊಳ್ಳುವ ಕೆಲಸ ಬಹಳ ದಿನಗಳಿಂದ ನಡೆದಿದೆ. ಈ ಕುರಿತು ತನಿಖೆ ಮಾಡಿ ವರದಿ ನೀಡುವಂತೆ ಉಪವಿಭಾಗಾಧಿಕಾರಿಗೆ ಸೂಚಿಸಲಾಗಿದೆ. ವರದಿ ಬಂದ ಮೇಲೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು. ಜಿಲ್ಲೆಯ ಕೆಲವು ಅಂಗಡಿಗಳಲ್ಲಿ ಕನ್ನಡದಲ್ಲಿ ಫಲಕ ಬರೆಸಿಲ್ಲ. ಅಧಿಕಾರಿಗಳು ಪರಿಶೀಲನೆ ಮಾಡಿ, ಕನ್ನಡದಲ್ಲಿ ಫಲಕ ಬರೆಸದವರ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ. ಮೊದಲಿನಿಂದಲೂ ಹೊಲಗಳಲ್ಲಿ ಅಂತ್ಯಕ್ರಿಯೆ ಮಾಡಲಾಗುತ್ತಿತ್ತು. ಈಗ ಅದಕ್ಕೆ ಹೊಲಗಳ ಮಾಲೀಕರು ಅವಕಾಶ ನೀಡದ್ದರಿಂದ ತೊಂದರೆಯುಂಟಾಗುತ್ತಿದೆ. ಸ್ಮಶಾನಕ್ಕೆ ಜಾಗ ಗುರುತಿಸುವ ಕೆಲಸ ನಡೆದಿದೆ' ಎಂದು ಹೇಳಿದರು. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅನಿಲಕುಮಾರ ದಡ್ಡಿ ಇದ್ದರು.

# ತಲಪಾಡಿ- ಸುರತ್ಕಲ್ ವರೆಗೆ ವರ್ತುಲ ರಸ್ತೆ: ಸಚಿವ

### ಜಾತಿ-ಮತಗಳ ಭೇದವನ್ನು ತೊರೆದು ಜಿಲ್ಲೆಯ ಸೌಹಾರ್ದ ಕಾಪಾಡಲು ಎಲ್ಲರೂ ಸಹಕರಿಸಬೇಕು

• ಉದಯವಾಹಿನಿ, ಮಂಗಳೂರು

ನಗರದಲ್ಲಿ ಹಾಗೂ ನಗರ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ಸಂಚಾರ ದಟ್ಟಣೆ ನಿಯಂತ್ರಿಸಲು ತಲಪಾಡಿಯಿಂದ ಸುರತ್ಕಲ್ ವರೆಗೆ ವರ್ತುಲ ರಸ್ತೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಜಿಲ್ಲಾಡಳಿತದ ವತಿಯಿಂದ ಇಲ್ಲಿನ ನೆಹರೂ ಮೈದಾನದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಜಾತಿ-ಮತಗಳ ಭೇದವನ್ನು ತೊರೆದು ಜಿಲ್ಲೆಯ ಸೌಹಾರ್ದ ಕಾಪಾಡಲು ಎಲ್ಲರೂ ಸಹಕರಿಸಬೇಕು' ಎಂದರು.

'ಕನ್ನಡ ಭಾಷೆ ಸಮೃದ್ಧವಾಗಿದೆ ಎಂದು ಕೈಕಟ್ಟಿ ಕುಳಿತುಕೊಳ್ಳದೇ, ಆಧುನಿಕ ಶಿಕ್ಷಣ ಕ್ರಮದಿಂದ ಕನ್ನಡ ಕಲಿಕೆಯ ಬಗ್ಗೆ ಯುವಜನಾಂಗದಲ್ಲಿ ಮತ್ತು ಮಕ್ಕಳಲ್ಲಿ ಇನ್ನಷ್ಟು ಪ್ರೀತಿ ಮತ್ತು ಕಾಳಜಿ ಮೂಡಿಸಬೇಕು' ಎಂದರು.

'ಗೃಹ ಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 5.51 ಲಕ್ಷ ಫಲಾನುಭವಿಗಳು ಇದುವರೆಗೆ ರೂ. 789 ಕೋಟಿಯನ್ನು ಪಾವತಿಸಲಾಗಿದೆ. ಶಕ್ತಿ ಯೋಜನೆಯಡಿ 11.01 ಕೋಟಿ ಮಹಿಳೆಯರು ಪ್ರಯೋಜನ ಪಡೆದುಕೊಂಡಿದ್ದು, ಒಟ್ಟು ಪ್ರಯಾಣ ವೆಚ್ಚವು ರೂ. 373.81 ಕೋಟಿ ಆಗಿದೆ ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 3.79 ಲಕ್ಷ ಮಹಿಳೆಯರಿಗೆ ಇದುವರೆಗೆ ಒಟ್ಟು ರೂ. 1377 ಕೋಟಿ ಸಹಾಯಧನ ಮಂಜೂರಾಗಿದೆ. ಅನ್ನಭಾಗ್ಯ ಯೋಜನೆ ಅಡಿ 11.76 ಲಕ್ಷ ಫಲಾನುಭವಿಗಳಿಗೆ 5 ಕೆ.ಜಿ.ಯಂತೆ ಉಚಿತ ಅಕ್ಕಿಯನ್ನು ಹೆಚ್ಚುವರಿ ನೀಡಲಾಗುತ್ತಿದೆ. ಯುವನಿಧಿ ಯೋಜನೆಯಡಿ 5,283 ಯುವಜನರಿಗೆ ರೂ.9.54 ಕೋಟಿ ಆರ್ಥಿಕ ನೆರವು ನೀಡಲಾಗಿದೆ' ಎಂದರು.


ಉದಯವಾಹಿನಿ ಚಿತ್ರ

**2,969 ಮನೆಗಳು ಪೂರ್ಣ**

'ಸೋಮೇಶ್ವರ, ಬಜಪೆ, ಕಿನ್ನಿಗೋಳಿ, ಮೂಲ್ಕಿ ಮತ್ತು ಮೂಡುಬಿದಿರೆ ಪಟ್ಟಣಗಳಿಗೆ ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿ ಹಾಗೂ ಬಂಟ್ವಾಳ ಮತ್ತು ಉಳ್ಳಾಲ ಪಟ್ಟಣದ ಒಳಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ನೇತ್ರಾವತಿ ಎಡದಂಡ ಸಂರಕ್ಷಿಸಲು ಉಳ್ಳಾಲ ತಾಲ್ಲೂಕಿನ ಪಾವೂರು - ಬೋಳಿಯಾರಿನವರೆಗೆ ರೂ.40 ಕೋಟಿಯ ಕಾಮಗಾರಿ ಪ್ರಗತಿಯಲ್ಲಿದೆ' ಎಂದು ತಿಳಿಸಿದರು. 'ಜಲಜೀವನ್ ಮಿಷನ್ ಅಡಿ 7 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಜಿಲ್ಲೆಯ 223 ಗ್ರಾಮ ಪಂಚಾಯಿತಿಗಳ ಒಣ ಕಸ ನಿರ್ವಹಣೆಗೆ ಎಂ.ಆರ್.ಎಫ್. ಘಟಕ ಸೌಲಭ್ಯ ಕಲ್ಪಿಸಿರುವ ರಾಜ್ಯದ ಮೊದಲ ಜಿಲ್ಲೆ ನಮ್ಮದು ಎಂದರು. 'ಬಡವರಿಗೆ ಉನ್ನತ ಹೃದ್ರೋಗ ಚಿಕಿತ್ಸೆ ಒದಗಿಸಲು ಜಿಲ್ಲಾ ವೆನ್ಲಾಕ್ ಆಸ್ಪತ್ರೆಯಲ್ಲಿ ನೂತನ ಕ್ಯಾಥ್ ಲ್ಯಾಬ್ ಆರಂಭಿಸಲಾಗಿದೆ. ರೂ.90 ಕೋಟಿ ವೆಚ್ಚದಲ್ಲಿ ಹೊಸ ಹೊರರೋಗಿ ವಿಭಾಗದ (ಒಪಿಡಿ) ಕಟ್ಟಡ ನಿರ್ಮಿಸಲಿದ್ದೇವೆ' ಎಂದು ತಿಳಿಸಿದರು.

ಜಿಲ್ಲೆಯ 18 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆ (ಕೆ.ಪಿ.ಎಸ್) ಗಳನ್ನಾಗಿ ಮೇಲ್ದರ್ಜೆಗೇರಿಸಲು ಮಂಜೂರಾತಿ ಸಿಕ್ಕಿದೆ. ಪಣಂಬೂರು ಮತ್ತು ತಣ್ಣೀರುಬಾವಿ ಕಡಲತೀರಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಖಾಸಗಿ ಸಹಭಾಗಿತ್ವದಲ್ಲಿ ಯೋಜನೆಗೆ ಆದೇಶ ನೀಡಲಾಗಿದೆ. ರಂಗಮಂದಿರ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. ಕೊಂಕಣಿ ಭವನದ ಕಾಮಗಾರಿಯನ್ನು ಪೂರ್ಣಗೊಳಿಸಲು ಹೆಚ್ಚುವರಿ ಅನುದಾನ ಒದಗಿಸಲಾಗಿದೆ. ಬ್ಯಾರಿ ಸಾಹಿತ್ಯ ಅಕಾಡೆಮಿಯ ಬ್ಯಾರಿ ಭವನವನ್ನು ಉಳ್ಳಾಲ ತಾಲ್ಲೂಕಿನ ಅಸೈಗೋಳಿಯಲ್ಲಿ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ' ಎಂದರು. 'ದೇರೆಬೈಲ್ ನಲ್ಲಿ 3.285 ಎಕರೆಯಲ್ಲಿ 'ಟೆಕ್ ಪಾರ್ಕ್' ಅನ್ನು ಖಾಸಗಿ ಸಹಭಾಗಿತ್ವದಡಿ ಅಭಿವೃದ್ಧಿಪಡಿಸಲು ಸರ್ಕಾರ ಅನುಮೋದನೆ ನೀಡಿದೆ ಎಂದರು.

**ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಹಂತ-4 ರಡಿ ಜಿಲ್ಲೆಯ 13 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 110 ಕೋಟಿ ಮಂಜೂರಾಗಿದ್ದು, 144 ಕಾಮಗಾರಿಗಳು ಪೂರ್ಣಗೊಂಡಿವೆ. ಜಿಲ್ಲೆಗೆ 19 ಕ್ಯಾಂಟೀನ್‌ಗಳು ಇದ್ದು, ಇನ್ನೂ 7 ಕ್ಯಾಂಟೀನ್ ಪ್ರಾರಂಭಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದರು. ಪಟ್ಟಣ ಪ್ರದೇಶಗಳಲ್ಲಿ ವಸತಿ ಒದಗಿಸಲು 3,541 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಈ ಪೈಕಿ 2,969 ಮನೆಗಳು ಪೂರ್ಣಗೊಂಡಿವೆ. ಪಾಲಿಕೆ ವ್ಯಾಪ್ತಿಯ ಇಡ್ಯಾದಲ್ಲಿ ನಾಲ್ಕು ಮಹಡಿಯ ಗುಂಪು ಮನೆ ಯೋಜನೆಯಲ್ಲಿ 792 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ -ದಿನೇಶ್ ಗುಂಡೂರಾವ್**

## ಕುದುರೆಮುಖ ರಾಷ್ಟ್ರೀಯ ಉದ್ಯಾನ- ಒತ್ತುವರಿ ತೆರವು

• ಉದಯವಾಹಿನಿ ಉಜಿರೆ

ಬೆಳ್ತಂಗಡಿ ತಾಲ್ಲೂಕಿನ ಮಲವಂತಿಗೆ ಗ್ರಾಮದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನದ ಜಮೀನು ಒತ್ತುವರಿಯನ್ನು ಇಲಾಖೆಯ ವನ್ಯಜೀವಿ ವಿಭಾಗದ ಅಧಿಕಾರಿಗಳು ತೆರವುಗೊಳಿಸಿದ್ದಾರೆ. ತೆಂಗು, ಅಡಿಕೆ ಹಾಗೂ ಬಾಳೆ ಕೃಷಿಯನ್ನು ತೆರವುಗೊಳಿಸಿ. ಅಲ್ಲಿ ಸ್ಥಳೀಯ ಪ್ರಭೇದದ ಸಸಿಗಳನ್ನು ನೆಟ್ಟು, ಅರಣ್ಯ ಇಲಾಖೆಯ ಫಲಕ ಅಳವಡಿಸಿದ್ದಾರೆ. 50 ವರ್ಷಗಳಿಂದ ನೆಲೆಸಿದ್ದ ಪಿ.ಟಿ. ಜೋಸೆಫ್ ಕುಟುಂಬ ಇದರಿಂದಾಗಿ ಬೀದಿಪಾಲಾಗಿದೆ.

ಅರಸಿನಮಕ್ಕಿ ಪಿ.ಟಿ ಜೋಸೆಫ್ ಕುಟುಂಬ 1970ರಿಂದ ಮಲವಂತಿಗೆಯಲ್ಲಿ ನೆಲೆಸಿದೆ. ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಅವರ ಕುಟುಂಬಕ್ಕೆ 1997ರಲ್ಲಿ 4.94 ಎಕರೆ ಜಮೀನು ಮಂಜೂರಾಗಿತ್ತು. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಘೋಷಣೆಯಾದ ಬಳಿಕ, 2004ರಲ್ಲಿ ಅವರ ಹಕ್ಕುಪತ್ರವನ್ನು ರದ್ದುಪಡಿಸಲಾಗಿತ್ತು. ಆ ಜಾಗವನ್ನು ತೆರವುಗೊಳಿಸುವಂತೆ ಅರಣ್ಯ ಇಲಾಖೆಯು 2014ರಲ್ಲಿ ಆ ಕುಟುಂಬಕ್ಕೆ ನೋಟಿಸ್ ಜಾರಿ ಮಾಡಿತ್ತು. ಅದರ ವಿರುದ್ಧ ಕುಟುಂಬದವರು ಮೇಲ್ಮನವಿ ಸಲ್ಲಿಸಿದ್ದು, ಅದು ತಿರಸ್ಕಾರಗೊಂಡಿತ್ತು. ಆ ಜಾಗವನ್ನು ಅ. 30ರ ಒಳಗೆ ತೆರವುಗೊಳಿಸುವಂತೆ ಅರಣ್ಯ ಇಲಾಖೆಯು ಅ.16 ರಂದು ಅಂತಿಮ ನೋಟೀಸ್ ಜಾರಿ ಮಾಡಿತ್ತು.

ಪೊಲೀಸ್ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ ಸ್ಥಳಕ್ಕೆ ತೆರಳಿದ್ದ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಬೆಳ್ತಂಗಡಿ ವಲಯ ಅರಣ್ಯಾಧಿಕಾರಿ ಶರ್ಮಿಷ್ಠಾ ವಿ. ನೇತೃತ್ವದ ತಂಡ ಒತ್ತುವರಿ ತೆರವು ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ. ಅವರ ಮನೆಯನ್ನು ನಾಶಪಡಿಸಲಾಗಿದೆ. ಸುಮಾರು 2 ಎಕರೆ ಜಾಗದಲ್ಲಿದ್ದ ಫಲಕೊಡುವ ಅಡಿಕೆ ಮರಗಳನ್ನು ತೆಂಗಿನ ಮರಗಳನ್ನು ಹಾಗೂ ಇತರ ಕೃಷಿಯನ್ನು ಪೂರ್ಣ ಕಡಿದುರುಳಿಸಲಾಗಿದೆ. 'ಮೂರು ವರ್ಷದವನಿದ್ದಾಗ ನಮ್ಮ ಕುಟುಂಬ ಇಲ್ಲಿಗೆ ಬಂದು ನೆಲೆಸಿದೆ. ತಂದೆಯ ಹೆಸರಿನಲ್ಲಿ ಹಕ್ಕುಪತ್ರವೂ ಮಂಜೂರಾಗಿತ್ತು. ಈ ಕೃಷಿ ಭೂಮಿಯನ್ನೇ ನಂಬಿ ಬದುಕನ್ನು ನಡೆಸುತ್ತಿದ್ದೆವು. ನಮ್ಮ ಕುಟುಂಬ ಏಕಾಏಕಿ ಬೀದಿಗೆ ಬಿದ್ದಿದೆ. ಪತ್ನಿ ಮಕ್ಕಳೊಂದಿಗೆ ಎಲ್ಲಿಗೆ ಹೋಗಬೇಕು ಎಂದೇ ತಿಳಿದಿಲ್ಲ.

ನಮಗೆ ಬೇರೆ ಮನೆಯಾಗಲಿ ಜಮೀನಾಗಲಿ ಇಲ್ಲ' ಎಂದು ಜೋಸೆಫ್ ಅಳಲು ತೋಡಿಕೊಂಡಿದ್ದಾರೆ. ಮಲವಂತಿಗೆ ಗ್ರಾಮದಲ್ಲಿ ಪಿ.ಟಿ.ಜೋಸೆಫ್ ಕುಟುಂಬವನ್ನು ಒಕ್ಕಲೆಬ್ಬಿಸಿದ ಬಳಿಕ ಅಲ್ಲಿ ಅರಣ್ಯ ಇಲಾಖೆಯ ಫಲಕ ಅಳವಡಿಸಲಾಗಿದೆ.


ಉದಯವಾಹಿನಿ ಚಿತ್ರ

**ಪರಿಹಾರ ನೀಡದೇ ತೆರವು ಖಂಡನೀಯ**

**'ಕುದುರೆಮುಖ ರಾಷ್ಟ್ರೀಯ ಉದ್ಯಾನ ವನದೊಳಗಿಂದ ಯಾರನ್ನೂ ಬಲವಂತವಾಗಿ ಒಕ್ಕಲೆಬ್ಬಿಸುವುದಿಲ್ಲ ಎಂದು ಹೇಳುತ್ತಾ ಬಂದಿದ್ದ ರಾಜ್ಯ ಸರ್ಕಾರ ಈಗ ಬಲವಂತದ ಒಕ್ಕಲೆಬ್ಬಿಸುವಿಕೆಯ ಕಾರ್ಯಕ್ಕೆ ಮುಂದಾಗಿದೆ. ಅರಣ್ಯ ನಿವಾಸಿಗಳನ್ನು ಒಕ್ಕಲೆಬ್ಬಿಸಲು ಮುಂದಾದಾಗಲೇ ಮಲೆನಾಡಿನಲ್ಲಿ ನಕ್ಸಲ್ ಸಮಸ್ಯೆ ಆರಂಭವಾಗಿತ್ತು. ಇದೀಗ ನಕ್ಸಲರ ಶರಣಾಗತಿ ಬಳಿಕ ಅರಣ್ಯ ನಿವಾಸಿಗಳನ್ನು ಒಕ್ಕಲೆಬ್ಬಿಸಲು ಮತ್ತೆ ಮುಂದಾಗಿರುವುದು ಖಂಡನೀಯ. ಜೋಸೆಫ್ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕು' ಎಂದು ಸಾಮಾಜಿಕ ಹೋರಾಟಗಾರ ಶೇಖರ ಲಾಯಿಲ ಒತ್ತಾಯಿಸಿದ್ದಾರೆ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹದಾರ್ಢ್ಯತೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ.

**ವೃಷಭ** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹದಾರ್ಢ್ಯತೆ ಕಾಯ್ದುಕೊಳ್ಳಲು ಮಾನಸಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ.

**ಮಿಥುನ** ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ನಿಮ್ಮ ಜ್ಞಾನ ಮತ್ತು ಒಳ್ಳೆಯ ಹಾಸ್ಯ ನಿಮ್ಮ ಬಳಿಯಿರುವ ಜನರನ್ನು ಆಕರ್ಷಿಸಬಹುದು. ಇಂದಿನ ದಿನ ಪ್ರೀತಿಯ ಬಣ್ಣಗಳಲ್ಲಿ ಮುಳುಗಿರುತ್ತದೆ.

**ಕರ್ಕಾಟಕ** ನೀವು ದೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ.

**ಸಿಂಹ** ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು.

**ಕನ್ಯಾ** ಆತಂಕ, ಉದ್ವೇಗದ ಪ್ರತೀ ತುಣುಕೂ ದೇಹದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ ಇದನ್ನು ತಡೆಯಿರಿ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಹೊಂದಿರಬಹುದು.

**ತುಲಾ** ನಿಮ್ಮ ಮನಸ್ಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗೆ ಪ್ರಯೋಜನಕಾರಿ ಎಂದು ಸಾಬೀತಾಗುತ್ತದೆ.

**ವೃಶ್ಚಿಕ** ನೀವು ಹಂಚಿಕೊಂಡ ಉತ್ತಮ ಸಮಯವನ್ನು ನೆನಪಿಸಲು ನಿಮ್ಮ ಸ್ನೇಹವನ್ನು ನೆನಪು ಮಾಡಿಕೊಳ್ಳುವ ಸಮಯ. ಕಚೇರಿಯಲ್ಲಿ ಇಂದು ನೀವು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ವರ್ತಿಸಬೇಕು.

**ಧನಸ್ಸು** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ನಿಮ್ಮ ಹಣವನ್ನು ಉಳಿಸಲು ನೀವು ಇಂದು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು.

**ಮಕರ** ನಿಮ್ಮ ಹರಮಾರಿ ಧೋರಣೆ ಕೇವಲ ಸಮಯ ವ್ಯರ್ಥವಾದದ್ದರಿಂದ ಅದನ್ನು ನಿಮ್ಮ ಸಂತೋಷದ ಜೀವನದ ಸಲುವಾಗಿ ತೊರೆದುಬಿಡಿ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ.

**ಕುಂಭ** ನಿಮ್ಮ ಭಾವನೆಗಳನ್ನು ನಿಯಂತ್ರಿಸಲು ನಿಮಗೆ ಕಷ್ಟವಾಗಬಹುದು – ನಿಮ್ಮ ಅಸಾಮಾನ್ಯ ವರ್ತನೆ ನಿಮ್ಮ ಸುತ್ತಲಿನ ಜನರನ್ನು ಗೊಂದಲದಲ್ಲಿ ಕೆಡವಬಹುದು ಮತ್ತು ನಿಮ್ಮನ್ನು ನಿರಾಸೆಗೊಳಿಸಬಹುದು.

**ಮೀನ** ನಿಮ್ಮ ನಿರಾಶಾದಾಯಕ ನಡವಳಿಕೆಯಿಂದಾಗಿ ನೀವು ಯಾವುದೇ ಪ್ರಗತಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ. ಚಿಂತೆ ನಿಮ್ಮ ಚಿಂತನಾ ಶಕ್ತಿಯನ್ನು ಕುಂಠಿತಗೊಳಿಸಿದೆಯೆಂದು ಕಂಡುಕೊಳ್ಳಲು ಇದು ಸಕಾಲ.

### ಜಿಲ್ಲೆಯ ನಾಲ್ಕು ಲಕ್ಷಕ್ಕೂ ಅಧಿಕ ರೈತರಿಗೆ ರೂ 650 ಕೋಟಿ ಬೆಳೆವಿಮೆ ಪರಿಹಾರ ಸಿಕ್ಕಿದೆ: ಪ್ರಿಯಾಂಕ್ ಖರ್ಗೆ

# ಜಿಲ್ಲೆಯ ರೈತರು ಅತಿಹೆಚ್ಚು ಬೆಳೆವಿಮೆ ಪರಿಹಾರ ಪಡೆದುಕೊಂಡಿದ್ದಾರೆ

• ಉದಯವಾಹಿನಿ ಆಳಂದ

ಜಿಲ್ಲೆಯ ನಾಲ್ಕು ಲಕ್ಷಕ್ಕೂ ಅಧಿಕ ರೈತರಿಗೆ ರೂ 650 ಕೋಟಿ ಬೆಳೆವಿಮೆ ಪರಿಹಾರ ಸಿಕ್ಕಿದೆ. ಬಹುಶಃ ಇದು ರಾಜ್ಯದಲ್ಲೇ ಅತ್ಯಧಿಕ ಬೆಳೆವಿಮೆ ಪರಿಹಾರವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಆಳಂದ ಪಟ್ಟಣದ ವೀರಶೈವ ಲಿಂಗಾಯತ ಕಲ್ಯಾಣ ಮಂಟಪದಲ್ಲಿ ನಡೆದ ರೂ 225 ಕೋಟಿ ಬೆಳೆವಿಮೆ ದೊರಕಿಸಿಕೊಟ್ಟ ಸರ್ಕಾರಕ್ಕೆ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು

ಈ ಸಾಲಿನಲ್ಲಿ (2025-26) ಸುಮಾರು 3,00,952 ಜನ ರೈತರು ಬೆಳೆ ವಿಮೆ ನೋಂದಣಿ ಮಾಡಿಸಿಕೊಂಡಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದಾಗ ನೆಟೆರೋಗದಿಂದ ತೊಗರಿ ಹಾನಿಯಾಗಿದ್ದಾಗ ನಯಾಪೈಸೆ ಪರಿಹಾರ ದೊರಕಿಸಿಕೊಡಲಿಲ್ಲ. ಆಗಲೂ ತೀವ್ರ ಮಳೆಯಿಂದ ಬೆಳೆ ಹಾನಿಯಾಗಿದ್ದವು ಆಗ ಸಿಎಂ ಆಗಿದ್ದ ಯಡಿಯೂರಪ್ಪ ವಿಮಾನ ನಿಲ್ದಾಣದಿಂದಲೇ ವಾಪಸ್ ಹೋಗಿದ್ದರು ಎಂದು ಅಂದಿನ ಸನ್ನಿವೇಶ ನೆನಪಿಸಿದರು.

ಈ ಸಲವೂ ಕೂಡಾ ಜಿಲ್ಲೆಯಲ್ಲಿ ಭಾರೀ ಮಳೆಯಿಂದ ಬೆಳೆ ಹಾನಿಯಾಗಿವೆ.ಸಿಎಂ ಸಿದ್ದರಾಮಯ್ಯ ಇಡೀ ದಿನ ಜಿಲ್ಲೆಯ ವೈಮಾನಿಕ ಸಮೀಕ್ಷೆ ನಡೆಸಿ, ಜನಪ್ರತಿನಿಧಿ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಎನ್ ಡಿ ಆರ್ ಎಫ್ ನಿಮಯಾವಳಿ ಪ್ರಕಾರ ಕೇಂದ್ರ ಕೊಡುವ ಪರಿಹಾರಕ್ಕೆ ರೂ 8,500 ಪ್ರತಿ ಹೆಕ್ಟೇರ್‌ಗೆ ಸೇರಿಸಿ ಕೊಡುವ ವಾಗ್ದಾನ ಮಾಡಿದರು ಎಂದರು.


ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರದ ಜನಪ್ರಿಯ ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಜನರ ಆರ್ಥಿಕ ಸ್ಥಿತಿಗತಿ ಸುಧಾರಿಸಿದೆ ಎಂದ ಪ್ರಿಯಾಂಕ್ ಖರ್ಗೆ ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ, ಯುವನಿಧಿ ಹಾಗೂ ಅನ್ನಭಾಗ್ಯ ಯೋಜನೆಯ ಲಾಭ ಕೇವಲ ಕಾಂಗ್ರೆಸ್‌ನವರು ಪಡೆಯುತ್ತಿಲ್ಲ, ಬಿಜೆಪಿಯವರೂ ಪಡೆಯುತ್ತಿದ್ದಾರೆ. ಆದರೂ ಯೋಜನೆಗಳನ್ನು ಟೀಕಿಸುತ್ತಾರೆ, ಸ್ವಲ್ಪನಾದರೂ ನಾಚಿಕೆ ಪಡಬೇಕು ಎಂದು ಕುಟುಕಿದರು.

ಕಲ್ಯಾಣ ಪಥ ಹಾಗೂ ಪ್ರಗತಿ ಪಥ ಯೋಜನೆಯಡಿಯಲ್ಲಿ ರಸ್ತೆಗಳ ಸುಧಾರಣೆಗೆ ಕ್ರಮವಹಿಸಲಾಗಿದೆ. ಪ್ರಗತಿಪಥ ಯೋಜನೆಯಡಿಯಲ್ಲಿ ಸುಮಾರು 8,257 ಕಿಮಿ ದೂರದ ಗ್ರಾಮೀಣ ರಸ್ತೆಗಳ ಸುಧಾರಣೆಗೆ ಕ್ರಮವಹಿಸಲಾಗಿದೆ ಎಂದರು.

**ಮತಗಳ್ಳತನದ ವಿರುದ್ಧ ಹೋರಾಟ**

ಮತಗಳ್ಳತನ ವಿಚಾರ ಪ್ರಸ್ತಾಪಿಸಿದ ಸಚಿವರು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತಗಳ್ಳತನದ ಆರೋಪ ಮಾಡಿದ್ದರುಮ ಆದರೆ, ಬಿ.ಆರ್. ಪಾಟೀಲ್ ಅವರು ಮತಗಳ್ಳತನ ಕುರಿತಂತೆ ದಾಖಲೆ ಸಮೇತ ಸಾಬೀತುಪಡಿಸಿದ ನಂತರ ಮತಗಳ್ಳತನದ ಪ್ರಕರಣಕ್ಕೆ ತಿರುವುಪಡೆದುಕೊಂಡಿತು. ಇನ್ನೂ ಕೆಲವೇ ದಿನಗಳಲ್ಲಿ ಮತಗಳ್ಳತನದ ಕುರಿತಂತೆ ಬಿಜೆಪಿಯ ಪ್ರಜಾತಂತ್ರ ಹಾಗೂ ಸಂವಿಧಾನದ ವಿರುದ್ಧದ ಷಡ್ಯಂತ್ರದ ಬಗ್ಗೆ ಜನರ ಮುಂದೆ ತನಿಖೆಯಿಂದ ಇದೆಲ್ಲ ಹೊರಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮತಗಳ್ಳತನದ ವಿರುದ್ಧ ಸಂವಿಧಾನ ಉಳಿಸುವುದಕ್ಕಾಗಿ ಬಿ.ಆರ್.ಪಾಟೀಲ್ ಹೋರಾಟ ನಡೆಸುತ್ತಿದ್ದಾರೆ. ಈ ಹೋರಾಟಕ್ಕೆ ನಿಮ್ಮೆಲ್ಲರ ಬೆಂಬಲ ಹಾಗೂ ಆಶೀರ್ವಾದ ಇರಬೇಕು. ಕೇವಲ ಅವರಿಗಷ್ಟೇ ಅಲ್ಲದೇ ನನ್ನ ಮೇಲೂ ಇರಬೇಕು ಎಂದು ಪ್ರಿಯಾಂಕ್ ಕೇಳಿಕೊಂಡರು.

ಆಳಂದ ಕ್ಷೇತ್ರದ ಗ್ರಾಮೀಣ ಭಾಗದ ರಸ್ತೆಗಳ ದುರಸ್ತಿಗೆ ತಕ್ಷಣ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದ ಸಚಿವರು ರೈತರಿಗೆ ಇನ್ನೂ ಹೆಚ್ಚಿನ ಪರಿಹಾರ ನೀಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ನಿಮ್ಮ ಯೋಗಕ್ಷೇಮ ಮಾಡಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ ಎಂದರು.

## ಬೆಳೆದ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಸಿಗಬೇಕು

**ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್, ಪ್ರಕೃತಿ ವಿಕೋಪದಿಂದಾಗಿ ಜಿಲ್ಲೆಯ ರೈತರು ಬೆಳೆದ ಬೆಳೆಗಳು ಹಾಳಾಗಿವೆ. ರೈತರು ಬದುಕಬೇಕೆಂದರೆ ಅವರು ಬೆಳೆದ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಸಿಗಬೇಕು. ದೇಶದಲ್ಲಿ ಭಾರೀ ಮಟ್ಟದಲ್ಲಿ ರೈತರು ಹೋರಾಟ ನಡೆಸಿದರು. ಹೋರಾಟ ಮಾಡುತ್ತಲೇ ಬಹಳಷ್ಟು ರೈತರು ಪ್ರಾಣ ಕಳೆದುಕೊಂಡರು. ಆದರೆ, ಪ್ರಧಾನಿ ಕನಿಷ್ಠ ಸಂತಾಪ ಸೂಚಿಸಲಿಲ್ಲ ಎಂದು ವಿಷಾದಿಸಿದರು. ಕೇಂದ್ರ ಸರ್ಕಾರ ಪಕ್ಕದ ಮಹಾರಾಷ್ಟ್ರಕ್ಕೆ 1.30 ಲಕ್ಷ ಕೋಟಿ ಪರಿಹಾರ ನೀಡಿದ್ದರೆ ನಮಗೆ ಕೇವಲ 40,000 ಕೋಟಿ ಪರಿಹಾರ ನೀಡಲಾಗಿದೆ. ಈ ಅನ್ಯಾಯದ ವಿರುದ್ಧ ಹೋರಾಟ ಮಾಡಬೇಕಾಗಿದೆ. ಆಳಂದ ಪಟ್ಟಣಕ್ಕೆ ಅಮೃತ ಯೋಜನೆಯಡಿಯಲ್ಲಿ ಕುಡಿಯುವ ನೀರು ಒದಗಿಸುವ ಯೋಜನೆಗಾಗಿ ರೂ 60 ಕೋಟಿ ಖರ್ಚು ಮಾಡಲಾಗುತ್ತಿದೆ ಎಂದರು.**

**ಆರ್ಟಿಕಲ್ 371 ಜೆ ಜಾರಿಗೆ ಬಂದ ನಂತರ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ವಾರ್ಷಿಕ ರೂ 5,000 ಕೋಟಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಪ್ರಮುಖ ಯೋಜನೆಗಳನ್ನು ಜಿಲ್ಲೆಗೆ ತಂದಿದೆ. ಇಎಸ್ ಐಸಿ, ಜಯದೇವಾ ದಂತ ಪ್ರಮುಖ ಆಸ್ಪತ್ರೆಗಳು, ಕೇಂದ್ರಿಯ ವಿವಿಯಂತ ಶೈಕ್ಷಣಿಕ ಕೇಂದ್ರಗಳ ಸ್ಥಾಪನೆ ಮಾಡಿದ್ದು ಕಾಂಗ್ರೆಸ್ ಪಕ್ಷ. ಅಭಿವೃದ್ಧಿ ವಿಚಾರದಲ್ಲಿ ಬಿಜೆಪಿ ಟೀಕೆ ಮಾಡಿದರೆ ಸ್ವಾಗತ ಆದರೆ ರಾಜಕೀಯ ಸಲುವಾಗಿ ಅನಗತ್ಯ ಟೀಕೆ ಹಾಗೂ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು.** -ಸಚಿವ ಪ್ರಿಯಾಂಕ್ ಖರ್ಗೆ

## ಕನ್ನಡ ಉಳಿವಿಗೆ ಮಹನೀಯರ ಕೊಡುಗೆ ಅಪಾರ

• ಉದಯ ವಾಹಿನಿ ಯಲಬುರ್ಗಾ

ಕನ್ನಡಕ್ಕಾಗಿ, ಕನ್ನಡ ಭಾಷೆಗಾಗಿ ಈ ನಾಡನ್ನು ಶ್ರೀಮಂತಗೊಳಿಸಿದ ಮಹನೀಯರ ಕೊಡುಗೆ ಅಪಾರವಾಗಿದೆ ಎಂದು ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್1 ನಾಗೇಶ್ ನಾಯಕ್ ಅವರು ಹೇಳಿದರು. ತಾಲ್ಲೂಕಿನ ಮುಧೋಳ ಗ್ರಾಮದಲ್ಲಿ ಈಶ್ವರ್ ಟ್ರಸ್ಟ್ ಕಮಿಟಿಯ ಯುವಕರು ಯಲಬುರ್ಗಾ ರಸ್ತೆಯಲ್ಲಿ ಇರುವ ಈಶ್ವರ ದೇವಸ್ಥಾನದ ಮುಂದೆ ಕನ್ನಡ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕನ್ನಡ ಧ್ವಜಾರೋಹಣ ನೆರವೇರಿಸಿದರು. ಬೈಕ್ ಮೂಲಕ ಕನ್ನಡ ಧ್ವಜ ಇಡಿದು ಮೆರವಣಿಗೆ ಮುಕಾಂತರ ಈಶ್ವರ ದೇವಸ್ಥಾನದಿಂದ ಗ್ರಾಮದ ವಿವಿಧ ರಸ್ತೆ ಗಳ ಮೆರವಣಿಗೆ ನಡೆಯಿತು.

ಈಶ್ವರ್ ಟ್ರಸ್ಟ್ ಕಮಿಟಿಯ ಯುವಕ ಸಂಘದ ಅಧ್ಯಕ್ಷರು ಶರಣಪ್ಪ ರಾಂಪುರ್ ಅವರು ಮಾತನಾಡಿ ಕನ್ನಡ ರಾಜ್ಯೋತ್ಸವ ಎನ್ನುವುದು ಕೇವಲ ಉತ್ಸವ ಅಲ್ಲ. ವಿವಿಧ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿರುವ ಕನ್ನಡಿಗರು ಕನ್ನಡದ ಕರುಳಬಳ್ಳಿಯ ಮೂಲಕ ಒಗ್ಗೂಡಿದ ಪವಿತ್ರ ದಿನ. ಇಂತಹದ್ದೊಂದು ಕನ್ನಡದ ಕನಸು ಸಾಕಾರಗೊಳ್ಳಲು ನಿಸ್ವಾರ್ಥದಿಂದ ಶ್ರಮಿಸಿದ ಲಕ್ಷಾಂತರ ಕನ್ನಡಾಭಿಮಾನಿಗಳ


ಉದಯವಾಹಿನಿ ಚಿತ್ರ

ಶ್ರಮ, ತ್ಯಾಗ, ಬಲಿದಾನಗಳನ್ನು ಈ ದಿನ ಹೆಮ್ಮೆಯಿಂದ ಸ್ಮರಿಸೋಣ ಎಂದರು.

ಗ್ರಾಮ ಪಂಚಾಯತ್ ಅಧ್ಯಕ್ಷರು ಮಮತಾಜಬಿ ಹಿರೇಮನಿ. ಮತ್ತು ಈಶ್ವರ್ ಟ್ರಸ್ಟ್ ಕಮಿಟಿಯ ಪರಸಪ್ಪ ಅಜ್ಜಿ. ಮುತ್ತಪ್ಪ ಉಂಡಿ. ಗವಿಸಿದ್ದಪ್ಪ ಐನಕ್ಕಿ. ಈರಪ್ಪ ಜಿವೋಜಿ. ಮುತ್ತಪ್ಪ ಚಿಕೇನಕೊಪ್ಪ. ತಿರಾಣೆಪ್ಪ ಪಲ್ಲೆದ. ಪ್ರವೀಣ್ ಗುದಗಿ. ಶಂಕ್ರಪ್ಪ ಬಜೇಂತ್ರಿ. ಪಕೀರಸಾಬ್ ನದಾಫ್. ಗವಿಸಿದ್ದಪ್ಪ ಹವಳದ. ಬಸವರಾಜ್ ಬಿನ್ನಾಳ ಶಟ್ರು. ಗ್ರಾಂಪಂ ಗ್ರೇಡ್2 ಕಾರ್ಯದರ್ಶಿ ಕೆ ಚನ್ನಪ್ಪ. ಕರಸಿದ್ದಪ್ಪ ತಮಿನಾಳ. ಗ್ರಾಂಪಂ ಸರ್ವ ಸದಸ್ಯರು ಮತ್ತು ಸಿಬ್ಬಂದಿಗಳು. ಮಹಿಳಾ ಒಕ್ಕೂಟದ ಸದಸ್ಯರು. ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದರು.

## ಕಾಗಿನೆಲೆಯಂತೆ ಕನಕದಾಸರ ಬಾಡದ ಅಭಿವೃದ್ಧಿಗೆ ಬದ್ಧ: ಶಾಸಕ

• ಉದಯವಾಹಿನಿ ಶಿಗ್ಗಾವಿ

ಕನಕದಾಸರ ಬಾಡ ಅಭಿವೃದ್ಧಿಗೆ ಕಂಕಣ ಬದ್ದರಾಗಿದ್ದು, ಕನಕದಾಸರ ಕರ್ಮಭೂಮಿ ಕಾಗಿನೆಲೆ ಅಭಿವೃದ್ಧಿಯಂತೆ ಬಾಡದಲ್ಲಿಯೂ ವಿವಿಧ ಅಭಿವೃದ್ಧಿ ಕಾರ್ಯ ಕೈಗೊಳ್ಳಾಗುವುದು. ನ.8ರಂದು ನಡೆಯುವ ಕನಕದಾಸರ ಜಯಂತಿ ಕಾರ್ಯಕ್ರಮನ್ನು ಆದ್ದೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ಯಾಸೀರ್ ಅಹ್ಮದಖಾನ್ ಪಠಾಣ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ನಡೆದ ಕನಕದಾಸರ ಮತ್ತು ಒನಕೆ ಓಬವ್ವ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೂ.34 ಕೋಟಿ ಅನುದಾನ ನೀಡಿದ್ದಾರೆ. ಹೀಗಾಗಿ ಪ್ರತ್ಯೇಕ ಬಾಡ ಅಭಿವೃದ್ಧಿ ಪ್ರಾಧಿಕಾರದ ಬೇಡ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದಡಿ ಬಾಡವನ್ನು ಇನ್ನಷ್ಟು ಅಭಿವೃದ್ಧಿ ಮಾಡಲು ಶ್ರಮಿಸಲಾಗುವುದು ಎಂದರು. ತಹಶೀಲ್ದಾರ್ ಯಲ್ಲಪ್ಪ ಗೊಣೆಣ್ಣವರ, ತಾ.ಪಂ ಇಒ ಮಂಜುನಾಥ ಸಾಳೊಂಕೆ, ಬಿಇಒ ಎಂ.ಬಿ. ಅಂಬಿಗೇರ, ಶಿವಾನಂದ ಮ್ಯಾಗೇರಿ, ಎಂ.ಎನ್.ವೆಂಕೋಜಿ, ಎಸ್.ಎಫ್.ಮಣಕಟ್ಟಿ, ಗುಡ್ಡಪ್ಪ ಜಲದಿ, ಮಲ್ಲೇಶಪ್ಪ ಹರಿಜನ, ಎಂ.ಎನ್.ಹೊನಕೇರಿ, ಮುತ್ತಣ್ಣ ಗುಡಗೇರಿ, ಬಸವರಾಜ ಜೇಕನಕಟ್ಟಿ, ಇದ್ದರು.


ಉದಯವಾಹಿನಿ ಚಿತ್ರ

**ತಾಲ್ಲೂಕಿನ ಗುಡ್ಡದಚನ್ನಾಪುರ ಗ್ರಾಮಕ್ಕೆ ಕನಕದಾಸರು ಬಂದು ಚನ್ನಕೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಹೋಗುತ್ತಿದ್ದರು. ಇದರ ಗತವೈಭವ ಮರಕಳಿಸುವಂತೆ ಚನ್ನಕೇಶವ ಮತ್ತು ಹೊರ ಬೀರಲಿಂಗೇಶ್ವರ ದೇವಸ್ಥಾನ ನಿರ್ಮಾಣಕ್ಕೆ ಕ್ರಮಕೈಗೊಂಡಿದ್ದೇನೆ. ಅವುಗಳ ಅಭಿವೃದ್ಧಿಗೆ 2 ಕೋಟಿ ಅನುದಾನ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ. ಬಾಡದಲ್ಲಿ ನಡೆಯುವ ಕನಕೋತ್ಸವದ ಜವಾಬ್ದಾರಿಗಳನ್ನು ವಹಿಸಿಕೊಂಡಿರುವ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಬೇಕು.** -ಅಹ್ಮದಖಾನ್ ಪಠಾಣ

## ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ರಾಜ್ಯೋತ್ಸವ

• ಉದಯ ವಾಹಿನಿ ಅರಸೀಕೆರೆ

ಕರ್ನಾಟಕ ರಕ್ಷಣಾ ವೇದಿಕೆ ಅರಸೀಕೆರೆ ತಾಲ್ಲೂಕು ವತಿಯಿಂದ 70ನೇ ಕನ್ನಡ ರಾಜ್ಯೋತ್ಸವವನ್ನು ನಗರದ ಪಿಪಿ ವೃತ್ತದಲ್ಲಿ ವೈಭವವಾಗಿ ಆಚರಣೆ ಮಾಡಲಾಯಿತು ನೂತನ ಧ್ವಜಸ್ತಂಭವನ್ನು ಉದ್ಘಾಟಿಸಿ ಮತ್ತು ಧ್ವಜಾರೋಹಣ ಶಾಸಕ ಹಾಗೂ ಕರ್ನಾಟಕ ಸರ್ಕಾರದ ಗೃಹ ಮಂಡಳಿ ಅಧ್ಯಕ್ಷರಾದ ಕೆಎಂ ಶಿವಲಿಂಗೇಗೌಡ ನೆರವೇರಿಸಿದರು.

ನಗರಸಭೆ ಅಧ್ಯಕ್ಷರಾದ ಎಂ ಸಮೀ ವುಲ್ಲಾ ನಗರಸಭೆ ಉಪಾಧ್ಯಕ್ಷ ಮನೋಹರ್, ನಗರ ಯೋಜನೆ ಪ್ರಾಧಿಕಾರ ಅಧ್ಯಕ್ಷ ಅರುಣ್ ಕುಮಾರ್, ನಗರಸಭಾ ಸದಸ್ಯ ವೆಂಕಟ ಮುನಿ, ತಾಲೂಕ್ ಕರವೇ ಅಧ್ಯಕ್ಷ ಎ.ಜಿ. ಕಿರಣ್ ಕುಮಾರ್ , ನಗರ ಅಧ್ಯಕ್ಷ ಸಂತೋಷ್, ತಾಲ್ಲೂಕು ಉಪಾಧ್ಯಕ್ಷ ಗಂಗಾಧರ ನಾಯಕ್, ಗೌರವಾಧ್ಯಕ್ಷ ಲಕ್ಷ್ಮೀಶ್, ಜಿಲ್ಲಾ ಉಪಾಧ್ಯಕ್ಷ ತುಳಸಿ ದಾಸ್, ಹೋಬಳಿ ಅಧ್ಯಕ್ಷ ಪರಮೇಶ್, ಮಹಿಳಾ ಅಧ್ಯಕ್ಷರು ಕಮಲಮ್ಮ, ರುಕ್ಮಿಣಿ, ಉಷಾ, ಖಜಾಂಚಿ ರಾಘವೇಂದ್ರ, ಕಾರ್ಮಿಕರ ಅಧ್ಯಕ್ಷ ಮಂಜುನಾಥ್, ತಾಲ್ಲೂಕು ಉಪಾಧ್ಯಕ್ಷ ನವೀನ್ ಕರಗುಂದ, ಅರ್ಜುನ್ ಗೌಡ,ನೇತ್ರೇಶ್, ಕೊಪ್ಪಲು ರಾಜು, ಆಪಲ್ ಮಂಜು,ನಾಸಿರ್, ಪರ್ವೇಜ್ , ಮುಂತಾದವರು ಇದ್ದರು


ಉದಯವಾಹಿನಿ ಚಿತ್ರ

## ಕರ್ನಾಟಕರಾಜ್ಯ ಬೆಳೆ ಸಮೀಕ್ಷೆದಾರರಿಗೆ ಸೇವಾಭದ್ರತೆ ಹಾಗೂ ಜೀವವಿಮೆ ಒದಗಿಸಿ, ದಿನಗೂಲಿ ಕಾರ್ಮಿಕರನ್ನಾಗಿ ನೇಮಕಗೊಳಿಸುವಂತೆ ಆಗ್ರಹ

• ಉದಯವಾಹಿನಿ ವಿಜಯಪುರ

ಕರ್ನಾಟಕದಲ್ಲಿ ಸುಮಾರು 7-8 ವರ್ಷಗಳಿಂದ ಬೆಳೆ ಸಮೀಕ್ಷೆದಾರರೆಂದು ಸೇವೆ ಸಲ್ಲಿಸುತ್ತಾ ಬಂದಿರುತ್ತೇವೆ, ಗಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸೈನಿಕರಿಗೆ ಎದುರಾಳಿಗಳ ಸುಳಿವು ಮುಂಚಿತವಾಗಿ ಸಿಗಬಹುದು ಆದರೆ ನಾವು ಹೊಲಗಳಲ್ಲಿ ಸಮೀಕ್ಷೆ ಮಾಡುವಾಗ ಅನೇಕ ಕಾಡುಪ್ರಾಣಿಗಳಿಂದ ಹಾಗೂ ವಿವಿಧರೀತಿಯ ಅನಾಹುತಗಳಾಗಿ ಜೀವ ಕಳೆದು ಕೊಂಡಿರುವ ಘಟನೆಗಳು ನಡೆದಿವೆ, ನಮ್ಮನ್ನೆ ನಂಬಿರುವ ಕುಟುಂಬ ಬೀದಿಗೆ ಬೀದ್ದಿವೆ, ಆದ್ದರಿಂದ ಕರ್ನಾಟಕ ರಾಜ್ಯ ಬೆಳೆ ಸಮೀಕ್ಷೆದಾರರಿಗೆ ಸೇವಾಭದ್ರತೆ ಹಾಗೂ ಜೀವವಿಮೆ ಒದಗಿಸಿ, ದಿನಗೂಲಿ ಕಾರ್ಮಿಕರನ್ನಾಗಿ ನೇಮಕಗೊಳಿಸುವಂತೆ ಜಿಲ್ಲಾಧ್ಯಕ್ಷರಾದ ನರಸಪ್ಪ ನಾವಿ ಅವರು ಅಪರ್ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಆಗ್ರಹಿಸಿದರು. ಜಮೀನುಗಳಲ್ಲಿ ಕಾರ್ಯ ನಿರ್ವಹಿಸುವಾಗ ಅನೇಕ ರೀತಿಯ ಹುಳ- ಹುಪ್ಪಡಿ, ಹಾವು, ಚೇಳು, ಕಾಡು ಹಂದಿ, ತೋಳ, ಕುರಿಗಾಯಿಗಳ ನಾಯಿಗಳ ದಾಳಿಯಿಂದಾಗಿ ಅನೇಕ ಅಪಾಯಗಳಾಗಿವೆ, ರೈತರ ಮೋಟರ್ ಪಂಪಸೆಟ್‌ಗಳ ವೈರ್ ತುಂಡಾಗಿ ಪ್ರಾಣಾಪಾಯಗಳು ಉಂಟಾಗಿವೆ, ಈ ವಿಷಯವನ್ನು ಮಿಂಚನಾಳ ಗ್ರಾಮದಲ್ಲಿ ಒಬ್ಬ ಪಿ.ಆರ್.ಓಗೆ ಆದಾಗ ಸಂಬಂಧಿಸಿದ ಅಧಿಕಾರಗಳ ಗಮನಕ್ಕೆ ತಂದಾಗ ಯಾವ ಕ್ರಮವನ್ನು ಕೂಡಾ ಕೈಗೊಳ್ಳಲಿಲ್ಲ. ವರ್ಷದಲ್ಲಿ 2-3 ತಿಂಗಳು ನಿರಂತರವಾಗಿ ಪ್ರಾಣದ ಹಂಗನ್ನು ತೊರೆದು ಶ್ರದ್ದೆಯಿಂದ ಅಧಿಕಾರಿಗಳ ಅಣತೆಯಂತೆ ಸೇವೆ ಸಲ್ಲಿಸುತ್ತಿದ್ದೆವೆ, ಕೂಡಲೆ ನಮ್ಮನ್ನು ದಿನಗೂಲಿ ಕಾರ್ಮಿಕರೆಂದು ನೇಮಕಮಾಡಿ ವರ್ಷವಿಡಿ ಕೆಲಸ ನೀಡಿ ಸೇವಾಭದ್ರತೆ ಹಾಗೂ ಜೀವ ವಿಮೆಯನ್ನು ಒದಗಿಸಬೇಕು ಎಂದರು.


ಉದಯವಾಹಿನಿ ಚಿತ್ರ

**ಅಧಿಕಾರಿಗಳ ಅಣತೆಯಂತೆ ಸೇವೆ**

ಈ ವೇಳೆ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಭೀಮಪ್ಪ ತಳವಾರ, ಜಿಲ್ಲಾ ಉಪಾಧ್ಯಕ್ಷರಾದ ಸುರೇಶ ಹಜೇರಿ, ಸದಾಶಿವ ಚಲವಾದಿ, ಅರುಣ ತಳವಾರ, ಚಂದನ ಕೋಳಿ, ಸೇರಿದಂತೆ ವಿವಿಧ ತಾಲ್ಲೂಕುಗಳಿಂದ ಆಗಮಿಸಿದ ನೂರಾರು ಕರ್ನಾಟಕರಾಜ್ಯ ಬೆಳೆ ಸಮೀಕ್ಷೆದಾರರು ಇದ್ದರು.

## ಕಲಬೇರಿಕೆ ಸೇಂದಿ ಮಾರಾಟ: ಬಂಧನ

• ಉದಯವಾಹಿನಿ ಸೇಡಂ

ತಾಲ್ಲೂಕಿನ ಮದನ ಗ್ರಾಮದಲ್ಲಿ ಅಕ್ರಮ ಕಲಬೆರಿಕೆ ಸೇಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಹೋಗಿ ಮನೆಯನ್ನು ಶೋಧನೆ ಮಾಡಿದಾಗ ಅಕ್ರಮವಾಗಿ ಸುಮಾರು 200 ಲೀಟರ ಸೇಂದಿ ಸಂಗ್ರಹಣೆ ಮಾಡಿರುವುದು ಹಾಗೂ ಅವರದೆ ಹೊಸ ಮನೆಯನ್ನು ಶೋಧನೆ ಮಾಡಿದಾಗ ಆ ಮನೆಯಲ್ಲಿ ಒಂದು ಪ್ಲಾಸ್ಟಿಕ ಚೀಲದಲ್ಲಿ 26 ಕೆ.ಜಿ. ಸಿ.ಹೆಚ್ ಪೌಡರ್ ಇರುವುದು ಕಂಡು ಬಂದಿದ್ದು ಶಾಂತಪ್ಪ ಮತ್ತು ಶರಣಪ್ಪ ಎಂಬುವವರ ಮೇಲೆ ಕರ್ನಾಟಕ ಅಬಕಾರಿ ಕಾಯ್ದೆ ಪ್ರಕಾರ ಅಬಕಾರಿ ನಿರೀಕ್ಷಕರು ಸೇಡಂ ವಲಯ ಗುನ್ನೆ ಸಂಖ್ಯೆ: 29/2025-26 ನೇದರಡಿ ಘೋರ ಪ್ರಕರಣವನ್ನು ದಾಖಲಿಸಿಕೊಂಡಿರುವದಾಗಿ ಸೇಡಂ ತಾಲ್ಲೂಕಿನ ಅಬಕಾರಿ ಇಲಾಖೆಯ ನಿರೀಕ್ಷಕರಾದ ಓಂ ಪ್ರಕಾಶ್ ಮಠಪತಿ ತಿಳಿಸಿದ್ದಾರೆ. ಈ ವೇಳೆಯಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕನ್ನಡ ಮನೆ ಮನೆಗೂ ತಲುಪಲಿ : ಸಿಪಿಐ

• ಉದಯವಾಹಿನಿ ಔರಾದ್

ಮಾತೃ ಭಾಷೆ ಕನ್ನಡ ನಮ್ಮ ಉಸಿರಾಗಿಸುವ ಮೂಲಕ ಕನ್ನಡ ಮನೆ ಮನೆಗೂ ತಲುಪುವಲ್ಲಿ ಸನ್ನದ್ದರಾಗಬೇಕು ಎಂದು ಸಿಪಿಐ ರಘುವೀರಸಿಂಗ ಠಾಕೂರ ಹೇಳಿದರು. ಪಟ್ಟಣದ ಪತ್ರಿಸ್ವಾಮಿ ಪದವಿಪೂರ್ವ ಕಾಲೇಜಿನಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ ಕರುನಾಡ ಸಾಂಸ್ಕೃತಿಕ ಉತ್ಸವ ನಾಡು ನುಡಿ ಚಿಂತನ ಉಪನ್ಯಾಸ ಮಾಲಿಕೆಯ ಐದನೇ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಕನ್ನಡ ಭಾಷೆ ಅತ್ಯಂತ ಸರಳ ಹಾಗೂ ಸುಲಲಿತವಾಗಿದೆ, ಕನ್ನಡ ಸಾಹಿತ್ಯ ಶ್ರೀಮಂತವಾಗಿದ್ದು ಕನ್ನಡಕ್ಕೆ 8 ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಕನ್ನಡ ಸಾಹಿತ್ಯ ಲೋಕ ಸದಾ ಚಿಮ್ಮುತ್ತಿರಲಿ ಎಂದು ತಿಳಿಸಿದರು. ಅರುಣೋದಯ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷ ಮಾಜಿ ಶಾಸಕ ಗುಂಡಪ್ಪ ವಕೀಲ ಅವರು ಮಾತನಾಡಿ ಕನ್ನಡ ಸಾಹಿತ್ಯ ಕೈಗನ್ನಡಿ ಇದ್ದ ಹಾಗೆ ಅದನ್ನು ನಾವು ಅಧ್ಯಯನ ಮಾಡಿ ಕನ್ನಡಕ್ಕಾಗಿ ಕೈ ಜೋಡಿಸಬೇಕು, ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತ ಗೊಳಿಸಿದ ಕೀರ್ತಿ ಹನ್ನೆರಡನೇ ಶತಮಾನದ ಬಸವಾದಿ ಶಿವಶರಣರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

## ಸಂಸ್ಕೃತಿ ಮರೆತರೆ ರಾಷ್ಟ್ರದ ಅವನತಿ: ಎಸ್.ರಂಜಿತ್

• ಉದಯವಾಹಿನಿ ತೀರ್ಥಹಳ್ಳಿ

ಮನೆಯ ಮುಂದೆ ಬಳಕೆಯಾಗುತ್ತಿದ್ದ ರಂಗೋಲಿ ಬದಲು ಪೇಂಟ್ ಬಂದಿದೆ. ಮಾವಿನ ತೋರಣದ ಬದಲು ಪ್ಲಾಸ್ಟಿಕ್ ತೋರಣ ಬಳಕೆಯಲ್ಲಿದೆ. ಪ್ಲಾಸ್ಟಿಕ್ ಬಳಕೆಯಾಗುವುದರ ಜೊತೆಗೆ ಸಂಸ್ಕೃತಿ ಮರೆಯಾಗುತ್ತಿದೆ. ಇಂತಹ ಬೆಳವಣಿಗೆ ರಾಷ್ಟ್ರದ ಅವನತಿಗೆ ಕಾರಣವಾಗುತ್ತದೆ' ಎಂದು ತಹಶೀಲ್ದಾರ್ ಎಸ್.ರಂಜಿತ್ ಅಭಿಪ್ರಾಯಪಟ್ಟರು. ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. 'ಅಳಿವಿನಂಚಿನಲ್ಲಿರುವ ಅಂಟಿಗೆ-ಪಂಟಿಗೆ, ಹುಲಿವೇಷ, ಭೂತಾರಾಧಾನೆ ಮುಂತಾದ ಕಲೆಗಳನ್ನು ಜೋಪಾನವಾಗಿ ಕಾಪಿಟ್ಟುಕೊಳ್ಳಬೇಕು. ಸಂಸ್ಕೃತಿ ಹೆಚ್ಚಿದಂತೆ ನಾಡಿನ ಶೋಭೆ ಹೆಚ್ಚುತ್ತದೆ' ಎಂದು ಹೇಳಿದರು. ''ಕನ್ನಡ ಭಾಷೆಗೆ 2,500 ವರ್ಷಗಳ ಇತಿಹಾಸವಿದೆ. ಗಂಗಾ, ಕದಂಬ, ಚೋಳ, ರಾಷ್ಟ್ರಕೂಟ, ವಿಜಯನಗರ, ಮೈಸೂರು ಹೀಗೆ ಹರಿದು ಹಂಚಿಹೋಗಿದ್ದ ಭೂ ಪ್ರದೇಶ ಅಖಂಡ ಕರ್ನಾಟಕವಾಗಿ ರೂಪುಗೊಂಡಿದೆ. ಕಾವೇರಿ ನದಿಯಿಂದ ಗೋದಾವರಿ ನದಿವರೆಗೆ


ಉದಯವಾಹಿನಿ ಚಿತ್ರ

ಹಬ್ಬಿದ ಕನ್ನಡ ನಾಡನ್ನು ಒಗ್ಗೂಡಿಸಲು ಅನೇಕ ಮಹನೀಯರು ಹೋರಾಟ ನಡೆಸಿದ್ದಾರೆ. ಅವರೆಲ್ಲರ ದೂರದೃಷ್ಟಿಯಿಂದ ಅಖಂಡ ಕರ್ನಾಟಕ ರಚನೆಯಾಯಿತು' ಎಂದು ತಿಳಿಸಿದರು.

ಉದ್ಯೋಗಕ್ಕಾಗಿ ಇಂಗ್ಲೀಷ್ ವ್ಯಾಮೋಹ ಹೆಚ್ಚಾಗುತ್ತಿದೆ. ಇದೇ ಸಂದರ್ಭದಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿವೆ. ಸರ್ಕಾರವೇ ರೂ. 1,600 ಕೋಟಿ ಅನುದಾನ ನೀಡಿ ಬೇರೆ ಮಾಧ್ಯಮಗಳ ಶಾಲೆ ಕಟ್ಟುತ್ತಿದ್ದಾರೆ. ಇವು ರಾಜ್ಯ ಸರ್ಕಾರದ ಸಿನಿಕತನ' ಎಂದು ಶಾಸಕ ಆರಗ ಜ್ಞಾನೇಂದ್ರ ಹೇಳಿದರು.

# ಡಿಸಿಸಿ ಬ್ಯಾಂಕ್ ಚುನಾವಣೆ: ಕತ್ತಿ, ಜೊಲ್ಲೆ, ದೊಡ್ಡಗೌಡರ, ಪಾಟೀಲಗೆ ಗೆಲುವು

### ನ್ಯಾಯಾಲಯದ ತಡೆಯಾಜ್ಞೆ ಹಿನ್ನೆಲೆಯಲ್ಲಿ ವಿಳಂಬವಾಗಿದ್ದ ಡಿಸಿಸಿ ಬ್ಯಾಂಕ್‌ನ ನಾಲ್ಕು ಕ್ಷೇತ್ರಗಳ ಫಲಿತಾಂಶ ಪ್ರಕಟ

• ಉದಯವಾಹಿನಿ ಬೆಳಗಾವಿ


ನ್ಯಾಯಾಲಯದ ತಡೆಯಾಜ್ಞೆ ಹಿನ್ನೆಲೆಯಲ್ಲಿ ವಿಳಂಬವಾಗಿದ್ದ ಡಿಸಿಸಿ ಬ್ಯಾಂಕ್‌ನ ನಾಲ್ಕು ಕ್ಷೇತ್ರಗಳ ಫಲಿತಾಂಶ ಭಾನುವಾರ ಪ್ರಕಟಗೊಂಡಿದ್ದು, ಮಾಜಿ ಸಂಸದರಾದ ರಮೇಶ ಕತ್ತಿ, ಅಣ್ಣಾಸಾಹೇಬ ಜೊಲ್ಲೆ, ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮತ್ತು ಮುಖಂಡ ನಾನಾಸಾಹೇಬ ಪಾಟೀಲ ಆಯ್ಕೆಯಾಗಿದ್ದಾರೆ.

ಡಿಸಿಸಿ ಬ್ಯಾಂಕ್‌ನ 16 ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಈ ಪೈಕಿ 9 ಸ್ಥಾನಗಳಿಗೆ ಅವಿರೋಧ ಆಯ್ಕೆ ಪ್ರಕ್ರಿಯೆ ನಡೆದರೆ, ಏಳು ಸ್ಥಾನಗಳಿಗೆ ಅ.19ರಂದು ಚುನಾವಣೆ ನಡೆದಿತ್ತು.

ಅಂದು ಸಂಜೆಯೇ ರಾಮದುರ್ಗ, ಅಥಣಿ ಹಾಗೂ ರಾಯಬಾಗ ಕ್ಷೇತ್ರಗಳ ನಿರ್ದೇಶಕರ ಸ್ಥಾನದ ಫಲಿತಾಂಶ ಪ್ರಕಟವಾಗಿತ್ತು. ಹುಕ್ಕೇರಿ, ನಿಪ್ಪಾಣಿ, ಬೈಲಹೊಂಗಲ ಮತ್ತು ಚನ್ನಮ್ಮನ ಕಿತ್ತೂರು ಕ್ಷೇತ್ರಗಳಿಂದ ಗೆದ್ದವರು ಯಾರು, ಸೋತವರು ಯಾರು ಎಂಬುದು ಖಚಿತವಾಗಿದ್ದರೂ, ನ್ಯಾಯಾಲಯದ ತಡೆಯಾಜ್ಞೆ ಹಿನ್ನೆಲೆಯಲ್ಲಿ ಫಲಿತಾಂಶ ಘೋಷಣೆ ಆಗಿರಲಿಲ್ಲ.

**ಚನ್ನಮ್ಮನ ಕಿತ್ತೂರು ಕ್ಷೇತ್ರದ ಚುನಾವಣೆ ಜವಾಬ್ದಾರಿ ಜವಾಬ್ದಾರಿ ನನ್ನ ಮೇಲೆಯೇ ಇತ್ತು. ಆದರೆ, ಅನಿವಾರ್ಯ ಕಾರಣಗಳಿಂದ ಸೋಲಾಯಿತು. ಮೊದಲಿನಂತೆ ಜಾರಕಿಹೊಳಿ ಬಣದಲ್ಲೇ ಇದ್ದೇನೆ. ನನಗೆ ಯಾವುದೇ ಅಸಮಾಧಾನವಿಲ್ಲ**
-ಮಹಾಂತೇಶ ದೊಡ್ಡಗೌಡರ, ನಿರ್ದೇಶಕ, ಡಿಸಿಸಿ ಬ್ಯಾಂಕಿನ ಬೈಲಹೊಂಗಲ ಕ್ಷೇತ್ರ

ಈಗ ಫಲಿತಾಂಶ ಪ್ರಕಟಣೆಗೆ ನ್ಯಾಯಾಲಯದಿಂದ ಆದೇಶ ದೊರೆತ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಶ್ರವಣ ನಾಯ್ಕ ಅವರು ಭಾನುವಾರ ಮತ ಎಣಿಕೆ ಪ್ರಕ್ರಿಯೆ ನಡೆಸಿ, ಫಲಿತಾಂಶ ಪ್ರಕಟಿಸಿದರು.


ಉದಯವಾಹಿನಿ ಚಿತ್ರ

**ವಿಕ್ರಮ ಇನಾಮದಾರ ಬಳಿ 22 ಮತ ಇದ್ದರೆ, ನನ್ನ ಕಡೆ 10 ಮತ ಇದ್ದವು. ವಿಕ್ರಮ ಬಳಿಯ ಏಳು ಜನರು ನನಗೆ ಅಡ್ಡ ಮತದಾನ ಮಾಡಿದ್ದರಿಂದ ಗೆದ್ದೆ. ಸಚಿವ ಸತೀಶ ಜಾರಕಿಹೊಳಿ ಚುನಾವಣೆ ಎದುರಿಸಿ ಗೆದ್ದಿದ್ದೇವೆ**
-ನಾನಾಸಾಹೇಬ ಪಾಟೀಲ, ನಿರ್ದೇಶಕ, ಡಿಸಿಸಿ ಬ್ಯಾಂಕಿನ ಚನ್ನಮ್ಮನ ಕಿತ್ತೂರು ಕ್ಷೇತ್ರ

ನ್ಯಾಯಾಲಯದ ಆದೇಶದಂತೆ 4 ಕ್ಷೇತ್ರಗಳ ಫಲಿತಾಂಶ ಪ್ರಕಟಿಸಲಾಗಿದೆ. ನಿಪ್ಪಾಣಿ ಕ್ಷೇತ್ರದ ನಿರ್ದೇಶಕ ಸ್ಥಾನಕ್ಕೆ ಸಂಬಂಧಿಸಿ ಚಲಾವಣೆಯಾದ ಮತಗಳಲ್ಲಿ ಏಳು ಮತ ಎಣಿಸದಂತೆ ನ್ಯಾಯಾಲಯದ ಸೂಚನೆ ಇತ್ತು. ಹಾಗಾಗಿ ಏಳು ಮತ ಬಿಟ್ಟು ಉಳಿದವನ್ನು ಎಣಿಸಿ ಫಲಿತಾಂಶ ಪ್ರಕಟಿಸಲಾಗಿದೆ ಎಂದರು.

**4 ಕ್ಷೇತ್ರಗಳ ಫಲಿತಾಂಶ ಪ್ರಕಟ**

**ಯಾರಿಗೆ ಎಷ್ಟು ಮತ?:**

ಹುಕ್ಕೇರಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ರಮೇಶ ಕತ್ತಿ 59 ಮತ ಪಡೆದು ರಾಜೇಂದ್ರ ಪಾಟೀಲ(32 ಮತ) ಅವರನ್ನು ಸೋಲಿಸಿದರೆ, ನಿಪ್ಪಾಣಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅಣ್ಣಾಸಾಹೇಬ ಜೊಲ್ಲೆ(71 ಮತ) ಪಡೆದು ಮುಖಂಡ ಉತ್ತಮ ಪಾಟೀಲ(48) ಅವರನ್ನು ಪರಾಭವಗೊಳಿಸಿದರು.

ಬೈಲಹೊಂಗಲ ಕ್ಷೇತ್ರದಲ್ಲಿ ಮಹಾಂತೇಶ ದೊಡ್ಡಗೌಡರ 54 ಮತ ಪಡೆದು ಗೆದ್ದರೆ, ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ 21 ಮತಗಳನ್ನಷ್ಟೇ ಪಡೆದು ಸೋತರು. ಚನ್ನಮ್ಮನ ಕಿತ್ತೂರು ಕ್ಷೇತ್ರದಲ್ಲಿ ನಾನಾಸಾಹೇಬ ಪಾಟೀಲ ಅವರು 17 ಮತಗಳೊಂದಿಗೆ ಗೆದ್ದರೆ, ವಿಕ್ರಮ ಇನಾಮದಾರ 15 ಮತ ಪಡೆದರು.

ಡಿಸಿಸಿ ಬ್ಯಾಂಕಿನ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನ.10ರಂದು ಮಧ್ಯಾಹ್ನ 3ಕ್ಕೆ ಚುನಾವಣೆ ನಡೆಯಲಿದೆ.

**ಒಮ್ಮತದ ನಿರ್ಧಾರಕ್ಕೆ ಬರುತ್ತೇವೆ':**

ನಾನೂ ಸೇರಿದಂತೆ ನಮ್ಮ ಬಣದಲ್ಲಿ ಇರುವ ಎಲ್ಲರೂ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳೇ. ಆದರೆ, ಸತೀಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಸೇರಿದಂತೆ ಎಲ್ಲಾ ನಾಯಕರು ಸೇರಿಕೊಂಡು ಚರ್ಚಿಸಿ ಒಮ್ಮತದ ನಿರ್ಧಾರಕ್ಕೆ ಬರುತ್ತೇವೆ' ಎಂದು ಅಣ್ಣಸಾಹೇಬ ಜೊಲ್ಲೆ ಹೇಳಿದರು. ನಮ್ಮ ಬಣ ಗಟ್ಟಿ ಇದೆ. ಹಾಗಾಗಿ ನಿರ್ದೇಶಕರಾಗಿ ಆಯ್ಕೆಯಾಗಿರುವ ನಮ್ಮ ಬಣದ ಲಿಂಗಾಯತ ಅಭ್ಯರ್ಥಿಗಳು ಕತ್ತಿ ಮತ್ತು ಸವದಿ ಬಣ ಸೇರುವುದಿಲ್ಲ. ಮೊದಲು ಅವರೇ ಎಲ್ಲಿ ಹೋಗುತ್ತಾರೆ ಎಂಬುದನ್ನು ನೋಡೋಣ ಎಂದರು.

## ಕನ್ನಡ ನಾಡಿನ ಶ್ರೇಷ್ಠತೆ ಕೇವಲ ಭಾಷೆಯಲ್ಲ, ಸಂಸ್ಕಾರದಲ್ಲೂ ಇದೆ: ಸಂತೋಷ ಮ್ಯಾಗೇರಿ

• ಉದಯವಾಹಿನಿ ಕೊಲ್ಹಾರ

ಕನ್ನಡ ನಾಡು ಶ್ರೀಗಂಧದ ಬೀಡು, ತಾಯಿ ಭುವನೇಶ್ವರಿಯ ನಾಡು ಎಂದು ಹಲವಾರು ಹೆಸರುಗಳಿಂದ ಕರೆಯಲ್ಪಡುವ ಕರ್ನಾಟಕವು ನಿಜವಾದ ಅರ್ಥದಲ್ಲಿ ಸಂಸ್ಕೃತಿ, ಪರಂಪರೆ ಮತ್ತು ಸಾಹಿತ್ಯದ ಪಾವನ ಭೂಮಿ. ಈ ನಾಡು ಕವಿಗಳು, ಸಾಧುಸಂತರ ಹಾಗೂ ಶರಣರ ತಪಸ್ಸಿನಿಂದ ಪವಿತ್ರಗೊಂಡಿದೆ, ಎಂದು ತಹಶೀಲ್ದಾರ ಸಂತೋಷ ಮ್ಯಾಗೇರಿ ಹೇಳಿದರು.

ಪಟ್ಟಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಸರ್ಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ತಹಶೀಲ್ದಾರ ಸಂತೋಷ ಮ್ಯಾಗೇರಿ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು''ಕರ್ನಾಟಕ ನಾಡು ಹಚ್ಚುಹಸಿರು ಬೆಟ್ಟಗಳಿಂದ, ಹರಿಯುವ ನದಿಗಳಿಂದ, ಸಾಧುಸಂತರ ಆಶೀರ್ವಾದದಿಂದ, ಕವಿಗಳ ಕಾವ್ಯಸೃಷ್ಟಿಯಿಂದ ಕಂಗೊಳಿಸುತ್ತಿದೆ. ಈ ನಾಡು ಶ್ರೀಮಂತ ಪರಂಪರೆ ಮತ್ತು ನಾಡಭಾವದ ಪ್ರತೀಕವಾಗಿದೆ. ಇಂತಹ ಸುಂದರ ಮತ್ತು ಸದೃಢ ನಾಡಿನಲ್ಲಿ ಹುಟ್ಟಿರುವ ನಾವು ಪುಣ್ಯವಂತರು. ಕನ್ನಡ ನಾಡಿನ ಶ್ರೇಷ್ಠತೆ ಕೇವಲ ಭಾಷೆಯಲ್ಲಿ ಅಲ್ಲ, ಅದರ ಸಂಸ್ಕಾರ, ಸಾಹಿತ್ಯ, ಕಲೆ ಮತ್ತು ಜನಜೀವನದಲ್ಲಿ ಪ್ರತಿಫಲಿಸುತ್ತದೆ ಎಂದು ಹೇಳಿದರು.

ಪರಿಸರ ಬೆದರಿಕೆ ವರದಿ 2025ರಲ್ಲಿ ಪಾಕಿಸ್ತಾನದ ಕೃಷಿ ಚಟುವಟಿಕೆಗಳ ಭೀಕರ ಪರಿಸ್ಥಿತಿ ಅನಾವರಣ

# ಮರಭೂಮಿಯಾಗುತ್ತಿದೆ ಪಾಕಿಸ್ತಾನದ ಕೃಷಿಭೂಮಿ



**ಇಸ್ಲಾಮಾಬಾದ್:** ಸಿಂಧೂ ನದಿ ಜಲಾನಯನ ಪ್ರದೇಶದ ನೀರಿನ ಮೇಲೆ ಹೆಚ್ಚು ಅವಲಂಬಿತವಾಗಿರುವ ಪಾಕಿಸ್ತಾನ, ಈ ವರ್ಷದ ಆರಂಭದಲ್ಲಿ ಭಾರತವು ಸಿಂಧೂ ಜಲ ಒಪ್ಪಂದವನ್ನು (ಐಡಬ್ಲ್ಯೂಟಿ) ಅಮಾನತುಗೊಳಿಸಿದ ನಂತರ, ಕೊರತೆಯ ತೀವ್ರ ಅಪಾಯವನ್ನು ಎದುರಿಸುತ್ತಿದೆ ಎಂದು ಪರಿಸರ ಬೆದರಿಕೆ ವರದಿ 2025 ತಿಳಿಸಿದೆ.

- ಸಿಂಧೂ ನದಿ ಒಪ್ಪಂದ ರದ್ದತಿಯಿಂದ ಹೆಚ್ಚಿದ ಪಾಕಿಸ್ತಾನದ ಸಂಕಟಗಳು.
- ಪರಿಸರ ಬೆದರಿಕೆ ವರದಿ 2025ರಲ್ಲಿ ಪಾಕಿಸ್ತಾನದ ಕೃಷಿ ಚಟುವಟಿಕೆಗಳ ಭೀಕರ ಪರಿಸ್ಥಿತಿ ಅನಾವರಣ.
- ಸಿಂಧೂ ನದಿ ವ್ಯವಸ್ಥೆಯ ಮೇಲೆ ಶೇ. 80ರಷ್ಟು ಅವಲಂಬಿತವಾಗಿರುವ ಪಾಕಿಸ್ತಾನದ ಕೃಷಿ ಚಟುವಟಿಕೆ.

ಸಿಡ್ನಿ ಮೂಲದ ಇನ್‌ಸ್ಟಿಟ್ಯೂಟ್ ಫಾರ್ ಎಕನಾಮಿಕ್ಸ್ ಪೀಸ್ ಪ್ರಕಟಿಸಿದ ವರದಿಯಲ್ಲಿ, ಒಪ್ಪಂದ ಅಮಾನತುಗೊಳಿಸುವಿಕೆಯು ಪಾಕಿಸ್ತಾನಕ್ಕೆ ಸಿಂಧೂ ಮತ್ತು ಅದರ ಉಪನದಿಗಳ ಪಶ್ಚಿಮಕ್ಕೆ ಹರಿವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಭಾರತಕ್ಕೆ ನೀಡುತ್ತದೆ ಎಂದು ಹೇಳಿದೆ.

ಈ ವರ್ಷದ ಏಪ್ರಿಲ್‌ನಲ್ಲಿ ನಡೆದ ಬರ್ಬರ ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ, ಭಾರತವು ಸಿಂಧೂ ನದಿ ನೀರು ಒಪ್ಪಂದವನ್ನು ರದ್ದುಗೊಳಿಸಿದೆ. ಈ ಬೆಳವಣಿಗೆಯು ಪಾಕಿಸ್ತಾನಕ್ಕೆ ದೊಡ್ಡ ಹಿನ್ನಡೆಯನ್ನು ಸೂಚಿಸುತ್ತದೆ. ಏಕೆಂದರೆ ಅವರ ಕೃಷಿಯು ಸಿಂಧೂ ನದಿ ವ್ಯವಸ್ಥೆಯ ಮೇಲೆ ಶೇ. 80ರಷ್ಟು ಅವಲಂಬಿತವಾಗಿದೆ. ಪಾಕಿಸ್ತಾನ ವಿರುದ್ಧದ ಭಾರತದ ಜಲಯುದ್ಧ ಅನೇಕ ರೀತಿಯ ಪರಿಣಾಮಗಳನ್ನು ತಂದೊಡ್ಡಿದೆ.

ಪಾಕಿಸ್ತಾನಕ್ಕೆ ಸಿಂಧೂ ನೀರಿನ ಸಮಸ್ಯೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತಾ, ಸಿಂಧೂ ಹರಿವಿನ ಅಡಚಣೆಯು ಅದರ ಆಹಾರ ಭದ್ರತೆಗೆ ನೇರವಾಗಿ ಅಪಾಯವನ್ನುಂಟುಮಾಡುತ್ತದೆ. ಇದು ಪಾಕಿಸ್ತಾನದ ಉಳಿವಿಗೆ ಬೆದರಿಕೆಯಾಗಿದ್ದು, ವಾಸ್ತವವಾಗಿ ಪಾಕಿಸ್ತಾನದ ನೀರಾವರಿ ಕೃಷಿಯ ಸುಮಾರು ಶೇ. 80ರಷ್ಟು ಪ್ರಮಾಣವು ಸಿಂಧೂ ಜಲಾನಯನ ನದಿಗಳ ಮೇಲೆ ಅವಲಂಬಿತವಾಗಿದೆ ಎಂದು ವರದಿ ಉಲ್ಲೇಖಿಸಿದೆ.

ಪಾಕಿಸ್ತಾನಕ್ಕೆ ಅಪಾಯವು ತೀವ್ರವಾಗಿದೆ. ಭಾರತವು ನಿಜವಾಗಿಯೂ ಸಿಂಧೂ ನದಿಯ ಹರಿವನ್ನು ಕಡಿತಗೊಳಿಸಿದರೆ ಅಥವಾ ಗಮನಾರ್ಹವಾಗಿ ಕಡಿಮೆ ಮಾಡಿದರೆ, ಪಾಕಿಸ್ತಾನದ ಜನನಿಬಿಡ ಬಯಲು ಪ್ರದೇಶಗಳು ತೀವ್ರ ನೀರಿನ ಕೊರತೆಯನ್ನು ಎದುರಿಸಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಚಳಿಗಾಲ ಮತ್ತು ಶುಷ್ಕ ಋತುಗಳಲ್ಲಿ ಪರಿಸ್ಥಿತಿ ತೀವ್ರ ಬಿಗಡಾಯಿಸಲಿದೆ ಎಂದು ವರದಿ ಎಚ್ಚರಿಸಿದೆ.

ಕಳೆದ ಮೇ ತಿಂಗಳಲ್ಲಿ, ಭಾರತವು ಪಾಕಿಸ್ತಾನಕ್ಕೆ ತಿಳಿಸದೆಯೇ ಚಿನಾಬ್ ನದಿಯ ಸಲಾಲ್ ಮತ್ತು ಬಾಗ್ಲಿಹಾರ್ ಅಣೆಕಟ್ಟುಗಳಲ್ಲಿ ಜಲಾಶಯ ಫ್ಲಶಿಂಗ್ ಕಾರ್ಯಾಚರಣೆಗಳನ್ನು ನಡೆಸಿತು.

ಜಲಾಶಯಗಳನ್ನು ಬರಿದಾಗಿಸುವ ಮೂಲಕ ಹೂಳು ತೆರವುಗೊಳಿಸಲು ಬಳಸಲಾಗುವ ಈ ಪ್ರಕ್ರಿಯೆಯನ್ನು, ಸಿಂಧೂ ನದಿ ಒಪ್ಪಂದದ ಅಡಿಯಲ್ಲಿ ನಿರ್ಬಂಧಿಸಲಾಗಿದೆ. ಆದಾಗ್ಯೂ, ಭಾರತವು ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿತು. ಸಿಂಧೂ ನದಿ ಒಪ್ಪಂದ ರದ್ದತಿ ಪಾಕಿಸ್ತಾನದ ಸ್ವಯಂಕೃತ ಅಪರಾಧಕ್ಕೆ ಉದಾಹರಣೆಯಾಗಿದೆ.

ಭಾರತದ ಈ ನಡೆ ಪಾಕಿಸ್ತಾನದ ಮೇಲೆ ಪರಿಣಾಮ ಬೀರಿದವು. ಜಲಾಶಯ ಫ್ಲಶಿಂಗ್‌ಗಾಗಿ ಭಾರತವು ಅಣೆಕಟ್ಟು ದ್ವಾರಗಳನ್ನು ಮುಚ್ಚಿದ ನಂತರ, ಪಾಕಿಸ್ತಾನದ ಪಂಜಾಬ್‌ನಲ್ಲಿರುವ ಚಿನಾಬ್ ನದಿಯ ವಿಸ್ತರಣೆಗಳು ಹಲವಾರು ದಿನಗಳವರೆಗೆ ಬತ್ತಿಹೋಗಿದ್ದವು. ಹೀಗೆ ಸಿಂಧೂ ಜಲಾನಯನ ಪ್ರದೇಶದಲ್ಲಿ ಭಾರತ ಕೈಗೊಳ್ಳುವ ಯಾವುದೇ ಚಟುವಟಿಕೆಗಳು ಪಾಕಿಸ್ತಾನಕ್ಕೆ ಗಂಭೀರ ಪರಿಣಾಮವನ್ನುಂಟು ಮಾಡುತ್ತವೆ.

ಆದರೆ ಕಳೆದ ಏಪ್ರಿಲ್‌ನಲ್ಲಿ ನಡೆದ ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ, ಭಾರತವು ಸಿಂಧೂ ನದಿ ನೀರು ಒಪ್ಪಂದವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತು. ಆರಂಭದಲ್ಲಿ ಪಾಕಿಸ್ತಾನವು ಹನಿ ನೀರಿಗಾಗಿ ಭಾರತದ ರಕ್ತ ಹರಿಸಲು ಸಿದ್ಧ ಎಂದು ಹೂಂಕರಿಸಿತಾದರೂ, ಈಗ ಅದೇ ಹನಿ ನೀರಿಗಾಗಿ ಮನವಿ ಮಾಡುವ ಪರಿಸ್ಥಿತಿಗೆ ಬಂದು ನಿಂತಿದೆ.

**ಒಪ್ಪಂದ ರದ್ದತಿ**

1960ರಲ್ಲಿ ವಿಶ್ವಬ್ಯಾಂಕ್ ಮಧ್ಯಸ್ಥಿಕೆಯೊಂದಿಗೆ ಸಹಿ ಹಾಕಲಾದ ಸಿಂಧೂ ಜಲ ಒಪ್ಪಂದ ಭಾರತ-ಪಾಕಿಸ್ತಾನ ನಡುವಿನ ರಾಜತಾಂತ್ರಿಕ ಸಂಬಂಧದಲ್ಲಿ ಯಶಸ್ಸು ಕಂಡ ಅಪರೂಪದ ಒಪ್ಪಂದವಾಗಿತ್ತು. ಇದು ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳನ್ನು ವಿಭಜಿಸಿ, ಭಾರತಕ್ಕೆ ಪೂರ್ವದ ರಾವಿ, ಬಿಯಾಸ್ ಮತ್ತು ಉಪನದಿಗಳ ನಿಯಂತ್ರಣವನ್ನು ಮತ್ತು ಪಾಕಿಸ್ತಾನಕ್ಕೆ ಪಶ್ಚಿಮದ ಸಿಂಧೂ, ಝೀಲಂ, ಚಿನಾಬ್ ಉಪನದಿಗಳ ನಿಯಂತ್ರಣವನ್ನು ನೀಡಿತು.

**ಕೃಷಿ ಭೂಮಿಗೆ ನೀರಿಲ್ಲ**

ನಿರ್ಣಾಯಕ ಕ್ಷಣಗಳಲ್ಲಿ ಸಣ್ಣ ಅಡೆತಡೆಗಳು ಸಹ ಪಾಕಿಸ್ತಾನದ ಕೃಷಿಗೆ ಗಂಭೀರ ಹಾನಿ ತರಬಹುದು. ಏಕೆಂದರೆ ಪಾಕಿಸ್ತಾನದಲ್ಲಿ ನದಿ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಕಷ್ಟು ಸಂಗ್ರಹಣಾ ಸ್ಥಳವಿಲ್ಲ. ಪಾಕಿಸ್ತಾನದ ಸ್ವಂತ ಅಣೆಕಟ್ಟು ಸಾಮರ್ಥ್ಯವು ಸುಮಾರು 30 ದಿನಗಳ ಸಿಂಧೂ ಹರಿವನ್ನು ಮಾತ್ರ ಹಿಡಿದುಕೊಳ್ಳಬಲ್ಲದು. ಹೀಗಾಗಿ ಯಾವುದೇ ದೀರ್ಘಕಾಲದ ನೀರಿನ ಅಲಭ್ಯತೆ ಹಾನಿಕಾರಕವಾಗಿರುತ್ತದೆ ಎಂದು ವರದಿ ಹೇಳಿದೆ.

**ಪಾಕ್ ಸಂಕಟಗಳು**

ಭಾರತದ ಪ್ರಸ್ತುತ ಮೂಲಸೌಕರ್ಯವು ನದಿ ಹರಿವನ್ನು ನಿಲ್ಲಿಸುವ ಸಾಮರ್ಥ್ಯವನ್ನು ಮಿತಿಗೊಳಿಸುತ್ತದೆ ಎಂದು ವರದಿ ಗಮನಿಸಿದ್ದರೂ, ಸಣ್ಣ ಅಡಚಣೆಗಳು ಸಹ ಪಾಕಿಸ್ತಾನದ ಕೃಷಿ ವಲಯಕ್ಕೆ ಹಾನಿಕಾರಕ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ಸ್ಪಷ್ಟಪಡಿಸಿದೆ. ಅಂದರೆ ಪಾಕಿಸ್ತಾನದ ಕೃಷಿ ಚಟುವಟಿಕೆಗಳು ಹೆಚ್ಚು ಕಡಿಮೆ ಸ್ಥಗಿತಗೊಳ್ಳುವ ಹಂತವನ್ನು ತಲುಪಿದೆ.

## ಇಡೀ ಒಂದು ಪೀಳಿಗೆಗೆ ತಂಬಾಕು ಬಳಕೆ ನಿಷೇಧಿಸಿದ ಮಾಲ್ಡೀವ್ಸ್

**ಮಾಲಿ:** ಯುವ ಪೀಳಿಗೆಯನ್ನು ಜನರು ತಂಬಾಕು ಸೇವನೆಯ ಚಟದಿಂದ ದೂರ ಇರುವಂತೆ ಮಾಡಲು ವಿಶ್ವಪ್ರಸಿದ್ಧ ಪ್ರವಾಸಿ ತಾಣ ಮಾಲ್ಡೀವ್ಸ್ ಮಹತ್ವದ ನಿರ್ಧಾರವೊಂದನ್ನು ಕೈಗೊಂಡಿದೆ. 2007ರ ಜನವರಿ 1ರಂದು ಅಥವಾ ನಂತರ ಜನಿಸಿದ ಯಾರಾದರೂ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಬಳಕೆ ಮಾಡುವುದನ್ನು ಮಾಲ್ಡೀವ್ಸ್ ನಿಷೇಧಿಸಿದೆ. ಇಡೀ ಒಂದು ಪೀಳಿಗೆಗೆ ತಂಬಾಕು ನಿಷೇಧವನ್ನು ಜಾರಿಗೆ ವಿಶ್ವದ ಮೊದಲ ರಾಷ್ಟ್ರ ಮಾಲ್ಡೀವ್ಸ್ ಆಗಿದೆ.

ನವೆಂಬರ್ 1 ರಿಂದ ಜಾರಿಗೆ ಬಂದಿರುವ ಹೊಸ ಕಾನೂನು, ಧೂಮಪಾನ-ಸಂಬಂಧಿತ ಆರೋಗ್ಯ ಸಮಸ್ಯೆಗಳನ್ನು ನಿಗ್ರಹಿಸುವ ಮತ್ತು ದೀರ್ಘಾವಧಿಯ ಸ್ವಾಸ್ಥ್ಯವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಈ ಕ್ರಮವನ್ನು ಈ ವರ್ಷದ ಆರಂಭದಲ್ಲಿ ಅಧ್ಯಕ್ಷ ಮೊಹಮ್ಮದ್ ಮುಯಿಝು ಅವರು ಪ್ರಾರಂಭಿಸಿದ್ದರು. ಇದು ಸಾರ್ವಜನಿಕ ಆರೋಗ್ಯವನ್ನು ರಕ್ಷಿಸಲು ಮತ್ತು ತಂಬಾಕು-ಮುಕ್ತ ಪೀಳಿಗೆಯನ್ನು ಉತ್ತೇಜಿಸಲು ನೆರವಾಗಲಿದೆ ಎಂದು ಸರ್ಕಾರ ತಿಳಿಸಿದೆ.

**ಏನಿದು ಪೀಳಿಗೆಯ ತಂಬಾಕು ನಿಷೇಧ?:** ಹೊಸ ನಿಯಮದ ಪ್ರಕಾರ, ಜನವರಿ 1, 2007 ರಂದು ಅಥವಾ ಅದರ ನಂತರ ಜನಿಸಿದ ವ್ಯಕ್ತಿಗಳು ಮಾಲ್ಡೀವ್ಸ್‌ನಲ್ಲಿ ತಂಬಾಕು ಉತ್ಪನ್ನಗಳನ್ನು ಖರೀದಿಸಲು, ಬಳಸಲು ಅಥವಾ ಅವರಿಗೆ ಮಾರಾಟ ಮಾಡಲು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ಕ್ರಮವು ಸುಮಾರು 800 ಕಿಲೋಮೀಟರ್ ಹರಡಿಕೊಂಡಿರುವ ಮತ್ತು ಐಷಾರಾಮಿ ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾದ 1,191 ಸಣ್ಣ ಹವಳದ ದ್ವೀಪಗಳನ್ನು ಒಳಗೊಂಡಿರುವ ಈ ರಾಷ್ಟ್ರಕ್ಕೆ ಬರುವ ಪ್ರವಾಸಿಗರಿಗೂ ಸಹ ಅನ್ವಯಿಸುತ್ತದೆ. ಇ-ಸಿಗರೇಟ್‌ಗಳು ಮತ್ತು ವೇಪಿಂಗ್ ಉತ್ಪನ್ನಗಳ ಆಮದು, ಮಾರಾಟ, ವಿತರಣೆ, ಸ್ವಾಧೀನ ಮತ್ತು ಬಳಕೆಯ ಮೇಲೆ ಸಚಿವಾಲಯವು ಸಮಗ್ರ ನಿಷೇಧವನ್ನು ಕಾಯ್ದುಕೊಂಡಿದೆ. ಈ ನಿಷೇಧವು ವಯಸ್ಸಿನ ಭೇದವಿಲ್ಲದೆ ಎಲ್ಲಾ ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ಚಿಲ್ಲರೆ ವ್ಯಾಪಾರಿಗಳು ಈಗ ಯಾವುದೇ ಮಾರಾಟವನ್ನು ಮಾಡುವ ಮೊದಲು ಖರೀದಿದಾರರ ವಯಸ್ಸನ್ನು ಪರಿಶೀಲಿಸಬೇಕಾಗುತ್ತದೆ ಮತ್ತು ನಿಷೇಧವು ಎಲ್ಲಾ ತಂಬಾಕು ಉತ್ಪನ್ನಗಳನ್ನು ಒಳಗೊಂಡಿದೆ.




- ಮಾಲ್ಡೀವ್ಸ್‌ನಲ್ಲಿ 2007ರ ಜನವರಿ 1ರ ನಂತರ ಜನಿಸಿದವರಿಗೆ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಬಳಕೆಗೆ ನಿಷೇಧ
- ಈ ಕಠಿಣ ನಿಯಮ ಮಾಲ್ಡೀವ್ಸ್‌ಗೆ ಬರುವ ಪ್ರವಾಸಿಗರಿಗೂ ಅನ್ವಯ. ಎಲ್ಲಾ ವಯಸ್ಸಿನವರಿಗೂ ಇ-ಸಿಗರೇಟ್ ಬಳಕೆ ಬ್ಯಾನ್
- ತಂಬಾಕು-ಮುಕ್ತ ಪೀಳಿಗೆಯನ್ನು ಉತ್ತೇಜಿಸುವುದು, ಧೂಮಪಾನ-ಸಂಬಂಧಿತ ಆರೋಗ್ಯ ಸಮಸ್ಯೆಗಳನ್ನು ನಿಗ್ರಹಿಸುವ ಗುರಿ
- ಮಾಲ್ಡೀವ್ಸ್‌ನಲ್ಲಿ ತಂಬಾಕು ಸೇವನೆ ನಿಷೇಧ


## ರೈಲಿನಲ್ಲಿ ಸಾಮೂಹಿಕ ಚೂರಿ ಇರಿತ, 9 ಮಂದಿಗೆ ಗಾಯ

**ಲಂಡನ್:** ಬ್ರಿಟನ್‌ನ ಕೇಂಬ್ರಿಡ್ಜ್‌ಶೈರ್‌ನಲ್ಲಿ ರೈಲಿನಲ್ಲಿ ಚೂರಿ ಇರಿತದ ದಾಳಿಯಲ್ಲಿ 9 ಮಂದಿ ತೀವ್ರವಾಗಿ ಗಾಯಗೊಂಡಿದ್ದು, ಘಟನೆಗೆ ಸಂಬಂಧಿಸಿದಂತೆ ಇಬ್ಬರನ್ನು ಸಶಸ್ತ್ರ ಪೊಲೀಸರು ಬಂಧಿಸಿದ್ದಾರೆ.

ಬ್ರಿಟಿಷ್ ಸಾರಿಗೆ ಪೊಲೀಸರ ಪ್ರಕಾರ, ಹತ್ತು ಜನರು ಆಸ್ಪತ್ರೆಯಲ್ಲಿದ್ದಾರೆ. ಈ ಪೈಕಿ ಒಂಬತ್ತು ಮಂದಿಗೆ ಮಾರಣಾಂತಿಕ ಗಾಯಗಳಿವೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ರೈಲು ಕೇಂಬ್ರಿಡ್ ಜಶೈರ್ ಪ್ರದೇಶದ ಮೂಲಕ ಹಾದುಹೋಗುತ್ತಿತ್ತು ಮತ್ತು ಅದು ಹಂಟಿಂಗ್ಡನ್ ಸಮೀಪಿಸುತ್ತಿದ್ದಂತೆ, ಪೊಲೀಸರು ಆ ಪ್ರದೇಶವನ್ನು ಸುತ್ತುವರೆದಿದ್ದು, ಸಶಸ್ತ್ರ ಪೊಲೀಸ್ ಅಧಿಕಾರಿಗಳು ರೈಲು ಹತ್ತಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಇಬ್ಬರು ಶಂಕಿತರನ್ನು ಬಂಧಿಸಲಾಗಿದೆ.

ದಾಳಿಯಿಂದಾಗಿ ರೈಲು ಸೇವೆಗಳು ಅಸ್ತವ್ಯಸ್ತಗೊಂಡಿದ್ದು, ಅನೇಕ ಪ್ರಯಾಣಿಕರಿಗೆ ಅನಾನುಕೂಲ ಉಂಟಾಗಿದೆ. ಪೊಲೀಸರು ಘಟನಾ ಸ್ಥಳವನ್ನು ಸುತ್ತುವರೆದಿದ್ದು, ವಿಧಿವಿಜ್ಞಾನ ತಂಡಗಳು ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿವೆ.

ಗಾಯಗೊಂಡವರ ಸಂಖ್ಯೆ ಮತ್ತು ಅವರ ಸ್ಥಿತಿಯ ಕುರಿತು ವಿವರಗಳನ್ನು ಇನ್ನೂ ಬಿಡುಗಡೆ ಮಾಡಲಾಗಿಲ್ಲ. ಕೇಂಬ್ರಿಡ್ಜ್‌ಶೈರ್ ಪೊಲೀಸರು ಮತ್ತು ಬ್ರಿಟಿಷ್ ಸಾರಿಗೆ ಪೊಲೀಸರು (ಬಿಟಿಪಿ) ಜಂಟಿಯಾಗಿ ಘಟನೆ ಕುರಿತು ತನಿಖೆ ನಡೆಸುತ್ತಿದ್ದಾರೆ.



ಪ್ರಯಾಣಿಕರ ಮೇಲೆ ಚಾಕು ದಾಳಿ ನಡೆಸಿದ ಹಿಂದಿನ ಉದ್ದೇಶವೇನೆಂಬುದು ಪ್ರಸ್ತುತ ಸ್ಪಷ್ಟವಾಗಿಲ್ಲ. ಘಟನೆಯನ್ನು ವೀಕ್ಷಿಸಿದ ಅಥವಾ ತಮ ಮೊಬೈಲ್ ಫೋನ್‌ಗಳಲ್ಲಿ ಯಾವುದೇ ವೀಡಿಯೊ/ಫೋಟೋಗಳನ್ನು ವಿಡಿಯೋ ಮಾಡಿದ ಪ್ರಯಾಣಿಕರಿಗೆ ಪೊಲೀಸರು ಫೂಟೇಜ್ ನೀಡುವಂತೆ ಮನವಿ ಮಾಡಿದ್ದಾರೆ.

ರೈಲು ನಿಂತ ನಂತರ ಪ್ಲಾಟ್‌ಫಾರ್ಮ್‌ನಲ್ಲಿ ದೊಡ್ಡ ಚಾಕು ಹಿಡಿದಿದ್ದ ವ್ಯಕ್ತಿಯನ್ನು ನೋಡಿದ್ದೇವೆ. ನಂತರ ಪೊಲೀಸರು ಆ ವ್ಯಕ್ತಿಯನ್ನು ಎಳೆದು ತಡೆದಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

## ಪಾಕಿಸ್ತಾನದಲ್ಲಿ ಸಿಡಿದ ಬಾಂಬ್‌ಗಳಿಂದ ಕಾಂಗ್ರೆಸ್ ರಾಯಲ್ ಫ್ಯಾಮಿಲಿ ನಿದ್ರೆಗೆ ಭಂಗ ಬಂದಿದೆ; ಮೋದಿ

**ಅರ್ರಾ:** ಬಿಹಾರ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಅರ್ರಾದಲ್ಲಿ ಎನ್‌ಡಿಎ ಪರ ಭರ್ಜರಿ ಚುನಾವಣಾ ಪ್ರಚಾರ ನಡೆಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಮಹಾಘಟ ಬಂಧನ್ ಮೈತ್ರಿಕೂಟದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಪಾಕಿಸ್ತಾನದ ವಿರುದ್ಧ ನಡೆದ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಕಾಂಗ್ರೆಸ್ ಮತ್ತದರ ಮಿತ್ರಪಕ್ಷಗಳ ನಿದ್ರೆಗೆ ಭಂಗ ತಂದಿತ್ತು ಎಂದು ಪ್ರಧಾನಿ ಮೋದಿ ವ್ಯಂಗ್ಯವಾಡಿದ್ದಾರೆ.

ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆಯ ಯಶಸ್ಸಿನ ಬಳಿಕ ಇಡೀ ದೇಶ ಹೆಮ್ಮೆಪಡುತ್ತಿದ್ದರೆ, ಕಾಂಗ್ರೆಸ್ ಮತ್ತದರ ಮಿತ್ರ ಪಕ್ಷಗಳು ಅದನ್ನು ಇಷ್ಟಪಡಲಿಲ್ಲ. ಪಾಕಿಸ್ತಾನದಲ್ಲಿ ಸಿಡಿದ ನಮ್ಮ ಬಾಂಬ್‌ಗಳ ಶಬ್ದದಿಂದ ಕಾಂಗ್ರೆಸ್‌ನ ರಾಜಮನೆತನ ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದೆ. ವಿಪಕ್ಷ ನಾಯಕರು ಆಪರೇಷನ್ ಸಿಂಧೂರ ಆಘಾತದಿಂದ ಇನ್ನೂ ಹೊರಬಂದಿಲ್ಲ ಎಂದು ಪ್ರಧಾನಿ ಮೋದಿ ಕಿಡಿಕಾರಿದ್ದಾರೆ. ಆಪರೇಷನ್ ಸಿಂಧೂರದ ಬಗ್ಗೆ ಕಾಂಗ್ರೆಸ್ ಅನುಮಾನ ವ್ಯಕ್ತಪಡಿಸುತ್ತಿರುವದಕ್ಕೆ ಪ್ರಧಾನಿ ಮೋದಿ ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ನೀಡಿದ ಹೊಡೆತದಿಂದ ಪಾಕಿಸ್ತಾನ ಮತ್ತು ಕಾಂಗ್ರೆಸ್‌ನ ಯುವರಾಜ ಚೇತರಿಸಿಕೊಂಡಿಲ್ಲ. ಇದೇ ಕಾರಣಕ್ಕೆ ವಿಪಕ್ಷ ನಾಯಕ ನನ್ನ ಮೇಲೆ ವೈಯಕ್ತಿಕ ದಾಳಿ ನಡೆಸುತ್ತಿದ್ದಾರೆ. ಕಾಂಗ್ರೆಸ್ ಮಿತ್ರಪಕ್ಷ ಆರ್‌ಜೆಡಿ ನನ್ನ ಮೇಲೆ ಹಗೆತನ ಸಾಧಿಸುತ್ತಿದೆ ಎಂದರು.



## ಹಾರ್ವರ್ಡ್ ಸ್ಕೂಲ್‌ನಲ್ಲಿ ಸ್ಫೋಟ: ಶಂಕಿತರಿಬ್ಬರ ಫೋಟೋ ಬಿಡುಗಡೆ

**ಬೋಸ್ಟನ್:** ಅಮೆರಿಕದ ಪ್ರತಿಷ್ಠಿತ ಹಾರ್ವರ್ಡ್ ಮೆಡಿಕಲ್ ಸ್ಕೂಲ್ ಕ್ಯಾಂಪಸ್‌ನ ಕಟ್ಟಡವೊಂದರಲ್ಲಿ ಮುಂಜಾನೆ ಸ್ಫೋಟ ಸಂಭವಿಸಿದೆ. ಇದು ಉದ್ದೇಶಪೂರ್ವಕ ಕೃತ್ಯ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಫೋಟಕ್ಕೆ ಸ್ವಲ್ಪ ಹೊತ್ತಿನ ಮುಂಚೆ ಇಬ್ಬರು ಮುಖವಾಡಧಾರಿ ವ್ಯಕ್ತಿಗಳು ಸ್ಥಳದಿಂದ ಓಡಿಹೋಗುತ್ತಿರುವುದನ್ನು ಪೊಲೀಸ್ ಅಧಿಕಾರಿಯೊಬ್ಬರು ಗಮನಿಸಿದ್ದಾರೆ.

ಘಟನೆಯಲ್ಲಿ ಯಾವುದೇ ಗಾಯಗಳಾಗಿಲ್ಲ, ಆದರೆ ತನಿಖಾಧಿಕಾರಿಗಳು ಇಬ್ಬರು ಶಂಕಿತರ ಫೋಟೋಗಳನ್ನು ಬಿಡುಗಡೆ ಮಾಡಿದ್ದು, ಅವರ ಗುರುತು ಪತ್ತೆ ಹಚ್ಚಲು ಸಾರ್ವಜನಿಕರ ಸಹಾಯ ಕೋರಿದ್ದಾರೆ. ಎಫ್‌ಬಿಐ ಕೂಡ ತನಿಖೆಯಲ್ಲಿ ಭಾಗಿಯಾಗಿದೆ.

ಮುಂಜಾನೆ 3 ಗಂಟೆಯ ಸುಮಾರಿಗೆ, ಬೋಸ್ಟನ್‌ನ ಲಾಂಗ್‌ವುಡ್ ಅವೆನ್ಯೂದಲ್ಲಿರುವ ಗೋಲ್ಡನ್‌ಸನ್ ಕಟ್ಟಡದಲ್ಲಿ ಅಗ್ನಿಶಾಮಕ ಎಚ್ಚರಿಕೆ ಅಲಾರಾಂ ಸದ್ದು ಮಾಡಿದೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಹಾರ್ವರ್ಡ್ ವಿಶ್ವವಿದ್ಯಾಲಯದ ಪೊಲೀಸ್ ಅಧಿಕಾರಿಯೊಬ್ಬರು, ಇಬ್ಬರು ವ್ಯಕ್ತಿಗಳು ಕಟ್ಟಡದಿಂದ ಓಡಿಹೋಗುತ್ತಿರುವುದನ್ನು ಕಂಡರು. ಅವರನ್ನು ತಡೆಯಲು ಪ್ರಯತ್ನಿಸಿದರೂ, ಅವರ ಗುರುತನ್ನು ಪತ್ತೆಹಚ್ಚಲು ಅಥವಾ ಅವರನ್ನು ಹಿಡಿಯಲು ಸಾಧ್ಯವಾಗಲಿಲ್ಲ.

**ಶಂಕಿತರ ಫೋಟೋ ಬಿಡುಗಡೆ:** ನಂತರ ಪೊಲೀಸರು ಕಟ್ಟಡದೊಳಗೆ ಮುಖ ಮುಚ್ಚಿಕೊಂಡಿದ್ದ ಇಬ್ಬರು ಶಂಕಿತರ ಫೋಟೋಗಳನ್ನು ಬಿಡುಗಡೆ ಮಾಡಿದ್ದು, ಅವರ ಗುರುತು ಪತ್ತೆ ಹಚ್ಚಲು ಸಾರ್ವಜನಿಕರ ಸಹಾಯವನ್ನು ಕೋರಿದ್ದಾರೆ. ಫೋಟೋಗಳಲ್ಲಿ, ಒಬ್ಬ ಶಂಕಿತ 'ಬಾಲಾಕ್ಲಾವಾ' (ಮುಖವಾಡ) ಧರಿಸಿದ್ದರೆ, ಮತ್ತೊಬ್ಬ ವ್ಯಕ್ತಿ 'ಹುಡಿ'ಯನ್ನು ತಲೆಗೆ ಏರಿಸಿಕೊಂಡು ಮುಖವನ್ನು ಮುಚ್ಚಿಕೊಂಡಿರುವುದು ಕಂಡುಬಂದಿದೆ. ಪೊಲೀಸ್ ಅಧಿಕಾರಿ ಕಟ್ಟಡದ ನಾಲ್ಕನೇ ಮಹಡಿಗೆ ತೆರಳಿ ಪರಿಶೀಲಿಸಿದಾಗ, ಅಲ್ಲಿ ಸ್ಫೋಟ ಸಂಭವಿಸಿರುವುದು ಖಚಿತವಾಯಿತು.

ಕೂಡಲೇ ಬೋಸ್ಟನ್ ಅಗ್ನಿಶಾಮಕ ಇಲಾಖೆಯ ಅಗ್ನಿಸ್ಪರ್ಶ ಘಟಕವನ್ನು ಸ್ಥಳಕ್ಕೆ ಕರೆಯಲಾಯಿತು. ಪ್ರಾಥಮಿಕ ತನಿಖೆಯ ಪ್ರಕಾರ, ಸ್ಫೋಟವು ಉದ್ದೇಶಪೂರ್ವಕವಾಗಿ ನಡೆದಿದೆ ಎಂದು ನಿರ್ಧರಿಸಲಾಗಿದೆ. ಬೋಸ್ಟನ್ ಪೊಲೀಸ್ ಇಲಾಖೆಯ ಅಧಿಕಾರಿಗಳು ಕಟ್ಟಡವನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದು, ಬೇರೆ ಯಾವುದೇ ಸ್ಫೋಟಕ ಸಾಧನಗಳು ಪತ್ತೆಯಾಗಿಲ್ಲ. ಎಫ್‌ಬಿಐ ತನಿಖೆಗೆ ಇಳಿದಿದೆ. ಎಫ್‌ಬಿಐ ವಕ್ತಾರರೊಬ್ಬರು, ತಮ್ಮ ತಂಡ ಸ್ಥಳದಲ್ಲಿದ್ದು, ಹಾರ್ವರ್ಡ್ ವಿಶ್ವವಿದ್ಯಾಲಯ ಪೊಲೀಸ್ ಇಲಾಖೆಗೆ ತನಿಖೆಯಲ್ಲಿ ಸಹಕರಿಸುತ್ತಿದೆ ಎಂದು ತಿಳಿಸಿದ್ದಾರೆ. ಸದ್ಯ, ನಾವು ತನಿಖೆಗೆ ಸಹಾಯ ಮಾಡುತ್ತಿದ್ದೇವೆ ಮತ್ತು ಈ ಸಮಯದಲ್ಲಿ ಹೆಚ್ಚಿನ ಪ್ರತಿಕ್ರಿಯೆ ನೀಡುವುದಿಲ್ಲ, ಎಂದು ಅವರು ಹೇಳಿದ್ದಾರೆ.



- ಇದು ಉದ್ದೇಶಪೂರ್ವಕ ಕೃತ್ಯ ಎಂದು ಅಂದಾಜಿಸಲಾಗಿದೆ.
- ನಾಲ್ಕನೇ ಮಹಡಿಯಲ್ಲಿ ಸ್ಫೋಟ ಸಂಭವಿಸಿದ್ದು, ತಕ್ಷಣ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ
- ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ, ಶಂಕಿತರ ಪತ್ತೆಗಾಗಿ ಹುಡುಕಾಟ

## ಮಿನಿ ನ್ಯೂಸ್

### ಜೆಡಿಯು ಅಭ್ಯರ್ಥಿ ಬಂಧನ

**ಪಾಟ್ನಾ:** ಕಳೆದ ಮೂರು ದಿನಗಳ ಹಿಂದೆ ಮೋಕಾಮಾದಲ್ಲಿ ನಡೆದ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಜನ್ ಸುರಾಜ್ ಬೆಂಬಲಿಗ ದುಲರ್ ಚಂದ್ ಯಾದವ್ ಅವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರ ಪೊಲೀಸರು ಇಂದು ಜೆಡಿಯು ಅಭ್ಯಥಿ ಅನಂತ್ ಕುಮಾರ್ ಸಿಂಗ್‌ನನ್ನು ಬಂಧಿಸಿದ್ದಾರೆ. ಎನ್‌ಡಿಎ ಅಭ್ಯರ್ಥಿಯಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಜೆಡಿಯು ಅಭ್ಯರ್ಥಿಯನ್ನು ಬೆಳಗಿನ ಜಾವ ಮೊಕಾಮಾದ ಅವರ ಮನೆಯಲ್ಲಿ ಪೊಲೀಸರು ಬಂಧಿಸಿದ್ದಾರೆ.

ಪಾಟ್ನಾ ಎಸ್‌ಎಸ್‌ಪಿ ಕಾರ್ತಿಕೇಯ ಕೆ ಶರ್ಮಾ ಅವರ ಬಂಧನವನ್ನು ದೃಢಪಡಿಸಿದರು. ಆದಾಗ್ಯೂ, ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಲು ಅವರು ನಿರಾಕರಿಸಿದರು. ಪಕ್ಷದ ಅಭ್ಯರ್ಥಿ ಪಿಯೂಷ್ ಪ್ರಿಯದರ್ಶಿ ಪರ ಪ್ರಚಾರ ನಡೆಸುತ್ತಿದ್ದಾಗ ಯಾದವ್ ಸಾವನ್ನಪ್ಪಿದ್ದರು. ಮೋಕಾಮಾ ಪ್ರದೇಶದ ಭದೌರ್ ಮತ್ತು ಘೋಸ್ವರಿ ಪೊಲೀಸ್ ಠಾಣೆಗಳ ಬಳಿ ಈ ಘಟನೆ ನಡೆದಿತ್ತು. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನಾಲ್ಕು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಮೃತರ ಮೊಮಗ ಸಲ್ಲಿಸಿದ ದೂರಿನ ಆಧಾರದ ಮೇಲೆ ದಾಖಲಾಗಿರುವ ಎಫ್‌ಐಆರ್‌ಗಳಲ್ಲಿ ಒಂದರಲ್ಲಿ ಅನಂತ್ ಸಿಂಗ್ ಸೇರಿದಂತೆ ಇತರ ನಾಲ್ವರನ್ನು ಆರೋಪಿಯನ್ನಾಗಿ ಹೆಸರಿಸಲಾಗಿದೆ.

### ಭಾರತದ ಪರ 'ಬೇಹುಗಾರಿಕೆ' ಆರೋಪ: ಮೀನುಗಾರನನ್ನು ಬಂಧಿಸಿದ ಪಾಕಿಸ್ತಾನ

**ಇಸ್ಲಾಮಬಾದ್:** ಭಾರತದ ಪರ ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ದೇಶದ ಮೀನುಗಾರನನ್ನು ಬಂಧಿಸಲಾಗಿದೆ ಎಂದು ಪಾಕಿಸ್ತಾನದ ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್ ಹೇಳಿದ್ದಾರೆ. ಇಸ್ಲಾಮಾಬಾದ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತರಾರ್, ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಇಜಾಜ್ ಮಲ್ಲಾಹ್‌ಗೆ ಮಿಲಿಟರಿ ಸಮವಸ್ತ್ರ, ಪಾಕಿಸ್ತಾನಿ ಕರೆನ್ಸಿ, ಸಿಗರೇಟ್, ಮ್ಯಾಚ್ ಬಾಕ್ಸ್, ಲೈಟರ್ ಮತ್ತು ಸಿಮ್ ಕಾರ್ಡ್‌ಗಳನ್ನು ಖರೀದಿಸುವಂತೆ ಒತ್ತಾಯಿಸಲಾಗಿತ್ತು.

ಸೆಪ್ಟೆಂಬರ್‌ನಲ್ಲಿ ಮಲ್ಲಾಹ್ ಮೀನುಗಾರಿಕೆಗೆ ಹೊರಟಿದ್ದಾಗ ಭಾರತೀಯ ಕರಾವಳಿ ಕಾವಲು ಪಡೆ ಆತನನ್ನು ಬಂಧಿಸಿತ್ತು ಎಂದು ಅವರು ಹೇಳಿದರು. ಪಾಕಿಸ್ತಾನ ನೌಕಾಪಡೆ, ಪಾಕಿಸ್ತಾನ ಸೇನೆ ಮತ್ತು ಸಿಂಧ್ ರೇಂಜರ್‌ಗಳ ಸಮವಸ್ತ್ರಗಳನ್ನು ಒಳಗೊಂಡಿರುವ ಕೆಲವು ವಸ್ತುಗಳನ್ನು ಸಂಗ್ರಹಿಸಲು ಪಾಕಿಸ್ತಾನಕ್ಕೆ ಮೀನುಗಾರರನ್ನು ಕಳುಹಿಸಲಾಗಿತ್ತು.

ಮೀನುಗಾರನು ತನ್ನ ಹ್ಯಾಂಡ್ಲರ್‌ಗಳು ಹೇಳಿದಂತೆ ವಸ್ತುಗಳನ್ನು ಖರೀದಿಸಲು ಪ್ರಯತ್ನಿಸಿದಾಗ ಪಾಕಿಸ್ತಾನದ ಗುಪ್ತಚರ ಸಂಸ್ಥೆಗಳು ಆತನನ್ನು ಪತ್ತೆಹಚ್ಚಲು ಪ್ರಾರಂಭಿಸಿದವು. ಮೀನುಗಾರ, ಎಲ್ಲಾ ವಸ್ತುಗಳೊಂದಿಗೆ ಭಾರತಕ್ಕೆ ತೆರಳುತ್ತಿದ್ದಾಗ ಪಾಕಿಸ್ತಾನದ ಏಜೆನ್ಸಿಗಳು ಸಮುದ್ರದಲ್ಲಿ ಆತನನ್ನು ಬಂಧಿಸಿದ್ದಾರೆ ಎಂದು ತರಾರ್ ಹೇಳಿದ್ದಾರೆ.

### ಮಹಡಿಯಿಂದ ಹಾರಿ 9ರ ಬಾಲಕಿ ಸಾವು

**ಜೈಪುರ:** ಶಾಲೆಯ 4ನೇ ಮಹಡಿಯಿಂದ ಬಿದ್ದು 9ರ ಬಾಲಕಿ ಸಾವನ್ನಪ್ಪಿರುವ ಘಟನೆ ಜೈಪುರದ ಖಾಸಗಿ ಶಾಲೆಯೊಂದರಲ್ಲಿ ನಡೆದಿದೆ. ಮೃತ ಬಾಲಕಿಯನ್ನು ಅಮೈರಾ ಎಂದು ಗುರುತಿಸಲಾಗಿದ್ದು, ಅದೇ ಶಾಲೆಯಲ್ಲಿ 4ನೇ ತರಗತಿಯಲ್ಲಿ ಓದುತ್ತಿದ್ದಳು ಎಂದು ತಿಳಿದುಬಂದಿದೆ. ಪೊಲೀಸರ ಮಾಹಿತಿ ಪ್ರಕಾರ, ಬಾಲಕಿ 4ನೇ ಮಹಡಿಯ ಗ್ರಿಲ್ ಹತ್ತಿ, ಕೆಳಗೆ ಹಾರಿರುವ ದೃಶ್ಯ ಶಾಲೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸುಮಾರು 47 ಅಡಿ ಎತ್ತರದಿಂದ ಕೆಳಗೆ ಜಿಗಿದಿದ್ದಾಳೆ. ಕೆಳಗೆ ಬಿದ್ದ ಕೂಡಲೇ ಬಾಲಕಿಯನ್ನು ಆಸ್ಪತ್ರೆಗೆ ರವಾನಿಸಿದರೂ ಕೂಡ ಸಾವನ್ನಪ್ಪಿರುವುದಾಗಿ ವೈದ್ಯರು ತಿಳಿಸಿದರು. ಪ್ರಾಥಮಿಕ ಮಾಹಿತಿ ಪ್ರಕಾರ, ಇದನ್ನು ಆತ್ಮಹತ್ಯೆ ಎನ್ನಲಾಗಿದ್ದು, ಆದರೆ ನಿಖರ ಕಾರಣ ತಿಳಿದು ಬರಬೇಕಿದೆ. ಮಾಹಿತಿ ತಿಳಿದ ಕೂಡಲೇ ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ, ಬಾಲಕಿ ಬಿದ್ದ ಸ್ಥಳವನ್ನು ಸ್ವಚ್ಛಗೊಳಿಸಲಾಗಿತ್ತು. ಯಾವುದೇ ರಕ್ತದ ಕಲೆ ಉಳಿಯದಂತೆ ಶುಚಿಗೊಳಿಸಿದ್ದರು ಎಂದು ತಿಳಿಸಿದ್ದಾರೆ.

### ಮೆಕ್ಸಿಕೋ ಸೂಪರ್ ಮಾರ್ಕೆಟ್‌ನಲ್ಲಿ ಸ್ಫೋಟ; 23 ಮಂದಿ ಸಾವು

**ಮೆಕ್ಸಿಕೋ:** ಉತ್ತರ ಮೆಕ್ಸಿಕೋದ ಸೂಪರ್ ಮಾರ್ಕೆಟ್‌ನಲ್ಲಿ ಸ್ಫೋಟ ಸಂಭವಿಸಿದ್ದು, ಮಕ್ಕಳು ಸೇರಿದಂತೆ 23 ಮಂದಿ ಸಾವನ್ನಪ್ಪಿದ್ದಾರೆ. ಹರ್ಮೊಸಿಲ್ಲೊದ ವಾಲ್ಡೋ ಅಂಗಡಿಯಲ್ಲಿ ಈ ಸ್ಫೋಟ ಸಂಭವಿಸಿದೆ. ಸ್ಫೋಟದಲ್ಲಿ 11 ಮಂದಿ ಗಾಯಗೊಂಡಿದ್ದು, ಅವರನ್ನು ನಗರದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಮೆಕ್ಸಿಕನ್ ಅಧ್ಯಕ್ಷೆ ಕ್ಲೌಡಿಯಾ ಶೀನ್‌ಬಾಮ್ ಅವರು, ಮೃತರ ಕುಟುಂಬಗಳು ಮತ್ತು ಪ್ರೀತಿಪಾತ್ರರಿಗೆ ಎಕ್ಸ್ ಖಾತೆಯಲ್ಲಿ ಸಂತಾಪ ಸೂಚಿಸಿದ್ದಾರೆ. 'ಮೃತರ ಕುಟುಂಬಗಳು ಮತ್ತು ಗಾಯಾಳುಗಳಿಗೆ ಸಹಾಯ ಮಾಡಲು ಬೆಂಬಲ ತಂಡವನ್ನು ಕಳುಹಿಸಲು ನಾನು ಆಂತರಿಕ ಕಾರ್ಯದರ್ಶಿ ರೋಸಾ ಐಸ್ಲಾ ರೊಡ್ರಿಗಸ್ ಅವರಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದ್ದಾರೆ.

ಸ್ಫೋಟದ ವೇಳೆ ವಿಷಕಾರಿ ಅನಿಲ ಉಸಿರಾಟದಿಂದ ಹೆಚ್ಚಿನ ಮಂದಿ ಸಾವಿಗೀಡಾಗಿದ್ದಾರೆ ಎಂದು ವಿಧಿವಿಜ್ಞಾನ ವೈದ್ಯಕೀಯ ಸೇವೆಯ ರಾಜ್ಯದ ಅಟಾರ್ನಿ ಜನರಲ್ ಗುಸ್ತಾವೋ ಸಲಾಸ್ ಮಾಹಿತಿ ನೀಡಿದ್ದಾರೆ.

# ಆರ್‌ಎಸ್‌ಎಸ್ ನಿಷೇಧ ಸಾಧ್ಯವಿಲ್ಲ: ದತ್ತಾತ್ರೇಯ ಹೊಸಬಾಳೆ

## ಸಂಘವು ರಾಜಕೀಯಕ್ಕಾಗಿ ಅಲ್ಲ, ಸಮಾಜಕ್ಕಾಗಿ ಕೆಲಸ ಮಾಡುತ್ತದೆ. ಸಂಘವು ತನ್ನ ಆದರ್ಶಗಳ ಮೂಲಕ ದೃಢವಾಗಿ ಉಳಿಯುತ್ತದೆ

**ಜಬಲ್ಪುರ:** ಯಾರೋ ಬಯಸುತ್ತಾರೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲು ಸಾಧ್ಯವಿಲ್ಲ. ಅಂತಹ ಬೇಡಿಕೆ ಇಡುವವರು ಹಿಂದಿನ ಅನುಭವಗಳಿಂದ ಕಲಿಯಬೇಕು ಎಂದು ಆರ್‌ಎಸ್‌ಎಸ್‌ನ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

ಆರ್‌ಎಸ್‌ಎಸ್ ನಿಷೇಧದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರು, ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗಳನ್ನು ಸೃಷ್ಟಿಸುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಅನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದ್ದರು.

ಇದು ನನ್ನ ವೈಯಕ್ತಿಕ ಅಭಿಪ್ರಾಯ ಎಂದಿದ್ದ ಖರ್ಗೆ, ದೇಶದಲ್ಲಿ ಹೆಚ್ಚಿನ ಸಮಸ್ಯೆಗಳು ಮತ್ತು ಕಾನೂನು ಸುವ್ಯವಸ್ಥೆ ಸಮಸ್ಯೆಗಳು ಉದ್ಭವಿಸುತ್ತಿರುವುದು ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನಿಂದ. ಹೀಗಾಗಿ ಈ ಸಂಘಟನೆಯನ್ನು ನಿಷೇಧಿಸಬೇಕು. ಪ್ರಧಾನಿ ನರೇಂದ್ರ ಮೋದಿಯವರು ವಲ್ಲಭಭಾಯಿ ಪಟೇಲ್ ಮಂಡಿಸಿದ ಅಭಿಪ್ರಾಯಗಳನ್ನು ಗೌರವಿಸುವುದು ನಿಜವಾದರೆ, ಆರ್‌ಎಸ್‌ಎಸ್ ಅನ್ನು ನಿಷೇಧ ಮಾಡಬೇಕು ಎಂದು ಆಗ್ರಹಿಸಿದ್ದರು.

ಜಬಲ್ಪುರದಲ್ಲಿ ನಡೆದ ಮೂರು ದಿನಗಳ ಆರ್‌ಎಸ್‌ಎಸ್‌ನ ಅಖಿಲ ಭಾರತ ಕಾರ್ಯಕಾರಿಣಿ ಸಭೆಯ ಮುಕ್ತಾಯದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಿಂದೆ ಮೂರು ಬಾರಿ ಇಂತಹ ಪ್ರಯತ್ನಗಳು ನಡೆದಿವೆ. ಆಗ ಸಮಾಜ ಏನು ಹೇಳಿತು ನ್ಯಾಯಾಲಯ ಏನು ಹೇಳಿತು ಇಷ್ಟೆಲ್ಲಾ ಇದ್ದರೂ, ಸಂಘದ ಕೆಲಸ ಬೆಳೆಯುತ್ತಲೇ ಇದೆ. ನಿಷೇಧ ಹೇರಲು ಸರಿಯಾದ ಕಾರಣಗಳಿರಬೇಕು ಎಂದಿದ್ದಾರೆ.

ಆರ್‌ಎಸ್‌ಎಸ್ ನಿಷೇಧಿಸುವ ಹೇಳಿಕೆ ಈಗಿನದ್ದಲ್ಲ, ಹಳೆಯದು. ಈ ಹಿಂದೆಯೂ ಸಂಘವನ್ನು ನಿಷೇಧಿಸುವ ಪ್ರಯತ್ನಗಳು ನಡೆದಿದ್ದವು. ಆದರೆ ಪ್ರತಿ ಬಾರಿಯೂ ಅದು ಬಲವಾಗಿ ನಿಂತಿದೆ. ಸಂಘವು ರಾಜಕೀಯಕ್ಕಾಗಿ ಅಲ್ಲ, ಸಮಾಜಕ್ಕಾಗಿ ಕೆಲಸ ಮಾಡುತ್ತದೆ. ಸಂಘವು ತನ್ನ ಆದರ್ಶಗಳ ಮೂಲಕ ದೃಢವಾಗಿ ಉಳಿಯುತ್ತದೆ ಎಂದು ಹೇಳಿದ್ದಾರೆ.

ಖರ್ಗೆಯವರು ಹಿಂದಿನ ಅನುಭವಗಳಿಂದ ಪಾಠ ಕಲಿಯಬೇಕು. ಸಮಾಜವು ಸಂಘವನ್ನು ಒಪ್ಪಿಕೊಂಡಿದೆ ಮತ್ತು ನ್ಯಾಯಾಂಗವು ಸಹ ಈ ವಿಷಯದ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡಿದೆ. ಯಾವುದೇ ಮಹತ್ತರ ಕಾರಣವಿಲ್ಲದೆ ಆರ್‌ಎಸ್‌ಎಸ್ ನಿಷೇಧದ ಬಗ್ಗೆ ಮಾತನಾಡುವುದು ಸೂಕ್ತವಲ್ಲ ಎಂದು ತಿರುಗೇಟು ನೀಡಿದ್ದಾರೆ.

ಸಂಘವು ರಾಷ್ಟ್ರ ನಿರ್ಮಾಣಕ್ಕೆ ಸಮರ್ಪಿತವಾಗಿದೆ. ಯಾವುದೇ ನಿಷೇಧದ ಹಿಂದೆ ಒಂದು ಕಾರಣವಿರಬೇಕು. ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಂಡಿರುವ ಆರ್‌ಎಸ್‌ಎಸ್ ಅನ್ನು ಗುರಿಯಾಗಿಸಿಕೊಂಡು ಸಾಧಿಸುವುದೇನಿದೆ? ಸಾರ್ವಜನಿಕರು ಈಗಾಗಲೇ ನಮನ್ನು ಒಪ್ಪಿಕೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ದೇಶದಲ್ಲಿ ವಿಶೇಷವಾಗಿ ಪಂಜಾಬ್ ಮತ್ತು ಸಿಖ್ ಸಮುದಾಯದಲ್ಲಿ ಧಾರ್ಮಿಕ ಮತಾಂತರದ ಘಟನೆಗಳು ಹೆಚ್ಚುತ್ತಿವೆ. ಇದನ್ನು ತಡೆಯಲು ಸಂಘವು ಜಾಗೃತಿ ಅಭಿಯಾನಗಳನ್ನು ನಡೆಸುತ್ತಿದೆ. ನಮ ಗುರಿ ಯಾರ ವಿರುದ್ಧವೂ ಅಲ್ಲ, ಆದರೆ ವಂಚನೆ ಅಥವಾ ದುರಾಸೆಯಿಂದ ಮತಾಂತರಗೊಂಡವರನ್ನು ಅವರ ಮೂಲ ಧರ್ಮಕ್ಕೆ ಮರಳಿ ತರುವುದು ನಮ ಉದ್ದೇಶ ಎಂದು ಹೇಳಿದ್ದಾರೆ.

ಆರ್‌ಎಸ್‌ಎಸ್ ಸಭೆಯಲ್ಲಿ ಬಿಹಾರ ಅಥವಾ ಪಶ್ಚಿಮಬಂಗಾಳ ಚುನಾವಣೆಗಳ ಬಗ್ಗೆ ಚರ್ಚಿಸಲಾಗಿದೆಯೇ? ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಂಬರುವ ಬಿಹಾರ ಚುನಾವಣೆಗಳ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ, ಆದರೆ ಜನರು ಜಾತಿ ಅಥವಾ ಹಣದ ಆಧಾರದ ಮೇಲೆ ಮತಚಲಾಯಿಸದೆ, ರಾಷ್ಟ್ರ ಮತ್ತು ಸಮಾಜಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಬೇಕು ಎಂಬುದು ಸಂಘದ ನಿಲುವು. ಈ ಬಗ್ಗೆ ಸಾರ್ವಜನಿಕವಾಗಿ ಜಾಗೃತಿ ಮೂಡಿಸಲು ನಾವು ಕೆಲಸ ಮಾಡುತ್ತೇವೆ

-ಹೊಸಬಾಳೆ



### ದ್ವೇಷ ಹರಡುವ ಕಾರ್ಯ

ಪಶ್ಚಿಮಬಂಗಾಳದ ಬಗ್ಗೆ ಹೇಳುವುದಾದರೆ ಈ ಸಭೆಯಲ್ಲಿ ಅಲ್ಲಿನ ಪರಿಸ್ಥಿತಿಯ ಬಗ್ಗೆ ಚರ್ಚಿಸಲಾಗಿಲ್ಲ, ಆದರೆ ಅದರ ಬಗ್ಗೆ ಮೊದಲೇ ಚರ್ಚೆ ನಡೆದಿತ್ತು. ಅಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಹಿಂದಿನ ಸಭೆಯಲ್ಲಿ ಸಂಘದ ನಿರ್ಣಯ ಅಂಗೀಕರಿಸಲಾಗಿತ್ತು. ಸಂಘದ ಕೆಲಸವನ್ನು ರಾಜ್ಯದಲ್ಲಿ ವ್ಯಾಪಕವಾಗಿ ವಿಸ್ತರಿಸಲಾಗುತ್ತಿದೆ. ಆದರೆ, ಕಳೆದ ಚುನಾವಣೆಗಳ ನಂತರ ರಾಜಕೀಯ ನಾಯಕತ್ವಕ್ಕಾಗಿ ಅಲ್ಲಿನ ಮುಖ್ಯಮಂತ್ರಿ, ದ್ವೇಷ ಹರಡುವ ಕಾರ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಹೊಸಬಾಳೆ ಆರೋಪಿಸಿದ್ದಾರೆ.

**ಜಾಗೃತಿ ಮೂಡಿಸಲು ಕೆಲಸ**

# ಮಹೇಶ್ ಬಾಬುಗೆ ದಂಡ ಹಾಕಿದ ರಾಜಮೌಳಿ




**ಸಿನಿಮಾ ಸೀಕ್ರೆಟ್ ಬಯಲು**

ಎಸ್‌ಎಸ್‌ಎಂಬಿ 29 ಸಿನಿಮಾದಿಂದ ಹೊಸ ಅಪ್‌ಡೇಟ್ ನೀಡಲು ರಾಜಮೌಳಿ ಅವರು ಸಿದ್ಧತೆ ಮಾಡಿಕೊಂಡಿದ್ದಾರೆ. ಅದಕ್ಕೂ ಮುನ್ನ ಚಿತ್ರತಂಡದ ಸದಸ್ಯರು ಸೋಶಿಯಲ್ ಮೀಡಿಯಾದಲ್ಲಿ ತಮಾಷೆಯ ಸಂಭಾಷಣೆ ನಡೆಸಿದ್ದಾರೆ. ಅತಿಯಾಗಿ ವ್ಯಂಗ್ಯ ಮಾಡಿದ ಮಹೇಶ್ ಬಾಬು ಅವರಿಗೆ ನಿರ್ದೇಶಕ ರಾಜಮೌಳಿ ದಂಡ ಹಾಕಲು ನಿರ್ಧರಿಸಿದ್ದಾರೆ. ನಿರ್ದೇಶಕ ರಾಜಮೌಳಿ ಮತ್ತು ನಟ ಮಹೇಶ್ ಬಾಬು ಅವರು ಹೊಸ ಸಿನಿಮಾದ ಕೆಲಸಗಳಲ್ಲಿ ಬ್ಯುಸಿ ಆಗಿದ್ದಾರೆ. ಈ ಸಿನಿಮಾದ ಶೀರ್ಷಿಕೆ ಇನ್ನೂ ಬಹಿರಂಗ ಆಗಿಲ್ಲ. ಸದ್ಯಕ್ಕೆ 'ಎಸ್‌ಎಸ್‌ಎಂಬಿ 29' ಎಂದು ಕರೆಯಲಾಗುತ್ತಿದೆ. ಈ ಸಿನಿಮಾದ ಮೇಲೆ ಅಭಿಮಾನಿಗಳಿಗೆ ಬೆಟ್ಟದಷ್ಟು ನಿರೀಕ್ಷೆ ಇದೆ. ಎಲ್ಲರಿಗೂ ಗೊತ್ತಿರುವಂತೆ ರಾಜಮೌಳಿ ಅವರ ಸಿನಿಮಾ ಕೆಲಸಗಳು ಬಹಳ ತಡ ಆಗುತ್ತವೆ. ಅದರ ನಡುವೆ ಸಿನಿಮಾದ ಸೀಕ್ರೆಟ್ ಕಾಪಾಡಿಕೊಳ್ಳುವುದು ಸುಲಭ ಅಲ್ಲ. ಈಗ ನಟ ಮಹೇಶ್ ಬಾಬು ಅವರು ಈ ಸಿನಿಮಾದ ಕೆಲವು ಸೀಕ್ರೆಟ್‌ಗಳನ್ನು ಬಯಲು ಮಾಡಿದ್ದಾರೆ. ಅದಕ್ಕಾಗಿ ರಾಜಮೌಳಿ ಅವರು ದಂಡ ಹಾಕಿದ್ದಾರೆ! 'ಎಸ್‌ಎಸ್‌ಎಂಬಿ 29' ಸಿನಿಮಾದ ಬಗ್ಗೆ ನವೆಂಬರ್‌ನಲ್ಲಿ ಅಪ್‌ಡೇಟ್ ನೀಡುವುದಾಗಿ ಚಿತ್ರತಂಡ ತಿಳಿಸಿತ್ತು. ಅದಕ್ಕಾಗಿ ಫ್ಯಾನ್ಸ್ ಕಾಯುತ್ತಿದ್ದಾರೆ. ಅದೇ ವಿಚಾರ ಇಟ್ಟುಕೊಂಡು ಮಹೇಶ್ ಬಾಬು ಅವರು ಟ್ವಿಟರ್‌ನಲ್ಲಿ ರಾಜಮೌಳಿಯ ಕಾಲು ಎಳೆದಿದ್ದಾರೆ. 'ಈಗಾಗಲೇ ನವೆಂಬರ್ ಬಂದಿದೆ' ಎಂದು ಮಹೇಶ್ ಬಾಬು ಟ್ವೀಟ್ ಮಾಡಿದರು. 'ಈ ತಿಂಗಳು ನೀವು ಯಾವ ಸಿನಿಮಾದ ವಿಮರ್ಶೆ ಮಾಡಲು ಪ್ಲ್ಯಾನ್ ಹಾಕಿಕೊಂಡಿದ್ದೀರಿ' ಎಂದು ಪ್ರಶ್ನಿಸಿದ್ದಾರೆ. 'ಈಗತಾನೆ ಶುರುವಾಗಿದೆ. ನಿಧಾನವಾಗಿ ಒಂದೊಂದಾಗಿಯೇ ಬಹಿರಂಗ ಮಾಡುತ್ತೇವೆ' ಎಂದು ರಾಜಮೌಳಿ ಹೇಳಿದರು.

'ಎಷ್ಟು ನಿಧಾನ ಸರ್ 2030ಕ್ಕೆ ಶುರು ಮಾಡೋಣವೇ ನಿಮ್ಮ ಗಮನಕ್ಕೆ.. ಜನವರಿಯಿಂದ ಪ್ರಿಯಾಂಕಾ ಚೋಪ್ರಾ ಅವರು ಹೈದರಾಬಾದ್‌ನ ಪ್ರತಿ ರಸ್ತೆಯನ್ನೂ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ತೋರಿಸುತ್ತಿದ್ದಾರೆ' ಎಂದು ಮಹೇಶ್ ಬಾಬು ಹೇಳಿದರು.

# ಭುವನ್ ಲಕ್ ಬದಲಿಸಿದ ಮಗಳು ತ್ರಿದೇವಿ






ನಟಿ ಹರ್ಷಿಕಾ ಪೂಣಚ್ಚ ಹಾಗೂ ಭುವನ್ ಪೊನ್ನಣ್ಣ ಮಗಳ ಮೊದಲನೇ ವರ್ಷದ ಹುಟ್ಟುಹಬ್ಬವನ್ನ ದಂಪತಿ ವಿಶೇಷವಾಗಿ ಆಚರಿಸಿದ್ರು. ಮಗಳು ತ್ರಿದೇವಿ ಪೊನ್ನಕ್ಕ ಮೊದಲ ವರ್ಷದ ಹುಟ್ಟುಹಬ್ಬಕ್ಕೆ ತಾರೆಗಳ ದಂಡೇ ಆಗಮಿಸಿತ್ತು. ತ್ರಿದೇವಿ ಜನಿಸಿದಾಗಿನಿಂದ ಭುವನ್ ಪೊನ್ನಣ್ಣ ಅದೃಷ್ಟವೇ ಬದಲಾಗಿದ್ದು, ಸಾಲು ಸಾಲು ಸಿನಿಮಾ ಆಫರ್‌ಗಳು ಬರ್ತಿದೆ. ಹರ್ಷಿಕಾ, ಭುವನ್ ದಂಪತಿ ಮಗಳ ಹುಟ್ಟುಹಬ್ಬಕ್ಕೆ ಸಿನಿಮಾ, ರಾಜಕೀಯ ಗಣ್ಯರ ಉಪಸ್ಥಿತಿ ಇತ್ತು.

ಈ ಸಂದರ್ಭದಲ್ಲಿ 'ಬುಲ್ಲಿ' ಸಿನಿಮಾ ತಂಡದಿಂದ ಭುವನ್‌ಗೆ ಮುಂಗಡ ಹಣದ ಚೆಕ್ ನೀಡಲಾಗಿದೆ. ಸದ್ಯಕ್ಕೆ ಭುವನ್ 'ಹಲೋ 123 ಚಿತ್ರದ ನಟನೆಯಲ್ಲಿ ತೊಡಗಿದ್ದಾರೆ.

ಖಾಸಗಿ ಹೋಟೇಲ್‌ನಲ್ಲಿ ಮಗಳ ಬರ್ತ್ಡೇ ಪಾರ್ಟಿ ಆಚರಿಸಿದ್ದ ಹರ್ಷಿಕಾ ಭುವನ್ ಆಹ್ವಾನಕ್ಕಾಗಿ ಸ್ಯಾಂಡಲ್‌ವುಡ್ ತಾರೆಗಳಾದ ರಮೇಶ್ ಅರವಿಂದ್, ಗಣೇಶ್, ಯೋಗರಾಜ್ ಭಟ್, ಕೆವಿಎನ್ ನಿರ್ಮಾಪಕ, ಜಯಮಾಲಾ, ಪ್ರಿಯಾಂಕ ಉಪೇಂದ್ರ, ಮಾಲಾಶ್ರೀ ಹಲವರು ಉಪಸ್ಥಿತರಿದ್ರು. ಇನ್ನು ರಾಜಕೀಯ ವಲಯದಿಂದ ಅಶ್ವಥ್ ನಾರಾಯಣ್, ಹ್ಯಾರಿಸ್, ರೋಷನ್ ಬೇಗ್ ಮುಂತಾದವರು ಆಗಮಿಸಿದ್ದರು. ಒಟ್ನಲ್ಲಿ ಮಗಳ ಆಗಮನದಿಂದ ನಟ ಭುವನ್ ಪೊನ್ನಣ್ಣಗೆ ಅದೃಷ್ಟ ಖುಲಾಯಿಸಿದೆ. ಪರಿಣಾಮ ಒಂದರ ಹಿಂದೊಂದು ಸಿನಿಮಾವನ್ನ ಘೋಷಿಸುತ್ತಿದ್ದಾರೆ.

# ಹೊಸ ಅವತಾರದಲ್ಲಿ ಬಂದ ಶಾರುಖ್



**ಹುಟ್ಟುಹಬ್ಬಕ್ಕೆ ಕಿಂಗ್ ಟೀಸರ್ ರಿಲೀಸ್**

ಶಾರುಖ್ ಖಾನ್ ಅವರ ಬರ್ತ್‌ಡೇ ಪ್ರಯುಕ್ತ ಅಭಿಮಾನಿಗಳಿಗೆ 'ಕಿಂಗ್' ಸಿನಿಮಾ ತಂಡದಿಂದ ಗಿಫ್ಟ್ ಸಿಕ್ಕಿದೆ. ಈ ಬಹುನಿರೀಕ್ಷಿತ ಸಿನಿಮಾದ ಟೈಟಲ್ ಟೀಸರ್ ಬಿಡುಗಡೆ ಮಾಡಲಾಗಿದೆ.

ಇದು ಸಖತ್ ಮಾಸ್ ಆಗಿದೆ. ರಗಡ್ ಅವತಾರದಲ್ಲಿ ಅಭಿಮಾನಿಗಳನ್ನು ರಂಜಿಸಲು ಶಾರುಖ್ ಸಜ್ಜಾಗಿದ್ದಾರೆ. 2026ರಲ್ಲಿ ಚಿತ್ರ ಬಿಡುಗಡೆ ಆಗಲಿದೆ. ನಟ ಶಾರುಖ್ ಖಾನ್ ಅವರು 'ಡಂಕಿ' ಸಿನಿಮಾ ಬಳಿಕ ಗ್ಯಾಪ್ ತೆಗೆದುಕೊಂಡರು.

ಈಗ ಅವರು 'ಕಿಂಗ್' ಸಿನಿಮಾದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಅಧಿಕೃತವಾಗಿ ಈ ಸಿನಿಮಾದ ಟೈಟಲ್ ಅನೌನ್ಸ್ ಆಗಿದೆ. ಶಾರುಖ್ ಖಾನ್ ಅವರ ಹುಟ್ಟುಹಬ್ಬದ ಪ್ರಯುಕ್ತ ಟೈಟಲ್ ಟೀಸರ್ ಬಿಡುಗಡೆ ಮಾಡಲಾಗಿದೆ. ಅದನ್ನು ಕಂಡು ಅಭಿಮಾನಿಗಳಿಗೆ ತುಂಬ ಖುಷಿ ಆಗಿದೆ.

ಶಾರುಖ್ ಖಾನ್ ಅವರು ಈ ಸಿನಿಮಾದಲ್ಲಿ ಸಿಕ್ಕಾಪಟ್ಟೆ ಮಾಸ್ ಆಗಿ ಕಾಣಿಸಿಕೊಳ್ಳಲಿದ್ದಾರೆ. ಅದಕ್ಕೆ ಟೀಸರ್‌ನಲ್ಲೇ ಸುಳಿವು ಸಿಕ್ಕಿದೆ. ಕಿಂಗ್ ಸಿನಿಮಾದ ಟೀಸರ್ ಈಗ ಎಲ್ಲಾ ಕಡೆಗಳಲ್ಲಿ ವೈರಲ್ ಆಗುತ್ತಿದೆ. ಶಾರುಖ್ ಖಾನ್ ಜೊತೆ 'ಪಠಾಣ್' ಸಿನಿಮಾ ಮಾಡಿ ಬಹುದೊಡ್ಡ ಹಿಟ್ ನೀಡಿದ್ದ ನಿರ್ದೇಶಕ ಸಿದ್ದಾರ್ಥ್ ಆನಂದ್ ಅವರು ಈಗ 'ಕಿಂಗ್' ಸಿನಿಮಾಗೆ ಆಕ್ಷನ್-ಕಟ್ ಹೇಳುತ್ತಿದ್ದಾರೆ.

ಈ ಬಾರಿ ಶಾರುಖ್ ಖಾನ್ ಅವರನ್ನು ಭಾರಿ ರಗಡ್ ಅವತಾರದಲ್ಲಿ ತೋರಿಸಲು ಸಿದ್ದಾರ್ಥ್ ಆನಂದ್ ಅವರು ಪ್ಲ್ಯಾನ್ ಮಾಡಿಕೊಂಡಿದ್ದಾರೆ. ಅಭಿಮಾನಿಗಳಿಂದ ಕಿಂಗ್ ಸಿನಿಮಾದ ಟೀಸರ್‌ಗೆ ಮೆಚ್ಚುಗೆ ಸಿಕ್ಕಿದೆ. 'ಕಿಂಗ್' ಚಿತ್ರದ ಟೀಸರ್‌ನಲ್ಲಿ ಶಾರುಖ್ ಖಾನ್ ಅವರ ಫಸ್ಟ್ ಲುಕ್ ಬಹಿರಂಗ ಆಗಿದೆ.

ಸ್ವತಃ ಶಾರುಖ್ ಖಾನ್ ಅವರೇ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಬಹಳ ಎಚ್ಚರಿಕೆ ವಹಿಸಿ ಅವರು ಈ ಸ್ಕ್ರಿಪ್ಟ್ ಆಯ್ಕೆ ಮಾಡಿದ್ದಾರೆ. ಯಾವುದೇ ಅವಸರ ಇಲ್ಲದೇ ಸಾಕಷ್ಟು ಸಮಯ ನೀಡಿ ಸಿನಿಮಾ ಮಾಡಲಾಗುತ್ತಿದೆ. ಈ ಎಲ್ಲಾ ಕಾರಣಗಳಿಂದಾಗಿ 'ಕಿಂಗ್' ಸಿನಿಮಾದ ಮೇಲಿನ ನಿರೀಕ್ಷೆ ಡಬಲ್ ಆಗಿದೆ. ಶಾರುಖ್ ಖಾನ್ ಅವರ ಪುತ್ರಿ ಸುಹಾನಾ ಖಾನ್ ಕೂಡ 'ಕಿಂಗ್' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ದೊಡ್ಡ ಪರದೆಯಲ್ಲಿ ತೆರೆಕಾಣಲಿರುವ ಸುಹಾನಾ ಖಾನ್ ಅವರ ಮೊದಲ ಸಿನಿಮಾ ಇದಾಗಲಿದೆ.

# ಯಶ್ ಪುತ್ರನಿಗೆ ಪ್ರಾಣಿಗಳ ಮಧ್ಯೆ ಸ್ಪೆಷಲ್ ಹುಟ್ಟುಹಬ್ಬ

ರಾಕಿಂಗ್ ಸ್ಟಾರ್ ಯಶ್ ಹಾಗೂ ನಟಿ ರಾಧಿಕಾ ಪಂಡಿತ್ ದಂಪತಿಯ ಪುತ್ರ ಯಥರ್ವ್ 6ನೇ ವರ್ಷದ ಹುಟ್ಟುಹಬ್ಬಕ್ಕೆ ಇದೇ ಅ.30ಕ್ಕೆ ಆಚರಿಸಿಕೊಂಡ್ರು. ಈ ಬಾರಿ ಯಥರ್ವ್ ಹುಟ್ಟುಹಬ್ಬ ಬಹಳ ವಿಶೇಷವಾಗಿತ್ತು. ರಕ್ಷಿಸಲ್ಪಟ್ಟ ನಿಜ ಪ್ರಾಣಿ ಪಕ್ಷಿಗಳ ಜೊತೆ ಯಥರ್ವ್ ಹುಟ್ಟುಹಬ್ಬ ಆಚರಿಸಲಾಗಿದೆ.

ಬೆಂಗಳೂರು ಹೊರವಲಯದ ಪ್ರಾಣಿ ದಿ ಪೆಟ್ ಸೆಂಚುರಿಯಲ್ಲಿರುವ ರಕ್ಷಿಸಲ್ಪಟ್ಟ ಸುಂದರ ಪ್ರಾಣಿ-ಪಕ್ಷಿಗಳನ್ನ ಖಾಸಗಿ ಹೋಟೆಲ್‌ಗೆ ಕರೆಸಿ ಕಾಡಿನ ಥೀಮ್‌ನಲ್ಲಿ ಹುಟ್ಟುಹಬ್ಬ ಆಚರಿಸಲಾಯಿತು. ಪ್ರಾಣಿಗಳ ಆಕೃತಿಯನ್ನೇ ಡೆಕೊರೇಷನ್‌ಗೆ ಬಳಸಲಾಗಿತ್ತು. ದಟ್ಟ ಕಾಡು ಹೋಲುವ ರೀತಿಯಲ್ಲೇ ಥೀಮ್ ಸೃಷ್ಟಿಸಲಾಗಿತ್ತು. ಹೆಬ್ಬಾವು, ವಿವಿಧ ಪಕ್ಷಿಗಳು, ಉಡ ಜಾತಿಗೆ ಸೇರಿದ ಪ್ರಾಣಿಗಳನ್ನ ಮಕ್ಕಳು ಕೈಯಲ್ಲಿ ಹಿಡಿದು ಖುಷಿಪಟ್ಟರು. ಮಗ ಯಥರ್ವ್ ಹುಟ್ಟುಹಬ್ಬದ ವಿಡಿಯೋವನ್ನ ನಟಿ ರಾಧಿಕಾ ಪಂಡಿತ್ ಇನ್‌ಸ್ಟಾಗ್ರಾಂನಲ್ಲಿ ಶೇರ್ ಮಾಡಿದ್ದಾರೆ.



ಇದೇ ಥೀಮ್ ಯಾಕೆ ಅನ್ನೋದರ ಕುರಿತು ಮಹಿತಿಯನ್ನೂ ಹಂಚಿಕೊಂಡಿದ್ದಾರೆ. 'ನಮ್ಮ ಪ್ರಕೃತಿ ಪ್ರೇಮಿ ಯಥರ್ವ್‌ಗೆ ಅದ್ಭುತವಾದ ಆರನೇ ವರ್ಷದ ಹುಟ್ಟುಹಬ್ಬ ಆಚರಿಸಲಾಯಿತು. ಆ ದಿನವೂ ಪ್ರಕೃತಿ ಜೊತೆ ಮನುಷ್ಯನ ಸಹಾನುಭೂತಿ ಮತ್ತು ಸಹಬಾಳ್ವೆಯ ಸುಂದರ ಜ್ಞಾಪನೆಯಾಗಿತ್ತು. ರಕ್ಷಿಸಲ್ಪಟ್ಟ ಸುಂದರ ಪ್ರಾಣಿಗಳನ್ನು ಇಲ್ಲಿಗೆ ಕರೆತಂದಿದ್ದಕ್ಕಾಗಿ ಪ್ರಾಣಿ ದಿ ಪೆಟ್ ಸ್ಯಾಂಕ್ಚ್ಯುರಿಗೆ ವಿಶೇಷ ಧನ್ಯವಾದಗಳು ಎಂದಿದ್ದಾರೆ ರಾಧಿಕಾ. ಒಟ್ನಲ್ಲಿ ಟಾಕ್ಸಿಕ್ ಚಿತ್ರ ಬಿರುಸಿನ ಚಿತ್ರೀಕರಣದ ನಡುವೆ ಯಶ್ ಮಕ್ಕಳಿಗೂ ಸಮಯ ಕೊಟ್ಟಿದ್ದಾರೆ.

# ಕರೂರು ಕಾಲ್ತುಳಿತ ಪ್ರಕರಣ ದಳಪತಿ ಬೆನ್ನಿಗೆ ನಿಂತ ತಲಾ ಅಜಿತ್



**ಅಪಾರ ಪ್ರಮಾಣದ ಸಾವು-ನೋವು**

ಕರೂರು ಕಾಲ್ತುಳಿತ ಪ್ರಕರಣ ಅಕ್ಷರಶಃ ತಮಿಳುನಾಡಿನಲ್ಲಿ ಸಂಚಲವನ್ನ ಸೃಷ್ಟಿಸಿತ್ತು. ಇದು ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿತ್ತು. ಜೊತೆಗೆ ನಟ ವಿಜಯ್ ಜೊತೆ ಎಲ್ಲಾ ನಟರ ಅಭಿಮಾನಿಗಳ ಎಚ್ಚರಿಕೆ ಗಂಟೆಯೂ ಆಗಿತ್ತು. ಈ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಇದೇ ಮೊದಲ ಬಾರಿಗೆ ಸ್ಟಾರ್ ನಟರೊಬ್ಬರು ಮಾತಾಡಿದ್ದಾರೆ. ಕೇವಲ ವಿಜಯ್‌ಯತ್ತ ಬೆರಳು ತೋರಿಸೋದು ತಪ್ಪು ಅಂತಾ ಮಿಂಚಿನಂತ ಮಾತುಗಳನ್ನಾಡಿದ್ದಾರೆ. ವಿಜಯ್ ದಳಪತಿ ಸಿನಿಮಾ ಜರ್ನಿಗೆ ಫುಲ್‌ಸ್ಟಾಪ್ ಇಟ್ಟು, ಕಂಪ್ಲೀಟ್ ಆಗಿ ರಾಜಕೀಯ ರಂಗದಲ್ಲೇ ತೊಡಗಿಸಿಕೊಳ್ಳುವ ಉದ್ದೇಶದಿಂದ ಟಿವಿಕೆ ಪಕ್ಷವನ್ನ ಸ್ಥಾಪನೆ ಮಾಡಿದ್ದಾರೆ. ಈ ಪಕ್ಷದ ಮೂಲಕ ಜನರ ಸೇವೆ ಮಾಡಲು ಮುಂದಾಗಿದ್ದಾರೆ. ಈ ಮೊದಲು ಎರಡ್ಮೂರು ಕಡೆ ವ್ಯವಸ್ಥಿತವಾಗಿ ಕಾರ್ಯಕ್ರಮಗಳನ್ನ ಆಯೋಜನೆ ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನ ಸೇರಿದ್ದರು. ಆದ್ರೆ ಕರೂರಿನಲ್ಲಿ ಆದ ಕಾಲ್ತುಳಿತ ಪ್ರಕರಣ ವಿಜಯ್ ರಾಜಕೀಯ ಜೀವನದ ಆರಂಭಕ್ಕೆ ಕೊಳ್ಳಿ ಇಟ್ಟಂತಾಗಿತ್ತು. ಕರೂರು ಪ್ರಕರಣದಲ್ಲಿ ಅಪಾರ ಪ್ರಮಾಣದ ಸಾವು-ನೋವು ನಟ ವಿಜಯ್ ದಳಪತಿ ಹಾಗೂ ಟಿವಿಕೆ ಪಕ್ಷದವರಿಗೆ ಘಾಸಿಗೊಳಿಸಿದೆ. ಈ ಘಟನೆಯ ಬಗ್ಗೆ ತಮಿಳು ನಟ ತಲಾ ಅಜಿತ್ ಮಾತನಾಡಿದ್ದಾರೆ. ಇಲ್ಲಿ ಯಾರನ್ನೂ ದೂಷಿಸುವ ಪ್ರಯತ್ನ ನಮ್ಮದಲ್ಲ, ಕರೂರು ಕಾಲ್ತುಳಿತ ಪ್ರಕರಣಕ್ಕೆ ಕೇವಲ ನಟ ವಿಜಯ್ ದಳಪತಿಯವರನ್ನ ಗುರಿಯಾಗಿಸೋದು ಸೂಕ್ತವಲ್ಲ. ಇದಕ್ಕೆ ನಾವು ಕೂಡಾ ಜವಾಬ್ದಾರರು ಎನ್ನುವ ಮಾತುಗಳನ್ನ ಆಡುವ ಮೂಲಕ ನಟ ಹಾಗೂ ರಾಜಕಾರಣಿ ವಿಜಯ್ ದಳಪತಿ ಬೆನ್ನಿಗೆ ನಿಂತಿದ್ದಾರೆ ಅಜಿತ್. ಸಾಮಾನ್ಯವಾಗಿ ಈತರದ ಘಟನೆಗಳು ಸಂಭವಿಸಿದಾಗ ಆ ಘಟನೆಯ ಲಾಭವನ್ನ ಪಡೆದುಕೊಳ್ಳುವವರೇ ಜಾಸ್ತಿ. ಇದೊಳ್ಳೆಯ ಸಮಯ ಅಂತಾ ತಮ್ಮ ಬೇಳೆ ಬೇಯಿಸಿಕೊಳ್ಳುವವರೇ ಜಾಸ್ತಿ. ಆದರೆ ವಿಜಯ್ ದಳಪತಿ ರ್ಯಾಲಿಯಲ್ಲಿ ಆದ ಈ ಘಟನೆಗೆ ಅಸಲಿ ಕಾರಣಗಳು ಹೀಗೂ ಇರುತ್ತೆ ಎನ್ನುವ ಮಾತುಗಳನ್ನ ತಮ್ಮ ಅಭಿಪ್ರಾಯವನ್ನ ವ್ಯಕ್ತಪಡಿಸಿದ್ದಾರೆ .ತಲಾ ಅಜಿತ್. ಸಂದರ್ಶನವೊಂದರಲ್ಲಿ ಮಾತನಾಡಿರುವ ತಲಾ ಅಜಿತ್ ಈ ವಿಡಿಯೋ ಜಾಲತಾಣದಲ್ಲಿ ವೈರಲ್ ಆಗ್ತಿದೆ.

# ದಾಖಲೆ ಜೊತೆಯಾಟವಾಡಿದ ಶೆಫಾಲಿ-ಮಂಧಾನ ಜೋಡಿ

ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ಐಸಿಸಿ 2025 ರ ಮಹಿಳಾ ವಿಶ್ವಕಪ್ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಮತ್ತು ಭಾರತ ತಂಡಗಳು ಮುಖಾಮುಖಿಯಾಗಿವೆ. ಮಳೆಯಿಂದಾಗಿ ಟಾಸ್ ಎರಡು ಗಂಟೆಗಳ ಕಾಲ ವಿಳಂಬವಾಯಿತು. ದಕ್ಷಿಣ ಆಫ್ರಿಕಾ ಟಾಸ್ ಗೆದ್ದು ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ದಕ್ಷಿಣ ಆಫ್ರಿಕಾ ತಂಡದ ಎಲ್ಲಾ ಲೆಕ್ಕಚಾರವನ್ನು ಭಾರತ ತಂಡದ ಆರಂಭಿಕ ಜೋಡಿ ಉಲ್ಟಾ ಮಾಡಿದೆ. ಟೀಮ್ ಇಂಡಿಯಾ ಪರ ಸ್ಮೃತಿ ಮಂಧಾನ ಮತ್ತು ಶೆಫಾಲಿ ವರ್ಮಾ ಜೋಡಿ ತಮ್ಮ ಹೆಸರನ್ನು ಸುವಾರ್ಣಾಕ್ಷರಗಳಲ್ಲಿ ಕೆತ್ತಿದ್ದಾರೆ. ಸ್ಮೃತಿ ಮಂಧಾನ ಮತ್ತು ಶೆಫಾಲಿ ವರ್ಮಾ ಜೋಡಿ ಶತಕದ ಜೊತೆಯಾಟ ಆಡುವ ಮೂಲಕ ದಾಖಲೆ ಮಾಡಿದ್ದಾರೆ. ಸ್ಮೃತಿ ಭಾರತದ ಪುರುಷ ಅಥವಾ ಮಹಿಳಾ ತಂಡದ ಯಾವುದೇ ಜೋಡಿ ನಾಕೌಟ್ ಪಂದ್ಯದಲ್ಲಿ ಇದುವರೆಗೆ ಸಾಧಿಸದ ದಾಖಲೆಯನ್ನು ಮಂಧಾನ ಮತ್ತು ಶಫಾಲಿ ವರ್ಮಾ ಜೋಡಿ ಸೃಷ್ಟಿಸುವ ಮೂಲಕ ಇತಿಹಾಸದ ಪುಟಗಳಿಗೆ ತಮ್ಮ ಹೆಸರನ್ನು ಸೇರಿಸಿಕೊಂಡಿದ್ದಾರೆ.



**ದಾಖಲೆ ಜೊತೆಯಾಟ:** ಮಹಿಳಾ ಏಕದಿನ ವಿಶ್ವಕಪ್ 2025 ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ತಂಡದ ಪರ ಸ್ಮೃತಿ ಮಂಧಾನ ಮತ್ತು ಶೆಫಾಲಿ ವರ್ಮಾ ಜೋಡಿ 106 ಎಸೆತಗಳಲ್ಲಿ 104 ರನ್ ಕಲೆ ಹಾಕಿದರು. ಈ ಶತಕದ ಜೊತೆಯಾಟ ಇದುವರೆಗೆ ಭಾರತದ ಪುರುಷ ಅಥವಾ ಮಹಿಳಾ ತಂಡದ ಯಾವುದೇ ಜೋಡಿ ಯಾವುದೇ ಮಾದರಿ (ಏಕದಿನ, ಟಿ20) ನಾಕೌಟ್ ಪಂದ್ಯದಲ್ಲಿ ಸಾಧಿಸದ ದಾಖಲೆ ಆಗಿದೆ. ಈಗ ಸ್ಮೃತಿ ಮಂಧಾನ ಮತ್ತು ಶೆಫಾಲಿ ವರ್ಮಾ ಜೋಡಿ ನಾಕೌಟ್ ಪಂದ್ಯದಲ್ಲಿ ಈ ದಾಖಲೆ ಸೃಷ್ಟಿಸಿದೆ.

ಮಂಧಾನ ಮತ್ತು ಶೆಫಾಲಿ ಅಬ್ಬರ

ಸ್ಮೃತಿ ಮಂಧಾನ 58 ಎಸೆತಗಳಲ್ಲಿ 8 ಬೌಂಡರಿ ನೆರವಿನಿಂದ 45 ರನ್ ಗಳಿಸಿ ಔಟಾದರು.

# 4 ಭರ್ಜರಿ ಸಿಕ್ಸ್, 11 ಫೋರ್ ಶತಕದಂಚಿನಲ್ಲಿ ಎಡವಿದ ರಿಷಭ್ ಪಂತ್



**ಕಂಬ್ಯಾಕ್ ಪಂದ್ಯದಲ್ಲೇ ಅಬ್ಬರ**

ಸೌತ್ ಆಫ್ರಿಕಾ ಎ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ಎ ತಂಡ ಗೆಲುವು ದಾಖಲಿಸಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡದಿ ಸೌತ್ ಆಫ್ರಿಕಾ ಮೊದಲ ಇನಿಂಗ್ಸ್‌ನಲ್ಲಿ 309 ರನ್‌ಗಳಿಸಿದರೆ, ಭಾರತ 234 ರನ್ ಕಲೆಹಾಕಿತು. ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಸೌತ್ ಆಫ್ರಿಕಾ ಕೇವಲ 199 ರನ್‌ಗಳಿಗೆ ಆಲೌಟ್ ಆಗಿದೆ. ಅದರಂತೆ ಕೊನೆಯ ಇನಿಂಗ್ಸ್‌ನಲ್ಲಿ 275 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾ ಇದೀಗ ರೋಚಕ ಗೆಲುವು ದಾಖಲಿಸಿದೆ. ಟೀಮ್ ಇಂಡಿಯಾದ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಕಂಬ್ಯಾಕ್ ಪಂದ್ಯದಲ್ಲೇ ಅಬ್ಬರಿಸಿದ್ದಾರೆ. ಸೌತ್ ಆಫ್ರಿಕಾ ಎ ವಿರುದ್ಧದ ಪಂದ್ಯದಲ್ಲಿ ಭಾರತ ಎ ತಂಡದ ನಾಯಕನಾಗಿ ಕಣಕ್ಕಿಳಿದಿರುವ ಪಂತ್ ಆಕರ್ಷಕ ಅರ್ಧಶತಕ ಸಿಡಿಸಿ ಮಿಂಚಿದ್ದಾರೆ.

ಬೆಂಗಳೂರಿನ ಸೆಂಟ್ರಲ್ ಆಫ್ ಎಕ್ಸಲೆನ್ಸ್ ಮೈದಾನದಲ್ಲಿ ನಡೆಯುತ್ತಿರುವ ಈ ಪಂದ್ಯದ ದ್ವಿತೀಯ ಇನಿಂಗ್ಸ್‌ನಲ್ಲಿ 5ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ರಿಷಭ್ ಪಂತ್ ವಿಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿದರು. ಆರಂಭದಿಂದಲೇ ಬಿರುಸಿನ ಬ್ಯಾಟಿಂಗ್‌ಗೆ ಒತ್ತು ನೀಡಿದ ಎಡಗೈ ದಾಂಡಿಗ ಸೌತ್ ಆಫ್ರಿಕಾ ಬೌಲರ್‌ಗಳ ಬೆಂಡೆತ್ತಿದರು. ಪರಿಣಾಮ ರಿಷಭ್ ಪಂತ್ ಬ್ಯಾಟ್‌ನಿಂದ 65 ಎಸೆತಗಳಲ್ಲಿ ಅರ್ಧಶತಕ ಮೂಡಿಬಂತು. ಈ ಅರ್ಧಶತಕದ ಬಳಿಕ ಕೂಡ ಸಿಡಿಲಬ್ಬರದ ಮುಂದುವರೆಸಿದ ಪಂತ್ 113 ಎಸೆತಗಳಲ್ಲಿ 4 ಭರ್ಜರಿ ಸಿಕ್ಸರ್ ಹಾಗೂ 11 ಫೋರ್‌ಗಳೊಂದಿಗೆ 90 ರನ್ ಬಾರಿಸಿದರು.


ಆದರೆ ಶತಕದಂಚಿನಲ್ಲಿ ಬಿರುಸಿನ ಹೊಡೆತಕ್ಕೆ ಮುಂದಾದ ರಿಷಭ್ ಪಂತ್ ಸೌತ್ ಆಫ್ರಿಕಾ ಟಿಯಾನ್ ವ್ಯಾನ್ ವುರೆನ್ ಎಸೆತದಲ್ಲಿ ರಿವಾಲ್ಡೊಗೆ ಕ್ಯಾಚ್ ನೀಡಿ ನಿರ್ಗಮಿಸಿದರು.

ಪಂತ್ ಔಟಾದ ಬಳಿಕ ಟೀಮ್ ಇಂಡಿಯಾದ ಗೆಲುವಿನ ನೊಗ ಹೊತ್ತ ಅನ್ಶುಲ್ ಕಂಬೋಜ್ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಅಂತಿಮ ಹಂತದಲ್ಲಿ ಅನ್ಶುಲ್ ಕಂಬೋಜ್ ಬಾರಿಸಿದ 37 ರನ್‌ಗಳ ನೆರವಿನೊಂದಿಗೆ ಟೀಮ್ ಇಂಡಿಯಾ 277 ರನ್‌ಗಳ ಗುರಿ ತಲುಪಿತು. ಈ ಮೂಲಕ ಸೌತ್ ಆಫ್ರಿಕಾ ಎ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು 3 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.

# ಐತಿಹಾಸಿಕ ಗೆಲುವು ದಾಖಲಿಸಿದ ಟೀಂ ಇಂಡಿಯಾ

ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ 5 ಪಂದ್ಯಗಳ ಟಿ20 ಸರಣಿಯ 3ನೇ ಪಂದ್ಯದಲ್ಲಿ ಟೀಂ ಇಂಡಿಯಾ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಹೋಬಾರ್ಟ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಆಸ್ಟ್ರೇಲಿಯಾ ನೀಡಿದ 186 ರನ್‌ಗಳ ಗುರಿಯನ್ನು ಸೂರ್ಯಕುಮಾರ್ ಪಡೆ ಯಶಸ್ವಿಯಾಗಿ ಬೆನ್ನಟ್ಟಿ ಸರಣಿಯನ್ನು 1-1ರಿಂದ ಸಮಬಲಗೊಳಿಸಿದೆ. ಮೊದಲ ಪಂದ್ಯ ಮಳೆಯಿಂದ ರದ್ದಾಗಿದ್ದು, 2ನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ಗೆದ್ದಿತ್ತು. ಭಾರತದ ಈ ಗೆಲುವು ಸರಣಿಯಲ್ಲಿ ಮಹತ್ವದ್ದಾಗಿದೆ.

ಹೋಬಾರ್ಟ್‌ನಲ್ಲಿ ನಡೆದ ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ಐದು ಪಂದ್ಯಗಳ ಟಿ20 ಸರಣಿಯ ಮೂರನೇ ಪಂದ್ಯವನ್ನು ಟೀಂ ಇಂಡಿಯಾ 5 ವಿಕೆಟ್‌ಗಳಿಂದ ಗೆದ್ದುಕೊಂಡು ಸರಣಿಯನ್ನು 1-1 ರಿಂದ ಸಮಬಲಗೊಳಿಸಿದೆ. ವಾಸ್ತವವಾಗಿ ಉಭಯ ತಂಡಗಳ ನಡುವಿನ ಮೊದಲ ಪಂದ್ಯ ಮಳೆಯಿಂದ ರದ್ದಾಗಿತ್ತು. ಆ ಬಳಿಕ ಮೆಲ್ಬೋರ್ನ್‌ನಲ್ಲಿ ನಡೆದ ಎರಡನೇ ಟಿ20 ಪಂದ್ಯವನ್ನು ಆತಿಥೇಯ ಆಸ್ಟ್ರೇಲಿಯಾ ಗೆದ್ದುಕೊಂಡಿತ್ತು. ಇದೀಗ ಇಂದು ನಡೆದ ಮೂರನೇ ಟಿ20 ಪಂದ್ಯವನ್ನು ಗೆದ್ದುಕೊಳ್ಳುವ ಮೂಲಕ ಸೂರ್ಯಕುಮಾರ್ ಪಡೆ ಟಿ20 ಸರಣಿಯಲ್ಲಿ ತನ್ನ ಗೆಲುವಿನ ಖಾತೆ ತೆರೆದಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 186 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ಟೀಂ ಇಂಡಿಯಾ ಇನ್ನು 9 ಎಸೆತಗಳು ಬಾಕಿ ಇರುವಂತೆಯೇ 5 ವಿಕೆಟ್‌ಗಳನ್ನು ಕಳೆದುಕೊಂಡು ಗೆಲುವಿನ ದಡ ಮುಟ್ಟಿತು.



# ಡೇವಿಡ್ ತೋಳ್ಬಲಕ್ಕೆ 129 ಮೀ. ದೂರ ಬಿದ್ದ ಚೆಂಡು..!



**23 ಎಸೆತಗಳಲ್ಲಿ ಅರ್ಧಶತಕ**

ಹೋಬಾರ್ಟ್‌ನಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ನಡೆಯುತ್ತಿರುವ ಮೂರನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ಪರ ಸ್ಟಾರ್ ಆಲ್‌ರೌಂಡರ್ ಟಿಮ್ ಡೇವಿಡ್ ತಮ್ಮ ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಅಭಿಮಾನಿಗಳನ್ನು ರಂಜಿಸಿದ್ದಾರೆ. ಡೇವಿಡ್ ಕೇವಲ 23 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು. ಇದರಲ್ಲಿ ಇನ್ನೊಂದು ಅದ್ಭುತವಾದ ವಿಷಯವೆಂದರೆ ಟಿಮ್ ಡೇವಿಡ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇದುವರೆಗೆ ಯಾರು ಬಾರಿಸಲಾಗದ ಅತಿ ಉದ್ದದ ಸಿಕ್ಸರ್ ಅನ್ನು ಬಾರಿಸಿ ವಿಶ್ವದಾಖಲೆ ಸೃಷ್ಟಿಸಿದ್ದಾರೆ. ಭಾರತದ ಸ್ಪಿನ್ನರ್ ಅಕ್ಷರ್ ಪಟೇಲ್ ಅವರ ಓವರ್‌ನಲ್ಲಿ ಟಿಮ್ ಡೇವಿಡ್ ಬರೋಬ್ಬರಿ 129 ಮೀಟರ್ ಉದ್ದದ ಸಿಕ್ಸ್ ಬಾರಿಸಿದರು, ಇದು ಅಂತರರಾಷ್ಟ್ರೀಯ ಕ್ರಿಕೆಟ್ ಇತಿಹಾಸದಲ್ಲಿ ಅತಿ ಉದ್ದದ ಸಿಕ್ಸ್ ಆಗಿದೆ. ಮೆಲ್ಬೋರ್ನ್ ಟಿ20ಯಲ್ಲಿ, ಆಸ್ಟ್ರೇಲಿಯಾದ ನಾಯಕ ಮಿಚೆಲ್ ಮಾರ್ಷ್ 124 ಮೀಟರ್‌ಗಳ ಸಿಕ್ಸ್ ಬಾರಿಸಿ ಅತಿ ಉದ್ದದ ಸಿಕ್ಸರ್ ದಾಖಲೆಯನ್ನು ನಿರ್ಮಿಸಿದ್ದರು. ಇದೀಗ ಟಿಮ್ ಡೇವಿಡ್ ಅವರನ್ನೂ ಮೀರಿಸಿದ್ದಾರೆ. ಆಸ್ಟ್ರೇಲಿಯಾದ ಇನ್ನಿಂಗ್ಸ್‌ನ ಏಳನೇ ಓವರ್‌ನಲ್ಲಿ, ಟಿಮ್ ಡೇವಿಡ್ ಅಕ್ಷರ್ ಪಟೇಲ್ ಅವರನ್ನು ಎದುರಿಸಿದರು. ಅಕ್ಷರ್ ಪಟೇಲ್ ಬೌಲಿಂಗ್ ಮಾಡಿದ ಫುಲ್ ಲೆಂಗ್ತ್ ಎಸೆತವನ್ನು ಡೇವಿಡ್ ಬೌಲರ್ ತಲೆಯ ಮೇಲೆ ಹೊಡೆದರು.

ಚೆಂಡು ಹೋಬಾರ್ಟ್ ಕ್ರೀಡಾಂಗಣದ ಮೇಲ್ಛಾವಣಿಗೆ ಬಡಿದು, ಕೆಳಗೆ ಬಿತ್ತು. ಬರೋಬ್ಬರಿ ಆ ಸಿಕ್ಸರ್ 129 ಮೀಟರ್ ದೂರ ಹೋಗಿ ಬಿದ್ದಿತು. ಅಕ್ಷರ್ ಪಟೇಲ್ ಅವರ ಓವರ್‌ನಲ್ಲಿ ಡೇವಿಡ್ ಎರಡು ಸಿಕ್ಸರ್‌ಗಳನ್ನು ಬಾರಿಸಿದರು. ಮುಂದಿನ ಓವರ್‌ನಲ್ಲಿ ಅಬ್ಬರಿಸಿದ ಡೇವಿಡ್, ಶಿವಂ ದುಬೆ ಅವರ ಓವರ್‌ನಲ್ಲಿ ಮೂರು ಬೌಂಡರಿಗಳನ್ನು ಬಾರಿಸಿ ಕೇವಲ 23 ಎಸೆತಗಳಲ್ಲಿ ಅರ್ಧಶತಕ ಪೂರೈದರು. ಡೇವಿಡ್ ಕೇವಲ 38 ಎಸೆತಗಳಲ್ಲಿ 74 ರನ್ ಬಾರಿಸಿ ದುಬೆ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಈ ಇನ್ನಿಂಗ್ಸ್‌ನಲ್ಲಿ ವಿಶೇಷ ದಾಖಲೆಯನ್ನೂ ನಿರ್ಮಿಸಿದ ಟಿಮ್ ಡೇವಿಡ್, ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 100 ಸಿಕ್ಸರ್‌ಗಳನ್ನು ಪೂರೈಸಿದರು.

# ಬಿಸಿಸಿಐಗೆ ತಿರುಗೇಟು ನೀಡಿದ ಕರುಣ್



ರಣಜಿ ಟ್ರೋಫಿ 2025-26 ರಲ್ಲಿ ಕನ್ನಡಿಗ ಕರುಣ್ ನಾಯರ್ ಕೇರಳ ವಿರುದ್ಧ ಅಮೋಘ ದ್ವಿಶತಕ ಬಾರಿಸಿದ್ದಾರೆ. ಈ ಮೂಲಕ ಅದ್ಭುತ ಫಾರ್ಮ್ ಪ್ರದರ್ಶಿಸಿರುವ ಕರುಣ್, ಗೋವಾ ವಿರುದ್ಧವೂ 174 ರನ್ ಗಳಿಸಿದ್ದರು. ಭಾರತ ಟೆಸ್ಟ್ ತಂಡಕ್ಕೆ ಮರಳಲು ಹವಣಿಸುತ್ತಿರುವ ಕರುಣ್, ಸತತ ಉತ್ತಮ ಪ್ರದರ್ಶನ ನೀಡುವ ಮೂಲಕ ಆಯ್ಕೆದಾರರ ಗಮನ ಸೆಳೆಯುವ ಇರಾದೆಯಲ್ಲಿದ್ದಾರೆ. ಕರುಣ್ ಅವರ ಈ ಶತಕ ಮತ್ತೆ ಭಾರತ ತಂಡದಲ್ಲಿ ಸ್ಥಾನ ಪಡೆಯುವ ಭರವಸೆ ಮೂಡಿಸಿದೆ. 2025-26 ರ ರಣಜಿ ಟ್ರೋಫಿಯಲ್ಲಿ ಕನ್ನಡಿಗ ಕರುಣ್ ನಾಯರ್ ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಗೋವಾ ವಿರುದ್ಧದ ರಣಜಿ ಪಂದ್ಯದಲ್ಲಿ ದ್ವಿಶತಕ ಬಾರಿಸುವಲ್ಲಿ ವಿಫಲರಾಗಿದ್ದ ಕರುಣ್, ಇದೀಗ ಕೇರಳ ತಂಡದ ವಿರುದ್ಧ ತಮ್ಮ ಶತಕವನ್ನು ದ್ವಿಶತಕವನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉಭಯ ತಂಡಗಳ ನಡುವಿನ ಪಂದ್ಯದ ಮೊದಲ ದಿನದಂದು ಶತಕ ಬಾರಿಸಿ ಅಜೇಯರಾಗಿ ಉಳಿದಿದ್ದ ಕರುಣ್, ಇದೀಗ ಎರಡನೇ ದಿನದಾಟದಂದು ಅಮೋಘ ದ್ವಿಶತಕ ಬಾರಿಸಿ ಮಿಂಚಿದ್ದಾರೆ. ಈ ಮೂಲಕ ಮತ್ತೆ ಭಾರತ ಟೆಸ್ಟ್ ತಂಡದಲ್ಲಿ ಅವಕಾಶ ಗಿಟ್ಟಿಸಿಕೊಳ್ಳುವ ಇರಾದೆಯಲಿದ್ದಾರೆ.ರಣಜಿ ಟ್ರೋಫಿಯ ಮೂರನೇ ಸುತ್ತಿನ ಪಂದ್ಯಗಳು ಅಕ್ಟೋಬರ್ 1 ರಿಂದ ಆರಂಭವಾಗಿವೆ. ಅದರಂತೆ ಕರ್ನಾಟಕ ಮತ್ತು ಕೇರಳ ತಂಡಗಳು ಮಂಗಳಪುರಂನಲ್ಲಿ ಪರಸ್ಪರ ಮುಖಾಮುಖಿಯಾಗಿವೆ. ಈ ಪಂದ್ಯದಲ್ಲಿ ಕರ್ನಾಟಕದ ಅನುಭವಿ ಬ್ಯಾಟ್ಸ್‌ಮನ್ ಕರುಣ್ ನಾಯರ್ ಸ್ಮರಣೀಯ ಇನ್ನಿಂಗ್ಸ್ ಆಡಿದ್ದು, ಮೊದಲ ಇನ್ನಿಂಗ್ಸ್‌ನಲ್ಲಿ ದ್ವಿಶತಕ ಬಾರಿಸಿದ್ದಾರೆ. ವಾಸ್ತವವಾಗಿ ಕರುಣ್ ಬ್ಯಾಟಿಂಗ್‌ಗೆ ಇಳಿದಾಗ ತಂಡವು ಕೇವಲ 13 ರನ್‌ಗಳಿಗೆ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತ್ತು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966